ಎಲೆ ಮರೆಯ ಹೂ

ನವವೃಂದಾವನದ

ವಿಷ್ಣುತೀರ್ಥರ ಸಂಕ್ಷಿಪ್ತ ಜೀವನಚರಿತ್ರೆ



ಲೇಖಕರು : ಪಿ. ಪ್ರಹ್ಲಾದರಾವ್

ಎಲೆ ಮರೆಯ ಹೂ

ನವವೃಂದಾವನದ

ವಿಷ್ಣುತೀರ್ಥರ ಸಂಕ್ಷಿಪ್ತ ಜೀವನಚರಿತ್ರೆ

ಲೇಖಕರು :

ಪಿ. ಪ್ರಹ್ಲಾದರಾವ್ ಎಂ. ಎ.

ಪ್ರಕಾಶಕರು :

ಪಿ. ವ್ಯಾಸತೀರ್ಥ

'ನವವೃಂದಾವನ'

931, 2ನೇ ಮುಖ್ಯರಸ್ತೆ, ನಾಲ್ಕನೇ ಬ್ಲಾಕ್

ರಾಜಾಜಿನಗರ : : ಬೆಂಗಳೂರು 560 010

ELE MAREYA HOO—(Biography of Sri Vishnuthirtha) by P. Prahlada Rao, published by P. Vyasathirtha, 'Nava-vrindavana', 931, II Main Road, IV Block, Rajajinagar, Bangalore 560 010

© ಲೇಖಕರು

ರೂ. 20

ಮುದ್ರಣ :

ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು 14



ನದಿಯ ದಡದಲ್ಲಿ ವಿಷ್ಣುತೀರ್ಥರು

(ಚಿತ್ರಗಾರರು : ಶ್ರೀರಘೂತ್ತಮ ಪುಟ್ಟಿ-ಫೋಟೊ ನೋಡಿ ಬರೆದದ್ದು)

ಪ್ರಸ್ತಾವನೆ

"Full many a gem of purest ray serene
The dark unfathomed caves of ocean bear ;
Full many a flower is born to blush unseen
And waste its sweetness on the desert air."

—*Thomas Gray*

ಅಂದರೆ, ಅತ್ಯಂತ ಉಜ್ವಲವಾದ ರತ್ನರಾಶಿಗಳು ಸಾಗರದಡಿಯ ಗುಹೆಗಳಲ್ಲಿ ಅಡಗಿರುತ್ತವೆ. ಲೆಕ್ಕವಿಲ್ಲದಷ್ಟು ಹೂವುಗಳು ಕೇಳರಿಯದ ಮರುಭೂಮಿಗಳಲ್ಲಿ ಹುಟ್ಟಿ, ಅರಳಿ, ತಮ್ಮ ಸುವಾಸನೆಯನ್ನು ಬೀರಿ ಅಳಿದುಹೋಗುತ್ತವೆ. ಅಂತೆಯೇ, ಎಷ್ಟೋ ಜನ ವಿದ್ಯಾವಂತರು, ಜ್ಞಾನಿಗಳು, ದೈವಭಕ್ತರು, ಸಾಧು ಸಂತರು ನಮ್ಮ ಕರ್ಮಭೂಮಿಯಲ್ಲಿ ಜನಿಸಿ, ಎಲ್ಲೆಲ್ಲೋ ಹೇಗೆ ಹೇಗೋ ಇದ್ದುಕೊಂಡು ಅಗೋಚರವಾಗಿ ಅದ್ಭುತ ಸಾಧನೆಗಳನ್ನು ಮಾಡುತ್ತಾ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡು, ತಮ್ಮ ನಿಕಟ ಸಂಪರ್ಕ ಹೊಂದಿದ ಜನತೆಯ ಮೇಲೂ ಅಚ್ಚಳಿಯದ ಪ್ರಭಾವವನ್ನು ಬೀರುತ್ತಾ ಬಂದಿದ್ದಾರೆ. ಇಂತಹವರ ಗುಂಪಿಗೆ ಈ ಕಿರುಹೊತ್ತಿಗೆಯ ವಿಷಯಿಕ ವ್ಯಕ್ತಿಯಾದ ನವವೃಂದಾವನದ ವಿಷ್ಣುತೀರ್ಥರೂ ಸೇರಿದವರು.

ಈ ಹೊತ್ತಗೆಯನ್ನು ಹೊರತಂದುದಕ್ಕೆ ಶ್ರೀಮಾನ್ ಶ್ರೀಶಮೂರ್ತಿಗಳೇ ಮುಖ್ಯಕಾರಣರು. ಅವರು ತಮ್ಮ ಆನಂದ್ ಪ್ರಿಂಟರ್ಸ್ ಮುಖೇನ ಪ್ರಕಟಿಸುತ್ತಿರುವ ಮಾಸಪತ್ರಿಕೆ 'ವಾಸುದೇವಪದಸಂತತಸಂಗಿ'ಯಲ್ಲಿ ವಿಷ್ಣುತೀರ್ಥರಿಂದ ರಚಿತವಾದ "ನಖಸ್ತುತಿ"ಯನ್ನು ಧಾರಾವಾಹಿಯಾಗಿ ಪ್ರಕಟಿಸಿದರು. ಅದು ಬಹಳ ಯಶಸ್ವಿಯಾಯಿತು. ಅನಂತರ ಆ ಲೇಖಕರಿಂದಲೇ ಬರೆಯಲ್ಪಟ್ಟ "ಶ್ರೀಹರಿ ವಾಯುಸ್ತುತಿ" ಲೇಖನದ ವಿವರಣೆ ಬೃಹದಾಕಾರವಾಗಿ ಬೆಳೆದು ನಾಲ್ಕು ಭಾಗಗಳ ಪುಸ್ತಕರೂಪದಲ್ಲಿ ಮುದ್ರಿತವಾಯಿತು. ಅದೂ ಅಲ್ಲದೆ, ಅವರಿಂದ ಬರೆಯಲ್ಪಟ್ಟ "ದೇವಪೂಜಾಪದ್ಧತಿ" ಹಾಗೂ "ಅಷ್ಟಮಹಾಮಂತ್ರಗಳು" ಧಾರವಾಹಿಯಾಗಿ ಪ್ರಕಟವಾಗುತ್ತಿವೆ. ಅವರ "ಯಜ್ಞೋಪವೀತಪ್ರತಿಷ್ಠಾ", "ಮುಖ್ಯಪ್ರಾಣಾಭಿಷೇಕವಿಧಿ" ಇತ್ಯಾದಿಗಳು ನಿತ್ಯೋಪಯುಕ್ತವಾಗಿವೆ. ಈ ಯಶಸ್ಸಿನ

ಹಾದಿಯಲ್ಲಿ ಮುಂದುವರಿಯುತ್ತಿರುವಾಗಲೇ ಶ್ರೀ ಶ್ರೀಶಮೂರ್ತಿಗಳು ತಮ್ಮ ಪತ್ರಿಕೆಯ ಉಸಿರಂತಿರುವ ವಿಷ್ಣುತೀರ್ಥರ ಪರಿಚಯವನ್ನು ತಮ್ಮ ಓದುಗರಿಗೆ ಮಾಡಿಕೊಡುವ ಹಂಬಲದಿಂದ ತೀರ್ಥರ ತಮ್ಮಂದಿರಾದ ಶ್ರೀ ಪ್ರಹ್ಲಾದರಾಯರನ್ನು ಸಂಪರ್ಕಿಸಿ ಅವರ ಅಣ್ಣಂದಿರ ಸಂಕ್ಷಿಪ್ತ ಜೀವನಚರಿತ್ರೆಯನ್ನು ಸುಮಾರು ನಾಲ್ಕು ಪುಟಗಳಲ್ಲಿ ಬರೆದು ಕೊಡುವಂತೆ ಅರಿಕೆ ಮಾಡಿಕೊಂಡರು. ಅದಕ್ಕೊಪ್ಪಿ ಪ್ರಹ್ಲಾದರಾಯರು ವಿಷ್ಣುತೀರ್ಥರ ಜೀವನಚರಿತ್ರೆಯನ್ನು ಬರೆಯಲು ಆರಂಭಿಸಿ ಅವರ ಜೀವನದ ಹಿಂದಿನದನ್ನೆಲ್ಲಾ ಜ್ಞಾಪಿಸಿಕೊಂಡು ಮುಖ್ಯಾಂಶಗಳನ್ನು ಗುರುತು ಹಾಕಿಕೊಳ್ಳುತ್ತಾ ಹೋದರು. ಅದೇ ಸುಮಾರು ೮೦ ಪುಟಗಳಷ್ಟಾದುವು. ಅದರಿಂದ ಶ್ರೀಶಮೂರ್ತಿಗಳು ತಮಗೆ ಬೇಕಾದ ಹಾಗೂ ಸುಮಾರು ೪ ಪುಟಗಳಲ್ಲಿ ಅಡಕವಾಗುವಷ್ಟು ವಿಷಯಗಳನ್ನು ಮಾತ್ರ ಆರಿಸಿಕೊಂಡು ತಮ್ಮ ಪತ್ರಿಕೆಯ ಒಂದು ಸಂಚಿಕೆಯಲ್ಲಿ (೧೩–೩, ಮಾರ್ಚ್ ೧೧, ೧೯೮೦) ಪ್ರಕಟಿಸಿದರು. ಅನಂತರ ವಿಷ್ಣುತೀರ್ಥರ ಇಡೀ ಜೀವನಚರಿತ್ರೆಯನ್ನು ಇನ್ನೂ ವಿವರವಾಗಿ ಪ್ರಕಟಿಸಬೇಕೆಂದು ಓದುಗರಿಂದ ಶ್ರೀಶಮೂರ್ತಿಗಳಿಗೆ ಆಗ್ರಹ ಬಂತು. ಅದರ ಪರಿಣಾಮವೇ ಈ ಕಿರುಹೊತ್ತಗೆ.

ಪ್ರಹ್ಲಾದರಾಯರು ವಿಷ್ಣುತೀರ್ಥರ ಖಾಸಾ ತಮ್ಮನಾಗಿದ್ದು, ಇಬ್ಬರೂ ಒಟ್ಟಿಗೆ ಓದಿ, ಬೆಳೆದು, ಅನೇಕ ದಶಕಗಳವರೆಗೆ ಸಹೋದ್ಯೋಗಿಗಳೂ (Private Tutors) ಆಗಿದ್ದು, ಇಬ್ಬರೂ ಆಗಿಂದಾಗ್ಗೆ ಅನೇಕ ವಿಷಯಗಳನ್ನು ಕುರಿತು ಚರ್ಚಿಸಿ ಚರ್ವಣ ಮಾಡಿಕೊಳ್ಳುತ್ತಲಿದ್ದುದರಿಂದ, ಅವರಿಗೆ ವಿಷ್ಣುತೀರ್ಥರ ಮಾನಸಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯನ್ನೂ, ಅವರ ಮೇಲೆ ಬಿದ್ದ ವಿಶಿಷ್ಟ ಪ್ರಭಾವಗಳನ್ನೂ ಅವುಗಳ ಪರಿಣಾಮಗಳನ್ನೂ ಕೂಲಂಕಷವಾಗಿ ಗುರುತಿಸಿ, ಅವನ್ನು ವೈಜ್ಞಾನಿಕವಾಗಿಯೂ, ಸಾಹಿತಿಕವಾಗಿಯೂ ನಿರೂಪಿಸಲು ಸಾಧ್ಯವಾಯಿತು. ಅವರ ಈ ಸಂಕ್ಷಿಪ್ತ ಜೀವನಚರಿತ್ರೆಯನ್ನು ಓದುವವರಿಗೆ ಕೆಲವಂಶಗಳು ಅತಿಶಯೋಕ್ತಿಯೆಂದು ಕಾಣಬಹುದು ; ಆದರೆ ಅವೆಲ್ಲವೂ ಸತ್ಯಸಂಶೋಧನೆಗೆ ಒಳಪಟ್ಟುವೆಂಬುದನ್ನು ಯಾರೂ ಮರೆಯಬಾರದು. ಈ ವಿಷಯವನ್ನು ಸಮರ್ಥಿಸುವುದಕ್ಕಾಗಿಯೇ ಲೇಖಕರು ವಿಷ್ಣುತೀರ್ಥರಿಗೆ ಅನೇಕ ವರ್ಷಗಳಿಂದ ಅನೇಕ ಪಂಡಿತರೂ, ಪಾಮರರೂ ಬರೆದ ಸಹಸ್ರಾರು ಪತ್ರಗಳಲ್ಲಿ ಕೆಲವನ್ನು ಆರಿಸಿಕೊಂಡು ಅವುಗಳಿಂದ ಕೆಲವು ಉದ್ಧೃತ ಭಾಗಗಳನ್ನು ಈ ಪುಸ್ತಕದ ಕಡೆಯ ಭಾಗದಲ್ಲಿ ಕೊಟ್ಟಿದ್ದಾರೆ.

ಶ್ರೀ ಶ್ರೀಶಮೂರ್ತಿಗಳ ಮಾತಿನಲ್ಲೇ ಹೇಳುವುದಾದರೆ, "ಈ ಎಲೆ ಮರೆಯ ಹೂವು—ವಿಷ್ಣುತೀರ್ಥ—ವಾಸ್ತವವಾಗಿ ಹೊರಗೆ ಕಾಣಿಸದಿದ್ದರೂ ತನ್ನ ನಿತ್ಯಜೀವನದ ಎಡರು–ತೊಡರುಗಳನ್ನು ದಾಟಿ ಯಾರ ಕೈಗೂ ಸಿಗದೆ ನವ ವೃಂದಾವನದಲ್ಲೇ ಸುಮಾರು ಇಪ್ಪತ್ತು ವರ್ಷಗಳು ಏಕಾಂಗಿಯಾಗಿ, ಸ್ವತಂತ್ರ ವಾಗಿದ್ದುಕೊಂಡು ಮಧ್ವಾಂತರ್ಗತ ಶ್ರೀಹರಿಯ ಅಚಲ ಸೇವೆ ಸಲ್ಲಿಸಿ ಕೃತಾರ್ಥ ರಾಗಿದ್ದಾರೆ. ಈ ವಿಷಯವನ್ನು ತಿಳಿಯಲಪೇಕ್ಷಿಸಿದ ಅವರ ಅಪಾರ ಮಿತ್ರರ, ಶಿಷ್ಯವೃಂದದ ಹಾಗೂ ಬಂಧುವರ್ಗದ ವಿಶ್ವಾಸಪೂರ್ವಕ ಬೇಡಿಕೆಯ ಫಲವೇ ಈ ಹೊತ್ತಗೆ."

ಇದನ್ನು ಪ್ರಕಟಿಸುವ ಸಲುವಾಗಿ ಅನೇಕ ಮಹನೀಯರು ಧನಸಹಾಯ ಮಾಡಲು ಮುಂದೆ ಬಂದರು. ಅವರ ಪೈಕಿ ಕೆಲವರ ಹೆಸರನ್ನಾದರೂ ಇಲ್ಲಿ ಸೂಚಿ ಸುವುದು ಸೂಕ್ತವೆನಿಸುತ್ತದೆ. ಅಮೆರಿಕದ ಫಿಲಡೆಲ್‌ಫಿಯಾದಲ್ಲಿರುವ ಡಾ|| ಜಯ ಲಕ್ಷ್ಮಿ ಮತ್ತು ಅವರ ಪತಿ ಡಾ || ಸಂಪತ್ ಎಂಟು ಸಹಸ್ರ ರೂಪಾಯಿಗಳನ್ನು ಕೊಟ್ಟರು. ಸೌಇಂಡಿಯಾದಲ್ಲಿ ಎಂಜಿನೀರ್ ಆಗಿರುವ ವಿಷ್ಣುತೀರ್ಥರ ಸೋದರ ಳಿಯ ಶ್ರೀಯುತ ಯತೀಂದ್ರಪುಟ್ಟಿ ತನ್ನ ಸೋದರಮಾವನಿಗೆ ಭಕ್ತಿ–ಗೌರವ ಗಳನ್ನು ಸಲ್ಲಿಸಲೋಸುಗವೋ ಎಂಬಂತೆ ಒಂದು ಸಾವಿರ ರೂಪಾಯಿಗಳನ್ನು ಅರ್ಪಿಸಿದನು. ಮುಂಬೈನಲ್ಲಿರುವ ಶ್ರೀ ಕೆ. ವಿ. ಉಪಾಧ್ಯೆ ಅವರು ಸಹಸ್ರಾರು ರೂಪಾಯಿ ಖರ್ಚು ಮಾಡಿ ವಿಷ್ಣುತೀರ್ಥರ ಮತ್ತು ಅವರ ತಂದೆ ತಾಯಿಗಳ ಹಾಗೂ ಅವರ ಕೂಡಲೀ ಮಠದಿಂದ ಸನ್ಮಾನಿತರಾದ ವರ್ಣಚಿತ್ರಗಳ ಐದು ಅಚ್ಚುಗಳನ್ನು ತಯಾರಿಸಿ ಮುದ್ರಿಸಿಕೊಟ್ಟರು. ಬೆಂಗಳೂರಿನ ಡಾ|| ಯಮುನಾ ಅವರು ವಿಷ್ಣುತೀರ್ಥರ ಹಿತೈಷಿಗಳೂ ಮೆಚ್ಚಿನ ಚಿಕ್ಕಮ್ಮಂದಿರೂ ಆದ ಕೀರ್ತಿ ಶೇಷ ಶೃಂಗಾರಮ್ಮನವರ ವರ್ಣಚಿತ್ರವನ್ನು ತಯಾರುಮಾಡಿಸಿ ಕೊಟ್ಟರು. ಹೀಗೆಯೇ ಇನ್ನೂ ಅನೇಕರ ಸಹಾಯ–ಸಹಕಾರಗಳಿಂದ ಈ ಹೊತ್ತಗೆ ಹೊರ ಬಂದಿದೆ. ಅವರೆಲ್ಲರಿಗೂ ಲೇಖಕರು ಮತ್ತು ಪ್ರಕಾಶಕರು ಋಣಿಯಾಗಿದ್ದಾರೆ. ಓದುಗರು ಈ ಪುಸ್ತಕವನ್ನು ಒಮ್ಮೆ ತಿರುವಿಹಾಕಿ ಸಂತಸಗೊಂಡರೆ ಲೇಖಕನ ಹಾಗೂ ಪ್ರಕಾಶಕರ ಶ್ರಮ ಸಾರ್ಥಕವಾಗುತ್ತದೆ.

ಆಪ್ತರಿಗೆಂದೇ ಕೇವಲ ಮಿತವಾದ ಪ್ರತಿಗಳನ್ನು ಮುದ್ರಣಮಾಡಿಸಲಾಗಿದೆ ಯಾದರೂ ಬೆಳಗಾವಿ ಶ್ರೀ ಗುರುರಾಜ ಬಾಡಗಂಡಿಯವರು ಹೇಳಿದಂತೆ ಇನ್ನೂ ಅನೇಕರು ತಮಗೂ ಒಂದೊಂದು ಪ್ರತಿ ಬೇಕೆಂದು ಕೇಳಿದುದರಿಂದ ಇದರ ಆವಶ್ಯಕತೆ ಇರುವವರಿಗೂ ಅದು ತಲಪುವಂತಾಗಲೆಂಬ ದೃಷ್ಟಿಯಿಂದ ಒಂದು

ಬೆಲೆಯಿಡಲಾಗಿದೆ. ವಿಷ್ಣುತೀರ್ಥರಿಂದ ಸಿದ್ಧಪಡಿಸಲಾಗುತ್ತಲಿರುವ ಪುರುಷ ಸೂಕ್ತ, ಅಣುಭಾಷ್ಯಾದಿ ಗ್ರಂಥಗಳ ಮುದ್ರಣಕ್ಕೆ ಹಣದ ಕೊರತೆ ಇರುವುದರಿಂದ ಈ ಗ್ರಂಥದಿಂದ ಬರುವ ಹಣವನ್ನು ಆ ಪ್ರಕಟಣೆಗಳಿಗೆ ಅನುವಾಗುವಂತೆ ಉಪಯೋಗಿಸಲಾಗುವುದು.

ಪಿ. ಪ್ರಹ್ಲಾದರಾವ್

ಶ್ರೀ ಶ್ರೀಪಾದರಾಜ ಮಠಾಧೀಶರ ಆಶೀರ್ವಾದ

ಶ್ರೀ ಗೋಪೀನಾಥೋ ವಿಜಯತೇ

ಶ್ರೀ ಶ್ರೀಪಾದರಾಜ ಮೂಲಬೃಂದಾವನ ಸನ್ನಿಧಾನ

ನರಸಿಂಹತೀರ್ಥ, ಮುಳಬಾಗಲು–೫೬೩ ೧೩೧

ವಿಷ್ಣುತೀರ್ಥರು ನಮಗೆ ಸುಮಾರು ಮೂವತ್ತು ವರುಷಗಳಿಂದ ಪರಿಚಯಸ್ಥರು. ನಾವು ಎಂದು ಅವರನ್ನು ಯಾವ ರೀತಿಯಲ್ಲಿ ಪ್ರಥಮದಲ್ಲಿ ಭೇಟಿ ಮಾಡಿದೆವೋ ಈವರೆಗೂ ಅದರಲ್ಲಿ ಯಾವ ಬದಲಾವಣೆಯೂ ಇಲ್ಲದೆ ಹಾಗೇ ಕಾಣುತ್ತಿರುವರು; ಅದು ಅವರ ಬ್ರಹ್ಮಚರ್ಯದ ತೇಜಸ್ಸು. ಇವರನ್ನು ನೋಡಿದವರ್‍ಯಾರೂ ಇವರನ್ನು ಪುನಃ ಭೇಟಿ ಮಾಡದಿರುವುದಿಲ್ಲ. ಋಷಿಗಳ ವಿಷಯಗಳು ಇತಿಹಾಸ–ಪುರಾಣಾದಿಗಳಿಂದ ಶ್ರುತವಾಗಿತ್ತು. ಈಗಿನ ಕಾಲದಲ್ಲಿ ಇವರು ಋಷಿಗಳ ಪರಿಚಯ ಮಾಡಿಸುವಂಥ ವ್ಯಕ್ತಿ. ಸರಳ ಸ್ವಭಾವವುಳ್ಳವರು, ಆಳವಾದ ಶಾಸ್ತ್ರಾಧ್ಯಯನ ಮಾಡಿದವರು, ಜನಪ್ರಿಯರು ಹಾಗೂ ಸಹೃದಯರು. ಇವರ ಎಂಬತ್ತನೇ ವಯಸ್ಸಿನ ಸವಿನೆನಪಿಗಾಗಿ ಹೊರಬರುತ್ತಿರುವ ಈ ಸಂಚಿಕೆಯಿಂದ ಇವರ ವ್ಯಕ್ತಿತ್ವವು ಚೆನ್ನಾಗಿ ಪ್ರದರ್ಶಿಸಿದಂತಾಯಿತು. ಇವರ ಜೀವನ ಎಲ್ಲ ಸಜ್ಜನರಿಗೂ ಮಾದರಿಯಾಗಿ, ಇವರ ಶತಮಾನೋತ್ಸವ ನಡೆಯುವಂತಾಗಲೆಂದು ನಮ್ಮ ಆರಾಧ್ಯಮೂರ್ತಿ ಶ್ರೀ ಶ್ರೀ ಹಯವದನ ರಂಗವಿಠಲಾತ್ಮಕ ಶ್ರೀ ಶ್ರೀ ಗೋಪೀನಾಥದೇವರಲ್ಲಿ ಪ್ರಾರ್ಥಿಸುತ್ತ ಮಾಡುವ ನಾರಾಯಣಸ್ಮರಣೆಗಳು.

ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳು

'ಶ್ರೀ ವಿದ್ಯಾಶಂಕರ'

ಶ್ರೀ ವಿದ್ಯಾಶಂಕರ ವಿದ್ಯಾರಣ್ಯ ಮಲಯಾಳ ಬ್ರಹ್ಮ ವಿಜಯತೇ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಹಂಪಿ ವಿರೂಪಾಕ್ಷ ವಿದ್ಯಾರಣ್ಯ ಮಹಾಸಂಸ್ಥಾನಮ್, ಪಂಪಾಕ್ಷೇತ್ರಮ್

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಪದವಾಕ್ಯಪ್ರಮಾಣ,
ಪಾರಾವಾರಪಾರೀಣ, ಇತ್ಯಾದ್ಯನೇಕ ಬಿರುದುಭೂಷಿತರಾದ
ಶ್ರೀ ಶ್ರೀ ಸಚ್ಚಿದಾನಂದಾಭಿನವ ಶಂಕರಭಾರತೀ
ಮಹಾಸ್ವಾಮಿ ಗುರು ಕರಕಮಲಸಂಜಾತ
ಶ್ರೀ ಶ್ರೀಮಜ್ಜಗದ್ಗುರು

ಶ್ರೀಮದಭಿನವೋದ್ದಂಡ ನರಸಿಂಹಭಾರತೀ ಮಹಾಸ್ವಾಮಿಗಳವರು

ತಮ್ಮ ಪ್ರಿಯರಾದಂಥ

ಶ್ರೀ ಪಿ. ವಿಷ್ಣುತೀರ್ಥರಿಗೆ

ನಾರಾಯಣಸ್ಮರಣಪೂರ್ವಕ ನೀಡಿದ

ನಿರೂಪ

ನಮ್ಮ ಪರಮ ಆಪ್ತ ಆತ್ಮೀಯ ಮಿತ್ರರೂ, ಗುರು–ದೈವ–ಶ್ರದ್ಧಾ–ಭಕ್ತಿ ಸಂಪನ್ನರೂ, ಕನ್ನಡದಲ್ಲಿ ಪ್ರಥಮ ಬಾರಿಗೆ 'ಪಂಪಾಮಹಾತ್ಮೆ'ಯನ್ನು ಬೆಳಕಿಗೆ ತಂದವರೂ, ವಯೋವೃದ್ಧರೂ ಆದ ತಮ್ಮ ನೆನಪು ನಮ್ಮಲ್ಲಿ ಸದಾ ಉಳಿದಿದೆ. ನಮಗೂ ಶ್ರೀ ಕೂಡಲೀ ಹಿರಿಯ ಸನ್ನಿಧಾನಂಗಳವರಿಗೂ ಆಪ್ತರಾದ ತಮ್ಮನ್ನು ಈ ಶ್ರೀಮುಖದ ಮೂಲಕ

"ಗುರುಸೇವಾ ಧುರಂಧರ"

ಎಂಬ ಬಿರುದಿನಿಂದ ಗೌರವಿಸಿ, ನಮ್ಮ ಸಂಸ್ಥಾನ ಮತ್ತು

ಶ್ರೀ ಅಕ್ಕಯ್ಯಮ್ಮ ಬೆಟ್ಟದ ಬೆಂಗಳೂರು ಉತ್ತರ ತಾಲ್ಲೂಕು ನಗರ ಜಿಲ್ಲಾ **"ಧಾರ್ಮಿಕ ಚರಿತ್ರಾ ಸಲಹೆಗಾರ"**ರನ್ನಾಗಿ ನೇಮಿಸಲಾಗಿದೆ. ಇದರ ವ್ಯಾಪ್ತಿ ನಮ್ಮ ಸಂಚಾರದ ಏಳು ರಾಜ್ಯಗಳ ಒಳಗೊಂಡಿರುತ್ತದೆ. ಈ ಶ್ರೀಮುಖ ಸ್ವೀಕರಿಸಿದ ಬಗ್ಗೆ ತಮ್ಮ ಲಿಖಿತ ಉತ್ತರವನ್ನು ನಿರೀಕ್ಷಿಸಿರುವ,

ಸದಾ ತಮ್ಮ ಸೇವೆಗೆ ಸಿದ್ಧವಾಗಿರುವ

ಇತಿ ಆಶೀರ್ವಾದಗಳು
(ಶ್ರೀಗಳವರ ಹಸ್ತಾಕ್ಷರ)
ಶ್ರೀ ವಿ. ವಿ. ಸ್ವಾಮಿಗಳು

ಮೊಕ್ಕಾಂ : ನಾಂದೇಡ್
ತಾ|| ೨೧–೧೦–೧೯೯೧

ಬೊಂಬಾಯಿನ ಶ್ರೀ ಪ್ರಭಂಜನ ಕುಲಕರ್ಣಿಗಳ ಅನಿಸಿಕೆ

ಶ್ರೀ ವಿಷ್ಣುತೀರ್ಥರು—ನಾನು ಕಂಡಂತೆ

ಶ್ರೀ ಭಗವತ್ಪಾದರ ಪೂರ್ವಾಶ್ರಮದ ತಮ್ಮಂದಿರ, ಶ್ರೀ ಅರಣ್ಯಕಾಚಾರ್ಯರ, ಬಹು ಅಪರೂಪವಾದ, ಶ್ರವಣಮಂಗಲನಾಮ ಧೇಯರಾದ ಶ್ರೀ ಪಿ. ವಿಷ್ಣುತೀರ್ಥರು ತಮ್ಮ ಗ್ರಂಥಗಳ ಮೂಲಕ ಮಾಧ್ವಸಮಾಜದಲ್ಲಿ ತುಂಬಾ ಪರಿಚಿತರು.

ಸವಪ್ರೃಂದಾಸಸ್ಥ ಗುರುಕೃಪಾಪಾತ್ರರಾದ ಈ ಮಹಾನುಭಾವರಿಂದ ಶ್ರೀ ಹರಿವಾಯುಗುರುಗಳ ಬಗ್ಗೆ ಕೆಲ ಮಾತುಗಳನ್ನು ಕೇಳಬೇಕೆಂದು ಠಾಣಾದಲ್ಲಿಯ ಕೆಲವು ಭಕ್ತರ ಅಪೇಕ್ಷೆ ಇತ್ತು. ನಾನು ಅದನ್ನು ಅವರಿಗೆ ತಿಳಿಸಿದಾಗ "ಪ್ರಾತಸ್ಸಂಕಲ್ಪಗದ್ಯ"ದ ಅರ್ಥಾನುವಾದವನ್ನು ಹೇಳುತ್ತೇನೆಂದು ಒಪ್ಪಿಕೊಂಡರು.

ಗ್ರಂಥಕರ್ತೃಗಳಾದ ಮಂತ್ರಾಲಯ ಪ್ರಭುಗಳಿಂದ ಪ್ರಯೋಗಿಸಲ್ಪಟ್ಟ ಶ್ರೀಮದಾಚಾರ್ಯರ, ಪರಮಾತ್ಮನ ಹಾಗೂ ಶ್ರೀ ಮುಖ್ಯಪ್ರಾಣರ ವಿಶೇಷಣಗಳ ವಿಶೇಷಾರ್ಥಗಳನ್ನು ಕನ್ನಡಭಾಷೆಯಲ್ಲಿಯೂ ಇಂಗ್ಲೀಷಿನಲ್ಲಿಯೂ, ತಮ್ಮದೇ ಆದ ವಿಶಿಷ್ಟರೀತಿಯಲ್ಲಿ, ಅತಿ ಸುಲಭಶೈಲಿಯಲ್ಲಿ, ಮೂರು ಸತ್ರದಲ್ಲಿ ತಿಳಿಸಿ ಹೇಳಿದರು.

ಮೊದಲನೇ ವಿಶೇಷಣವಾದ—"ಲೌಕಿಕ.........ಪ್ರಣವೋಪಾಸಕಾನಾಂ" —ಈ ವಾಕ್ಯಾಂಶವನ್ನು ಬಹು ಪಾಂಡಿತ್ಯಪೂರ್ಣವಾಗಿ ಆಕೃತಿಸಹಿತ, ಮಂದಟ್ಟಾಗುವಂತೆ ಹೇಳಿದಾಗ ಶ್ರೋತೃಗಳೆಲ್ಲರೂ ಕರತಾಡನದಿಂದ ತಮಗಾದ ಆನಂದವನ್ನು ವ್ಯಕ್ತಪಡಿಸಿದರು, ಇಲ್ಲಿ ಇನ್ನೊಂದು ವೈಶಿಷ್ಟ್ಯವೆಂದರೆ : ಈ ವಾಕ್ಯಾಂಶವನ್ನು ಇಡೀ ಗದ್ಯದ ಅರ್ಥಾನುವಾದ ಹೇಳಿದ ಮೇಲೆ ಕೊನೆಯದಾಗಿ ತಿಳಿಸಿ ಹೇಳಿದರು.ಮುಖ್ಯಪ್ರಾಣದೇವರ ವಿಷಯವು ಗದ್ಯದ ಕೊನೆಯ ಭಾಗಕ್ಕೆ ಬಂದಿದ್ದರಿಂದಲೂ, ಅನೇಕಾನೇಕ ಮಂತ್ರೋಪಾಸಕರು ಆ ಮುಖ್ಯಪ್ರಾಣದೇವರಾಗಿರುವುದರಿಂದಲೂ, ಅಂತಹ ಶ್ರೀ ಮುಖ್ಯಪ್ರಾಣದೇವರ ತೃತೀಯಾವತಾರರೂಪವೇ ಅಸ್ಮದಾದಿಗುರುಗಳಾದ್ದರಿಂದಲೂ ಈ ಭಾಗವನ್ನು ಸಂದರ್ಭೋಚಿತವಾಗಿ ಕೊನೆಗೆ ಹೇಳಿದೆವೆಂದು ಅವರೇ ಸ್ಪಷ್ಟಪಡಿಸಿದಾಗ ಶ್ರೋತೃಗಳೆಲ್ಲರೂ ತಲೆದೂಗಿದರು.

ಈ ಗ್ರಂಥದಲ್ಲಿ ಶ್ರೀ ರಾಯರು "ಪೂರ್ವಪ್ರಸಿದ್ಧ" ಎಂಬ ಶಬ್ದವನ್ನು ಎರಡು ಬಾರಿ ಪ್ರಯೋಗಿಸಿದ್ದಾರೆ. ಈ ಶಬ್ದಕ್ಕೆ ಚತುರ್ಮುಖಬ್ರಹ್ಮನೆಂದು ಅರ್ಥವೆಂದು ತಮ್ಮ ಅನುವಾದ ಪ್ರಸಂಗದಲ್ಲಿ ಶ್ರೀ ವಿಷ್ಣುತೀರ್ಥರು ಹೇಳಿದರು. ನಂತರ ತಾವು ಆ ಅರ್ಥವೇ ಸರಿಯೆಂದು ಸಾಧಿಸುವ ೧೪ ಪುಟಗಳಷ್ಟು ವಿವರಣೆ, ಆಧಾರಗಳನ್ನು ಬರೆದು ಕಳುಹಿಸಿದರು.

ಶ್ರೀ ವಿಷ್ಣುತೀರ್ಥರ ಪಾಂಡಿತ್ಯದ ಬಗ್ಗೆ ಇದೊಂದು ಚಿಕ್ಕ ಉದಾಹರಣೆ ಮಾತ್ರ. ಅವರು ಬರೆದ 'ಶ್ರೀಹರಿವಾಯುಸ್ತುತಿ', 'ಈಶಾವಾಸ್ಯೋಪನಿಷತ್' (ಇದು ಮುದ್ರಣವಾಗಿಲ್ಲ) ಮೊದಲಾದವುಗಳ ಅರ್ಥವಿವರಣೆ, ವಿಶೇಷಾರ್ಥಗಳು, ಅವರಿಗಿರುವ ಜ್ಞಾನ ಸಿದ್ಧಾಂತನಿಷ್ಠೆ ಇತ್ಯಾದಿಗಳನ್ನು ಎತ್ತಿ ತೋರಿಸುತ್ತವೆ.

ಇಷ್ಟಿದ್ದೂ, ನಿರಾಡಂಬರವಾದ, ಅತ್ಯಂತ ಪ್ರಾಮಾಣಿಕ, ಸರಳ ನಿವೃತ್ತ ಕರ್ಮಾನುಷ್ಠಾನಪರವಾದ ಉದಾತ್ತ ಜೀವನವು ಅವರದಾಗಿದೆ. ವಿದ್ವಜ್ಜನರನ್ನು ಮನಃಪೂರ್ವಕ ವಂದಿಸುತ್ತಾರೆ. ಪಾಮರರಿಗೆ ಯೋಗ್ಯ ಮಾರ್ಗದರ್ಶನ ಮಾಡುತ್ತಾರೆ.

ಅತ್ಯಂತ ಕಠಿಣ ವ್ರತಾದಿಗಳನ್ನು ಕೈಕೊಂಡು ಜ್ಞಾನ–ಭಕ್ತಿ–ವೈರಾಗ್ಯಾದಿ ಮೂರ್ತಿಯಂತಿರುವ ಇವರನ್ನು ಕುರಿತೇ

" . . . . ಯಾನಪಿ ಸಮೇತ್ಯ ನ ಯಾತಿ ದುಃಖಂ . . : "

ಎಂಬುದಾಗಿ ಹೇಳಿರಬಹುದೇನೋ ಎಂದು ಪದೇಪದೇ ನಮಗನ್ನಿಸುತ್ತದೆ.

ಪುಣೆ

ಪ್ರಭಂಜನ ಕುಲಕರ್ಣಿ

ಶ್ರೀ ಗುರುರಾಜ ಬಾಡಗಂಡಿಯುವರು
ಶ್ರೀ ಶ್ರೀಶಮೂರ್ತಿಗಳಿಗೆ ಬರೆದ ಪತ್ರ

ಶ್ರೀ ಲಕ್ಷ್ಮೀವೇಂಕಟೇಶ್ವರ ಪ್ರಸನ್ನ

ಶ್ರೀ । ರಾ । ಶ್ರೀ । ಶ್ರೀಶಮೂರ್ತಿಗಳಿಗೆ ಬೆಳಗಾಂವಿಯ ಗುರುರಾಜ ಬಾಡಗಂಡಿ ಕೃತ ಸಾಷ್ಟಾಂಗನಮಸ್ಕಾರಗಳು. ಉಭಯ ಕುಶಲ ಸಾಂಪ್ರತಂ.

ಶ್ರೀ ವಿಷ್ಣುತೀರ್ಥರು ನಮ್ಮ ಕುಟುಂಬಕ್ಕೆ ಕಳೆದ ೨೫–೩೦ ವರ್ಷಗಳಿಂದ ಪರಿಚಿತರು. ಅವರ ಆತ್ಮ ಕಥನ ಪ್ರಿಂಟಾಗುತ್ತಿದೆ ಎಂದು ಬೆಂಗಳೂರಿಗೆ ಹೋಗಿ ಮರಳಿ ಬಂದ ನನ್ನ ಮಗಳು ಸಮಾಚಾರ ತಂದಳು ಹಾಗೂ ಅದರ ಕೆಲವು ಹಾಳೆಗಳನ್ನು (ಪ್ರೂಫ್ ತಿದ್ದಲು ಬಂದಿದನ್ನು) ಅವರ ಮನೆಯಿಂದ ನಮಗಾಗಿ ನೋಡಲು ತಂದಿದ್ದಳು. ಅದನ್ನು ಓದಿ ನಮಗೆಲ್ಲಾ ತುಂಬಾ ಸಂತೋಷವಾಯಿತು. ಅವರನ್ನು ನಾನು ನೂರಾರು ಸಲ ಭೆಟ್ಟಿಯಾಗಿದ್ದೇನೆ. ಅವರು ಬರೆದ ಎಲ್ಲ ಪುಸ್ತಕಗಳನ್ನೂ ಓದಿದ್ದೇನೆ. ನನಗೂ ನನ್ನ ಮಕ್ಕಳಿಗೂ ಪ್ರತಿ ವರ್ಷದಲ್ಲಿ ೧೦–೨೦ ಕಾಗದ ಬರೆದು ಮಾರ್ಗದರ್ಶನ ಮಾಡುತ್ತಿರುತ್ತಾರೆ. ಅವರು ಮಹಾತ್ಮರು, ದೇವಾಂಶ ಸಂಭೂತರು. ಹಾಗೂ ಪ್ರಾತಃಸ್ಮರಣೀಯರು ಎಂದು ನಾನು ದೃಢವಾಗಿ ನಂಬಿದ್ದೇನೆ.

ಇಂಥವರ ಬಗ್ಗೆ ಹತ್ತೆಂಟು ಸಾಲುಗಳನ್ನು ನಾನೂ ಬರೆಯಬೇಕು ಎಂದು ಅನಿಸಿತು, ಅದರಂತೆ ಬರೆದು ಕಳಿಸಿರುವೆನು. ನಾನು ಲೇಖಕನೂ ಅಲ್ಲ, ಸಾಹಿತಿಯೂ ಅಲ್ಲ. ತಮಗೆ ತೋಚಿದಂತೆ ತಿದ್ದಿ. ಪ್ರಿಂಟ್ ಆಗುವ ಪುಸ್ತಕದಲ್ಲಿ ಸೇರಿಸಿ ಎಂದು ಪ್ರಾರ್ಥಿಸುವೆ.

ನಾನು ತಮಗೆ ಪರಿಚಿತನಲ್ಲ. ಆದರೂ ಮೊಂಡುಧೈರ್ಯ ಮಾಡಿ ತಮಗೆ ಈ ಕಾಗದವನ್ನು ಬರೆದಿರುವೆನು. ಇದನ್ನು ಶ್ರೀ ವಿಷ್ಣುತೀರ್ಥರಿಗೆ ನಾನು ಕಳಿಸಿದರೆ ಅವರು ಆತ್ಮಸ್ತುತಿಯೆಂದು ಖಂಡಿತ ಅದನ್ನು ತಿದ್ದುತ್ತಾರೆ. ಆದರೆ ನಾನು ಬರೆದದ್ದು ೧೦೦% ಸತ್ಯವಿದೆ ಎಂದು ನನಗೆ ನಂಬಿಕೆಯಿದೆಯಾಗಿ ಈ ಪತ್ರ ತಮಗೆ ಬರೆದಿದ್ದೇನೆ—

ಇತಿ ಸಾಷ್ಟಾಂಗ ನಮಸ್ಕಾರಗಳು

ಗುರುರಾಜ ಬಾಡಗಂಡಿ

ಶ್ರೀ ಗುರುರಾಜ ಬಾಡಗಂಡಿ ಅವರ ಅನಿಸಿಕೆ

ಹರಿಭಕ್ತ ಶಿರೋಮಣಿಯಾದ ಶ್ರೀ ಪಿ. ವಿಷ್ಣುತೀರ್ಥರಂಥವರನ್ನು ನನ್ನ ಜೀವಮಾನದಲ್ಲಿಯೇ ಬೇರೆ ಯಾರನ್ನೂ ನಾನು ನೋಡಲಿಲ್ಲ, ಶ್ರೀಹರಿ, ವಾಯು ದೇವರಲ್ಲಿ, ಹಾಗೂ ಶ್ರೀಪಾದರಾಜರೂ ಅವರ ಶಿಷ್ಯರಾದ ಶ್ರೀ ವ್ಯಾಸರಾಜರಲ್ಲಿ ಅವರಿಗೆ ಅಪಾರ ಭಕ್ತಿ. ಹಿಂದೆ ಯಾವದೋ ಜನ್ಮದಲ್ಲಿ ಶ್ರೀ ವ್ಯಾಸರಾಜರಿಂದ ಪಾಠ ಹೇಳಿಸಿಕೊಂಡ ಇವರು, ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿರುವರು ಎಂಬುದೇ ನನ್ನ ದೃಢ ವಿಶ್ವಾಸ. ಇವರು ಎಂದೂ ಐಹಿಕ ಸುಖ, ಸಂಪತ್ತು ಆಶಿಸಿ ದವರಲ್ಲ. ಅವರು ಐಹಿಕಸಂಪತ್ತು ಬೇಡಿದ್ದರೆ, ವ್ಯಾಸರಾಯರು ಧನಕನಕಾಭಿಷೇಕ ಮಾಡಿಸುತ್ತಿದ್ದರು ಎಂದು ನಾನು ನಂಬಿದ್ದೇನೆ. ಸಂಧ್ಯಾವಂದನೆ, ಪೂಜೆ ಮಂತ್ರ ಬಾರದ ನನ್ನಂಥ ಶುದ್ಧ ಶುಂಠಿಯನ್ನು ತಿದ್ದಿ, ತೀಡಿ, ಹಲವಾರು ಮಂತ್ರಗಳ ಉಪದೇಶ ಮಾಡಿ, ಅನೇಕ ಸಾಲಿಗ್ರಾಮಗಳನ್ನು ಪೂಜೆ ಮಾಡಲು ಹತ್ತೇಟು ವರ್ಷ ಶುದ್ಧ ಮಾಡಿಕೊಟ್ಟ ಮಹಾತ್ಮರು. ಯಂತ್ರೋದ್ಧಾರಕರ ಹಾಗೂ ಶ್ರೀ ವ್ಯಾಸರಾಜರ ಪೂರ್ಣಾನುಗ್ರಹ ಅವರಿಗಾಗಿದೆಯೆನ್ನಲು ಅವರು ಬರೆದ "ಶ್ರೀಹರಿವಾಯುಸ್ತುತಿ"ಯೇ ಸಾಕ್ಷಿಯಾಗಿದೆ.

ಇವರು ಯಾವ ಋಷಿಗಳೋ, ಯಾವ ಮುನಿಗಳೋ, ನಾನು ಅರಿಯೆನು. ಆದರೆ ಇವರು ಪ್ರಾತಃಸ್ಮರಣೀಯರು. **ಶ್ರೀವ್ಯಾಸರಾಜರ ಪೂರ್ಣಾನುಗ್ರಹಕ್ಕೆ ಪಾತ್ರರು.** ಹಾಗೂ ನಮ್ಮಂಥ ಅನೇಕ ಜನರನ್ನು ಸನ್ಮಾರ್ಗಕ್ಕೆ ಹಚ್ಚಿ, ಉದ್ಧಾರ ಗೈಯಲು ಜನ್ಮ ತಾಳಿ ಬಂದವರು ಎಂದು ನಾನು ಅನೇಕ ವರ್ಷಗಳಿಂದಲೂ ದೃಢವಾಗಿ ನಂಬಿದ್ದೇನೆ,

ಇಂಥಾ ಗುರುಗಳ ಗುಲಾಮನಾಗಿ, ಸದಾ ಇವರ ಪಾದಸೇವೆಯ ಭಾಗ್ಯ ವನ್ನೇ ಜನ್ಮಜನ್ಮದಲ್ಲಿಯೂ ನನಗೆ ಕರುಣಿಸಿರಿ ಎಂದು ಅವರ ಗುರುಗಳಾದ ಶ್ರೀ ವ್ಯಾಸರಾಜರಲ್ಲಿ ಹಾಗೂ ಯಂತ್ರೋದ್ಧಾರಕ ಪ್ರಾಣದೇವರಲ್ಲಿ ನಾನು ದೈನ್ಯ ವಾಗಿ ಮೊರೆಯಿಡುತ್ತೇನೆ.

ಬೆಳಗಾಂ **ಗುರುರಾಜ ಜೆ. ಬಾಡಗಂಡಿ**



ಹಂಪೆಯಲ್ಲಿ ಚಕ್ರತೀರ್ಥದ ದಡದ ಮೇಲಿರುವ ಶ್ರೀ ವ್ಯಾಸರಾಜತೀರ್ಥ
ಪ್ರತಿಷ್ಠಿತ (ಕ್ರಿ, ಶ. 1500) ಯಂತ್ರೋದ್ಧಾರಕ ಪ್ರಾಣದೇವರು

ಆನೆಗೊಂದಿಯಲ್ಲಿರುವ ನವವೃಂದಾವನದ ನೋಟ

ವೃಂದಾವನಗಳ ಹೆಸರುಗಳು : (1) ಶ್ರೀ ಪದ್ಮನಾಭತೀರ್ಥರು (2) ಶ್ರೀ ರವೀಂದ್ರತೀರ್ಥರು (3) ಶ್ರೀ ವಾಗೀಶತೀರ್ಥರು (4) ಶ್ರೀ ವ್ಯಾಸರಾಯರು (5) ಶ್ರೀ ರಘುವರ್ಯರು (6) ಶ್ರೀ ಶ್ರೀನಿವಾಸತೀರ್ಥರು (7) ಶ್ರೀ ರಾಮತೀರ್ಥರು (8) ಶ್ರೀ ಸುಧೀಂದ್ರತೀರ್ಥರು (9) ಶ್ರೀ ಗೋವಿಂದ ಒಡೆಯರು



ಆನೆಗೊಂದಿಯ ನವವೃಂದಾವನದಲ್ಲಿರುವ ಶ್ರೀ ಪದ್ಮನಾಭತೀರ್ಥರು

ಹಂಪೆಯಲ್ಲಿ ತುಂಗಭದ್ರಾ ನದೀ ಮಧ್ಯದಲ್ಲಿ ಒಂದು
ಬಂಡೆಯ ಮೇಲಿರುವ ಶ್ರೀ ನರಹರಿತೀರ್ಥರು

ಎಲೆಮರೆಯ ಹೂವು

ಅಥವಾ

ನವವೃಂದಾವನದ ವಿಷ್ಣುತೀರ್ಥರ ಸಂಕ್ಷಿಪ್ತ ಜೀವನಚರಿತ್ರೆ

ನಮ್ಮ ಪೂರ್ವೀಕರು

ಸಾಮಾನ್ಯವಾಗಿ ನಾವು ಯಾರನ್ನಾದರೂ ಸಂದರ್ಶಿಸಲು ಹೋದಾಗ ಮೊದಲು ನಮ್ಮ ಪರಿಚಯ ಮಾಡಿಕೊಳ್ಳುವುದು ಸಂಪ್ರದಾಯ. ಅದೇ ರೀತಿ ಮದುವೆಯ ಸಂದರ್ಭದಲ್ಲೂ ಕನ್ಯಾ-ವರಗಳಿಬ್ಬರ ಗೋತ್ರಪ್ರವರಗಳನ್ನು ತಿಳಿಸಿ ಪರಿಚಯ ಮಾಡಿಕೊಳ್ಳುವುದೂ ವಾಡಿಕೆಯಾಗಿದೆ. ಅದರಂತೆ ನವವೃಂದಾವನದ ವಿಷ್ಣುತೀರ್ಥರ (ಇತ್ತೀಚೆಗೆ ಪ್ರಕಟವಾದ 'ಶ್ರೀಹರಿವಾಯುಸ್ತುತಿ'ಯ ಪ್ರೌಢ ವ್ಯಾಖ್ಯಾನವನ್ನು ಬರೆದವರೂ ಇವರೇ) ಜೀವನವೃತ್ತಾಂತವನ್ನು ನಿರೂಪಿಸುವಾಗಲೂ ಅವರ ಪೂರ್ವಿಕರ ಪರಿಚಯ ಮಾಡಿಕೊಡುವುದು ಉಚಿತವಾಗಿದೆ. ಅದನ್ನು ಅವರೇ ಮಾಡಿಕೊಳ್ಳುತ್ತಿದ್ದಾರೆ, ಕೇಳಿ.

"ನಾವು ಅರುವತ್ತು ಒಕ್ಕಲ ಗುಂಪಿಗೆ ಸೇರಿದ ಮಾಧ್ವರ ಮಧ್ಯೆ ಅನೂಚಾನವಾಗಿ ಶ್ರೀಮದ್ವ್ಯಾಸರಾಜಮಠಕ್ಕೆ (ಸೋಸಲೆಗೆ) ನಡೆದುಕೊಳ್ಳುವ ಶಿಷ್ಯವರ್ಗದ ಪೈಕಿ ಶ್ರೀವತ್ಸಗೋತ್ರದ ಅನುಯಾಯಿಗಳು. ನಮ್ಮ ಜ್ಯೇಷ್ಠ ಪ್ರಪಿತಾ-ಮಹ(ಹಿರಿಯ ಮುತ್ತಾತಂದಿ)ರಾದ ಹರಿದಾಸಯ್ಯನವರು ಹಾಸನ ಜಿಲ್ಲೆಯ ಗೊರೂರು ತಾಲ್ಲೂಕಿಗೆ ಸೇರಿದ ಪೊನ್ನಾಥಪುರ ಎಂಬ ಗ್ರಾಮದಲ್ಲಿ (ಅದು ಈಗ ಹೇಮಾವತಿ ಜಲಾಶಯದಲ್ಲಿ ಮುಳುಗಡೆಯಾಗಿ ಹೋಗಿದೆ.) ನದೀ ತೀರದಲ್ಲಿ ಮನೆ ಮಾಡಿಕೊಂಡಿದ್ದು, ಭೂಮಿಕಾಣಿಗಳನ್ನು ನೋಡಿಕೊಳ್ಳುತ್ತ ತಪೋನಿಷ್ಠರೂ ಆಗಿದ್ದರಂತೆ. ಅವರ ಮಕ್ಕಳ ಪೈಕಿ ತಿಮ್ಮಪ್ಪಯ್ಯ ಎಂಬುವರು ತಮ್ಮ ತಂದೆಯಂತೆಯೇ ನಿಷ್ಠಾವಂತ ಮಾಧ್ವಗೃಹಸ್ಥರಾಗಿದ್ದರಲ್ಲದೆ ಸೂರ್ಯೋಪಾಸಕರೂ ಆಗಿದ್ದರು. ಅವರು ಸೂರ್ಯನಮಸ್ಕಾರ ಹಾಕಿ ತಮ್ಮಲ್ಲಿದ್ದ ಅತ್ಯಪೂರ್ವವಾದ ಕಂಚಿನ ಸೂರ್ಯನಾರಾಯಣನ ಪ್ರತಿಮೆಯನ್ನು ಅರ್ಚಿಸುವಾಗ ಒಂದು ವಸ್ತ್ರವನ್ನು ಮೇಲೆ ಎಸೆದರೆ ಆ ವಸ್ತ್ರವು ಪ್ರತಿಮೆಗೆ ಬಿಸಿಲು ಬೀಳದಂತೆ ಅಡ್ಡಾಗಿ

ನಿಲ್ಲುತ್ತಿತ್ತಂತೆ. ಅವರ ತಪಸ್ಸಿದ್ಧಿ ಅಂಥದಾಗಿತ್ತು. (ಆ ಸೂರ್ಯನಾರಾಯಣ ಪ್ರತಿಮೆ ಈಗಲೂ ನಮ್ಮ ಮನೆಯಲ್ಲಿ ಪೂಜೆಗೊಳ್ಳುತ್ತಿದೆ.)

ನಮ್ಮ ಮುತ್ತಜ್ಜಂದಿರಾದ ಈ ತಿಮ್ಮಪ್ಪಯ್ಯನವರ ಎರಡನೆಯ ಮಕ್ಕಳಾದ ರಾಘವೇಂದ್ರರಾಯರೇ ನಮ್ಮ ಪಿತಾಮಹಂದಿರು (ಅಜ್ಜ). ಇವರು ಪ್ರಾಪ್ತ ವಯಸ್ಕರಾಗಿ ವಿವಾಹಿತರಾದ ಬಳಿಕ ಹಳ್ಳಿ ಬಿಟ್ಟು ಹಾಸನಕ್ಕೆ ಬಂದು ನೆಲೆಸಿ ಕಾಫೀಬೀಜದ ಏಜೆಂಟರಾಗಿ ಕೆಲಸ ಮಾಡಿ ಬೋಂದೂ ಶಾಮರಾಯರೆಂಬ ಹೆಸರಿನಿಂದಲೇ ಪ್ರಸಿದ್ಧರಾದರು. ಇವರು ಉದ್ಯೋಗದಲ್ಲಿದ್ದುದರಿಂದ ತಮ್ಮ ಹಿರಿಯರಂತೆ ತಪೋನುಷ್ಠಾನಪರರಾಗಲು ಸಾಧ್ಯವಾಗಲಿಲ್ಲವಾದರೂ ಆಚಾರಶೀಲರೂ ಹರಿಗುರುಗಳಲ್ಲಿ ಅತ್ಯಂತ ಶ್ರದ್ಧಾಭಕ್ತಿಯುಳ್ಳವರೂ ಆಗಿದ್ದರು. ಇವರಿಗೆ ತಮ್ಮ ಕುಲದೇವತೆಯಾದ ಶ್ರೀನಿವಾಸನಲ್ಲೂ ಶ್ರೀರಾಮನಲ್ಲೂ ಗಾಢವಾದ ಭಕ್ತಿಯಿದ್ದರೂ ಡೊಗ್ಗಾಲಿನ ಮುದ್ದು ಬೆಣ್ಣೆಕೃಷ್ಣನೇ ಇವರ ಉಪಾಸ್ಯಮೂರ್ತಿ. ಆ ಕೃಷ್ಣನಿಗೂ ಶ್ರೀನಿವಾಸನಿಗೂ ಮುತ್ತಿನ ಸರಗಳನ್ನು ಮಾಡಿಸಿ ಹಾಕಿ ಆನಂದಪರವಶರಾಗುತ್ತಿದ್ದರಂತೆ. ಅವರು ಅರ್ಚಿಸಿದ ಬೆಣ್ಣೆಯ ಕೃಷ್ಣನ ಹಾಗೂ ಶ್ರೀನಿವಾಸ ದೇವರ ಪ್ರತಿಮೆಗಳು ಇಂದಿಗೂ ನಮ್ಮ ಮನೆಯಲ್ಲಿ ಪೂಜೆಗೊಳ್ಳುತ್ತಿವೆ. ಆ ನಮ್ಮಜ್ಜ ಶಾಮರಾಯರು ಶರನ್ನವರಾತ್ರಿಯ ಸಮಯದಲ್ಲಿ ಪ್ರತಿನಿತ್ಯವೂ ವಾಲ್ಮೀಕಿ ರಾಮಾಯಣ ಪಾರಾಯಣ ಮಾಡಿ ವಿಜಯದಶಮೀ ದಿವಸ ಚಿನ್ನದ ರಾಮಟಂಕೀವರಹಕ್ಕೆ ಪಂಚಾಮೃತಾಭಿಷೇಕ ಮಾಡಿ ಪೂಜಿಸಿ ಬ್ರಾಹ್ಮಣ-ಸುವಾಸಿನೀ ಸಂತರ್ಪಣೆಯನ್ನು ವೈಭವದಿಂದ, ಸಡಗರದಿಂದ ನಡೆಸುತ್ತಿದ್ದರು. ಅವರಿಗೆ ಕೃಷ್ಣನ ಅಭಿಮಾನ ಎಷ್ಟಿತ್ತೆಂಬುದಕ್ಕೆ ಹಿರಿಯರು ಹೇಳುತ್ತಿದ್ದ ವಿಶೇಷ ವಿಷಯವೊಂದು ಹೀಗಿದೆ.

"ನನಗೆಲ್ಲಿ ಉಡಿದಾರ ?"

ಈ ನಮ್ಮ ಪಿತಾಮಹರು ತಮಗೆ ಹಿರಿಯ ಮಗ (ನಮ್ಮ ದೊಡ್ಡಪ್ಪ) ಕೃಷ್ಣರಾವ್ ಹುಟ್ಟಿದಾಗ ನಾಮಕರಣ ಸಮಯದಲ್ಲಿ ಮಗುವಿಗೆ ಒಂದು ಚಿನ್ನದ ಉಡಿದಾರ ಮಾಡಿಸಿ ಹಾಕಿ ಸಂಜೆ ಆರತಕ್ಷತೆ ಮಾಡಿ ಸಂತೋಷಪಟ್ಟರು. ಅಂದು ರಾತ್ರಿಯೇ ಕೃಷ್ಣದೇವರು ಅವರ ಸ್ವಪ್ನದಲ್ಲಿ ಕಾಣಿಸಿಕೊಂಡು "ನನಗೆಲ್ಲಿ ಉಡಿದಾರ ?" ಎಂದು ಕೇಳುತ್ತಾ ಮಗುವಿನ ಕಡೆ ಚಾವಟಿಬೀಸಿದಂತಾಯಿತಂತೆ. ಬೆಳಗಾದ ಮೇಲೆ ನೋಡಿದರೆ ತಮ್ಮ ಮಗುವಿನ ಸೊಂಟದ ಮೇಲೆ ಬಾಸುಂಡೆ ಗುರುತು ಕಾಣಿಸಿಕೊಂಡಿತಂತೆ. ಆ ಕ್ಷಣವೇ ಶಾಮರಾಯರು ತಪ್ಪುಕಾಣಿಕೆ

ಯನ್ನು ಒಪ್ಪಿಸಿ ಕೃಷ್ಣನ ಪ್ರತಿಮೆಗೆ ಚಿನ್ನದ ಉಡಿದಾರ ಮಾಡಿಸಿಟ್ಟರಂತೆ. ಇಂದಿಗೂ ನಮ್ಮ ಮನೆಯಲ್ಲಿ ಆ ಚಿನ್ನದ ಉಡಿದಾರ ಸಹಿತನಾಗಿಯೇ ಪೂಜೆ ಗೊಳ್ಳುತ್ತಿದ್ದಾನೆ, ಆ ಡೊಗ್ಗಾಲು ಮುದ್ದು ಬೆಣ್ಣೆಕೃಷ್ಣ.

ಹಿರಿಯ ಮಗ ಹುಟ್ಟಿದ ನಂತರದಲ್ಲಿ ನಮ್ಮಜ್ಜನಿಗೆ ಕ್ರಮವಾಗಿ ಪುತ್ರಿಕಾ ಹಾಗೂ ಪುತ್ರಸಂತಾನವಾಗಿ ತಮ್ಮ ಕುಲದೇವತೆಯ ಹೆಸರಿನ ಮೇಲೆ ಆ ಮಕ್ಕಳಿಗೆ ವೆಂಕಟಲಕ್ಷ್ಮೀ ಹಾಗೂ ವೆಂಕಟರಮಣಯ್ಯ ಎಂದು ನಾಮಕರಣ ಮಾಡಿದರು. ಈ ದ್ವಿತೀಯ ಪುತ್ರನಾದ ವೆಂಕಟರಮಣಯ್ಯನವರೇ ನಮ್ಮ ತಂದೆ. ಕಾಲಕ್ರಮ ದಲ್ಲಿ ನಮ್ಮ ಅಜ್ಜಿ ಲಕ್ಷ್ಮಮ್ಮ (ಅಚ್ಚಮ್ಮ) ಪುನಃ ಗರ್ಭವತಿಯಾದಾಗ ಮುಂದೆ ಹುಟ್ಟುವ ಮಗುವಿಗೆ ತಾವು ಆರಾಧಿಸುತ್ತಲಿದ್ದ ಶ್ರೀರಾಮನ ಹೆಸರಿಡಬೇಕೆಂದಿದ್ದ ರಾದರೂ, ದೈವೇಚ್ಛೆ ! ನಮ್ಮಜ್ಜ ಮಗುವನ್ನು ಕಾಣುವ ಮುನ್ನವೇ ಒಂದು ಕುದುರೆಯ ಅಪಘಾತಕ್ಕೆ ಸಿಕ್ಕಿ ದೈವಾಧೀನರಾದರು. ನಂತರದಲ್ಲಿ ಆ ತಾಯಿ ಪುತ್ರ ಸಂತಾನವನ್ನೇ ಪಡೆದಾಗ ಆ ಮಗುವಿಗೆ ತಂದೆಯ ಇಚ್ಛೆಯಂತೆ 'ರಾಮಚಂದ್ರ' ನೆಂದೇ ನಾಮಕರಣ ಮಾಡಿದರು. ನಂತರ ಆ ಮಕ್ಕಳಿಗೆ ತಾನೇ ತಾಯಿಯೂ ತಂದೆಯೂ ಆಗಿ ಬೆಳೆಸಿ ಪೋಷಿಸಿ ಮದುವೆಯನ್ನೂ ಮಾಡಿಸಿ ವಂಶೋದ್ಧಾರ ಮಾಡಿ ತಮ್ಮ ಹೊಣೆಗಾರಿಕೆಯನ್ನು ತೀರಿಸಿಕೊಂಡರು.

ಮಾತಾಮಹನ ಪರಿಚಯ

ನಮ್ಮ ಮಾತೃಶ್ರೀಯವರಾದ ಲಕ್ಷಮ್ಮನವರೂ ಕೂಡ ಅದೇ ಹಾಸನ ಜಿಲ್ಲೆಯ ಮಲ್ಲಿಪಟ್ಟಣವೆಂಬ ಗ್ರಾಮದವರು. ಅವರ ತಂದೆಯಾದ ದಾಸಪ್ಪನವರು ಬಾದರಾಯಣಗೋತ್ರಕ್ಕೆ ಸೇರಿದವರು. ಈ ಲಕ್ಷಮ್ಮ ತನ್ನ ತಂದೆ ತಾಯಿಗಳಿಗೆ ಇಳಿವಯಸ್ಸಿನಲ್ಲಿ ಏಕಮಾತ್ರ ಪುತ್ರಿಯಾಗಿ ಜನಿಸಿದ್ದರಿಂದ ಆಕೆಯನ್ನು ತಂದೆ–ತಾಯಿಗಳು ಮುದ್ದಿನಿಂದ 'ಪುಟ್ಟೂ' ಎಂದೇ ಕರೆಯುತ್ತಿದ್ದರು. ಹದಿನಾರು ವರ್ಷಗಳು ಕಳೆದ ಮೇಲೆ ಹುಟ್ಟಿದ ಇನ್ನೊಂದು ಹೆಣ್ಣು ಕೂಸಿಗೆ 'ಸಣ್ಣಮ್ಮ' ಎಂದು ಹೆಸರಿಟ್ಟರು. ದಾಸಪ್ಪನವರು ವಿದ್ವಾಂಸರಾಗಲೀ ಜ್ಞಾನಿಗಳಾಗಲೀ ಆಗಿರ ಲಿಲ್ಲ. ಆದರೂ ಮರಣಕಾಲದಲ್ಲಿ ತಮ್ಮನ್ನು ಕರೆದೊಯ್ಯಲು ಒಂದು ವಿಮಾನವು ಬಂದುದನ್ನು ಕಂಡು 'ನಾರಾಯಣ, ನಾರಾಯಣ' ಎನ್ನುತ್ತಾ ಕಡೆ ಉಸಿರೆಳೆದ ಪುಣ್ಯಾತ್ಮರವರು." (ಇಲ್ಲಿಗೆ ವಿಷ್ಣುತೀರ್ಥರ ಹೇಳಿಕೆ ಮುಗಿಯಿತು.)

ನಮ್ಮ ತಂದೆತಾಯಿಗಳು

ನಮ್ಮ ತಂದೆಯವರಾದ ವೆಂಕಟರಮಣಯ್ಯನವರು ಹಾಸನದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಹೆಡ್ ಅಕೌಂಟೆಂಟ್ ಆಗಿದ್ದರು. ದಾಂಪತ್ಯ ಜೀವನದಲ್ಲಿ ಅವರಿಗೆ ಆದ ಸಂತಾನದಲ್ಲಿ ಈಗ ಉಳಿದಿರುವವರು ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಮಾತ್ರ. ಜ್ಯೇಷ್ಠ ಪುತ್ರನಾಗಿ ಜನಿಸಿದ ರಾಘವೇಂದ್ರರಾವ್ (ರಾಘಣ್ಣ) ಮೂವತ್ತೆರಡು ವರ್ಷ ಬದುಕಿದ್ದು ೧೯೩೬ರಲ್ಲಿ ತೀರಿಹೋದರು. ಅವರಿಗೆ ತಂಗಿಯಾಗಿ ಜನಿಸಿದ ಮಗು ಶೈಶವಾವಸ್ಥೆಯಲ್ಲೇ ಸತ್ತುಹೋಯಿತು. ಆಮೇಲೆ ಆರು ವರ್ಷಗಳ ಕಾಲ ಮಕ್ಕಳೇ ಆಗದಿದ್ದುದರಿಂದ ನಮ್ಮ ತಾಯಿ ಲಕ್ಷಮ್ಮನವರು ವಿಷ್ಣುಪಂಚಕವ್ರತವನ್ನು ಹಿಡಿದು ಮುಗಿಸಿ ಉದ್ಯಾಪನೆ ಮಾಡಿದರು. ತತ್ಫಲವಾಗಿ ಅವರು ಶಾಲಿವಾಹನ ಶಕ ೧೮೩೩ನೇ ವಿರೋಧಿಕೃತ್ ಸಂವತ್ಸರ ಫಾಲ್ಗುಣ ಬಹುಳ ನವಮೀ—೧೯೧೨ನೇ ಮಾರ್ಚ್ ೧೨—ಮಂಗಳ ವಾರ ಒಂದು ಗಂಡುಮಗುವಿಗೆ ಜನ್ಮವಿತ್ತರು. ಆಮೇಲೆ ಕ್ರಮವಾಗಿ ೧೯೧೪ರಲ್ಲಿ ಪ್ರಹ್ಲಾದರಾವ್ (ಲೇಖಕರು) ಎಂಬ ಮಗನೂ, ೧೯೨೫ರಲ್ಲಿ ಮೊದಲ ತಂಗಿಯೂ ೧೯೨೭ರಲ್ಲಿ ಇನ್ನೊಬ್ಬಳು ತಂಗಿಯೂ ಹುಟ್ಟಿದರು.

ಮಗುವಿಗೆ ನಾಮಕರಣ

ಉಪರ್ಯುಕ್ತ ಮಗುವಿನ ತಂದೆ ವೆಂಕಟರಮಣಯ್ಯ ತನ್ನ ಪತ್ನಿ ವಿಷ್ಣು ಪಂಚಕ ಮಾಡಿದುದರ ಫಲವಾಗಿ ಆದ ಪುತ್ರಸಂತಾನ ವಿಷಯವನ್ನು ತಮ್ಮ ಚಿಕ್ಕಪ್ಪಂದಿರೂ ವಿದ್ಯಾಗುರುಗಳೂ ಆದ ಅಮಲ್ದಾರ್ ವೆಂಕಟರಮಣಯ್ಯನವರಿಗೆ ತಿಳಿಸಲು ಹೋದಾಗ ಅವರು ಶ್ರೀ ಸುಮಧ್ವವಿಜಯದ ೧೫ನೇ ಸರ್ಗ ಪಾರಾಯಣ ಮಾಡುತ್ತಿದ್ದು ಆಗತಾನೆ ಶ್ರೀಮದಾಚಾರ್ಯರ ಪೂರ್ವಾಶ್ರಮಸಹೋದರರಾದ ವಿಷ್ಣುತೀರ್ಥರ ಚರಿತ್ರೆಯನ್ನು ಓದಿ ಆನಂದಬಾಷ್ಪ ಸುರಿಸುತ್ತಿದ್ದರಂತೆ. ಮಗುವಿನ ಜನನದ ಸುದ್ದಿ ಕೇಳಿದ ಅಮಲ್ದಾರರು, "ಸಂತೋಷ, ವೆಂಕಟರಮಣ! ನಿನ್ನ ಹೆಂಡತಿ ಲಕ್ಷಮ್ಮ ಮೊನ್ನೆ ತಾನೇ ವಿಷ್ಣುಪಂಚಕದ ವ್ರತೋದ್ಯಾಪನೆ ಮಾಡಿದಳು. ಈಗ ನೋಡಿದರೆ ನಾನೂ ದೈವಯೋಗದಿಂದ ಮಧ್ವವಿಜಯದಲ್ಲಿ ವಿಷ್ಣುತೀರ್ಥರ ಚರಿತ್ರೆಯನ್ನೇ ಓದುತ್ತಿದ್ದೇನೆ. ಆದ್ದರಿಂದ ಈ ಮಗು ಶುದ್ಧ ವೈಷ್ಣವನಾಗುವುದರಲ್ಲಿ ಸಂದೇಹವೇ ಇಲ್ಲ. ಆದಕಾರಣ ಈ ಕೂಸಿಗೆ **ವಿಷ್ಣು ತೀರ್ಥ** ನೆಂದೇ ಹೆಸರಿಡು. ತಂದೆತಾಯಿಗಳಾದ ನಿಮಗೂ ಶುಭವಾಗುತ್ತದೆ" ಎಂದು ಹೇಳಿದರಂತೆ. ಅವರ ಇಚ್ಛೆಯಂತೆ ಆ ಕೂಸಿಗೆ ವಿಷ್ಣುತೀರ್ಥ ಎಂದೇ ನಾಮಕರಣ ಮಾಡಿದರು.



ತಂದೆ ವೆಂಕಟರಮಣಯ್ಯನವರು

ತಾಯಿ ಲಕ್ಷಮ್ಮನವರು

ವಿಷ್ಣುತೀರ್ಥರ ಬಾಲ್ಯ

ವಿಷ್ಣುತೀರ್ಥರ ತಂದೆತಾಯಿಗಳು ಮಧ್ವ ಮತದ ಸಿದ್ಧಾಂತವನ್ನು ಹೀರಿ ವೀರವೈಷ್ಣವರಾಗಿ ಬೆಳೆದವರು. ಆದರಲ್ಲೂ ವೆಂಕಟರಮಣಯ್ಯನವರು ಶಿವಮೊಗ್ಗೆಯ ಚಿಕ್ಕಬ್ರಾಹ್ಮಣರ ಕೇರಿಯಲ್ಲಿ ವಾಸಿಸುತ್ತಲಿದ್ದಾಗ (೧೯೧೮-೧೯೨೨) ಅಲ್ಲಿ ಒಳ್ಳೆಯ ಸಾಂಸ್ಕೃತಿಕ ವಾತಾವರಣವಿತ್ತು. ಹಗಲುಹೊತ್ತು ಅವರು ತಮ್ಮ ಮಕ್ಕಳನ್ನು ಸಂಸ್ಕೃತ ಪಾಠಶಾಲೆಗೆ ಕಳುಹಿಸುತ್ತಿದ್ದರು. ಅವರು ಅಲ್ಲಿ ಅಮರಕೋಶ ಶಬ್ದಮಂಜರಿ ಮತ್ತು ಕೆಲವು ಸ್ತೋತ್ರಗಳನ್ನು ಕಂಠಪಾಠಮಾಡುತ್ತಲಿದ್ದರು. ಬೆಳಿಗ್ಗೆ ಸಾಯಂಕಾಲ ದಂಪತಿಗಳು ತಪ್ಪದೇ ಪುರಾಣ, ಹರಿಕಥೆ, ಉಪನ್ಯಾಸ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಜ್ಞಾನದಾಹವನ್ನು ।ಅಡಗಿಸಿಕೊಳ್ಳುತ್ತಿದ್ದರು. ಅಲ್ಲದೆ ವೆಂಕಟರಮಣಯ್ಯನವರು ಸಮಯ ದೊರೆತಾಗಲೆಲ್ಲ ಅವರಿವರ ಬಳಿ ಇದ್ದ ದೇವರನಾಮಗಳು, ಸುಳಾದಿಗಳು ಮುಂತಾದ ಹರಿದಾಸ ಕೃತಿಗಳನ್ನು ಬರೆದಿಟ್ಟುಕೊಳ್ಳುತ್ತಿದ್ದರು.

ಉಪನಯನ ಹಾಗೂ ವಿದ್ಯಾಭ್ಯಾಸ

ವಿಷ್ಣುತೀರ್ಥರಿಗೆ ಎಂಟು ವರ್ಷ ವಯಸ್ಸಾಗಿರುವಾಗಲೇ ಅವರ ತಂದೆ ಚಿಕ್ಕ ಬ್ರಾಹ್ಮಣ ಕೇರಿಯಲ್ಲಿರುವ ರಾಘವೇಂದ್ರಸ್ವಾಮಿಗಳ ಮಠದಲ್ಲಿ ರಾಯರ ಆರಾಧನೆಯ ದಿನವೇ ಅವರ ಉಪನಯನವನ್ನು ಮಾಡಿದರು. ಅಂದಿನಿಂದಲೇ ಅವರ ಜ್ಞಾನಚಕ್ಷುವು ತೆರೆಯಿತೆಂದು ಧಾರಾಳವಾಗಿ ಹೇಳಬಹುದು. ಉಪನಯನ ಆದಮೇಲೆ ಅವರು ಸಂಧ್ಯಾವಂದನೆ, ಅಗ್ನಿಕಾರ್ಯ, ದೇವರಪೂಜೆಯ ಮಂತ್ರ, ವಾಯುಸ್ತುತಿ, ಅಭಿಷೇಕಸೂಕ್ತಾದಿಗಳನ್ನು ತಮ್ಮ ಪಾಠಶಾಲೆಯ ಮುಖ್ಯಾಧ್ಯಾಪಕರಾಗಿದ್ದ ವೇ॥ ಶ್ರೀ॥ ಲಕ್ಷ್ಮೀನಾರಾಯಣಾಚಾರ್ಯರಲ್ಲಿ ಅಭ್ಯಾಸ ಮಾಡಿದರು. ಅಲ್ಲದೆ ಮನೆಯಲ್ಲಿ ತಮ್ಮ ತಂದೆಯವರು ಸಂಗ್ರಹಿಸಿಟ್ಟಿದ್ದ ಮುದ್ರಿತ ಹಾಗೂ ಹಸ್ತಲಿಖಿತ ಧಾರ್ಮಿಕ ಗ್ರಂಥಗಳನ್ನು ಆಸಕ್ತಿಯಿಂದ ಓದುತ್ತಿದ್ದರು. ಇಷ್ಟರ ಜೊತೆಗೆ ತಂದೆತಾಯಿಗಳೊಡನೆ ಆಗಿನ ಕಾಲದ ಪ್ರಸಿದ್ಧರಾದ ಶ್ರೀ ಜಯರಾಮಾಚಾರ್, ಬೇಲೂರು ಕೇಶವದಾಸರು ಮುಂತಾದವರ ಹರಿಕಥೆಗಳಿಗೂ, ಯಲ್ಲತ್ತೂರು ಕೃಷ್ಣಾಚಾರ್ಯರಂತಹ ಮಹಾ ಪಂಡಿತರ ಉಪನ್ಯಾಸಗಳಿಗೂ ಹೋಗುತ್ತಿದ್ದು ಯಥಾಶಕ್ತಿ ವಿಷಯಗ್ರಹಣ ಮಾಡುತ್ತಿದ್ದರಲ್ಲದೆ ಸಂಶಯ ಬಂದಾಗಲೆಲ್ಲ ಮನೆಯಲ್ಲಿ ತಂದೆಯವರನ್ನು ಕೇಳಿ ಪರಿಹಾರ ಮಾಡಿಕೊಳ್ಳುತ್ತಿದ್ದರು. ಹೀಗೆ ಅವರ ಬಾಲ್ಯದ ದಿನಗಳಲ್ಲಿ ಮನೆಯಲ್ಲಿದ್ದ ಉತ್ತಮ ವಾತಾವರಣ ಅವರ ಮನ

ಸ್ಸಿನ ಮೇಲೆ ಗಾಢವಾದ ಸಾಂಸ್ಕೃತಿಕ, ಧಾರ್ಮಿಕ ಪ್ರಭಾವ ಬೀರಿತು. ಆದರೆ ೧೯೨೨ರಲ್ಲಿ ಅವರ ತಂದೆಗೆ ಹಾಸನಕ್ಕೆ ವರ್ಗವಾದ್ದರಿಂದ ತೀರ್ಥರು ಶಿವಮೊಗ್ಗ ಬಿಟ್ಟು ತಂದೆತಾಯಿಗಳೊಡನೆ ಹಾಸನಕ್ಕೆ ಬಂದರು.

ಧಾರ್ಮಿಕ ಶ್ರದ್ಧೆ ಹಾಗೂ ಸತ್ಯನಿಷ್ಠೆ

ವಿಷ್ಣುತೀರ್ಥರು ಹಾಸನದ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಲಿದ್ದಾಗ ನಡೆದ ಒಂದು ಘಟನೆ. ನಿತ್ಯವೂ ಅವರು ಶಾಲೆಗೆ ಅರ್ಧ ಮುಕ್ಕಾಲು ಗಂಟೆ ತಡವಾಗಿ ಹೋಗುತ್ತಿದ್ದರು. ಅಂದಿನ ದಿನಗಳಲ್ಲಿ ಆ ಶಾಲೆಯ ಮುಖ್ಯೋಪಾಧ್ಯಾಯರಾದ ಮಲ್ಲಪ್ಪಶಾಸ್ತ್ರಿಗಳು ಶಾಲೆ ಆರಂಭವಾಗುವ ಹೊತ್ತಿಗೆ ಮುಖ್ಯದ್ವಾರದಲ್ಲಿ ನಿಂತು ಹೊತ್ತುಮೀರಿ ಬಂದ ವಿದ್ಯಾರ್ಥಿಗಳನ್ನು ಬೆತ್ತದಿಂದ ಹೊಡೆಯುತ್ತಿದ್ದರು. ಆದ್ದರಿಂದ ವಿಷ್ಣುತೀರ್ಥರಿಗೆ ನಿತ್ಯವೂ ಏಟು ಬೀಳುತ್ತಿತ್ತು. ಒಂದು ದಿನ ಶಾಸ್ತ್ರಿಗಳಿಗೇ ಅವರ ಮೇಲೆ ಕರುಣೆ ಉಂಟಾಗಿ, "ಯಾಕಪ್ಪಾ, ನೀನು ದಿನವೂ ಏಟು ತಿನ್ನುತ್ತೀ ? ಹೊತ್ತಿಗೆ ಸರಿಯಾಗಿ ಶಾಲೆಗೆ ಬರುವುದಕ್ಕಾಗುವುದಿಲ್ಲವೇ ? ಮನೆಯಲ್ಲಿ ಏನಾದರೂ ತೊಂದರೆ ಇದೆಯೋ ?" ಎಂದು ಕೇಳಿದರು. ಅದಕ್ಕೆ ವಿಷ್ಣುತೀರ್ಥರು, "ಮನೆಯಲ್ಲಿ ತೊಂದರೆ ಏನೂ ಇಲ್ಲ, ಸಾರ್. ಆದರೆ ನಾನು ನಿತ್ಯಸ್ನಾನ, ಸಂಧ್ಯಾವಂದನೆ, ಅಗ್ನಿಕಾರ್ಯ, ದೇವರ ಪೂಜೆ ಮುಂತಾದ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಮಾಡಿಕೊಂಡು ಶಾಲೆಗೆ ಬರುವ ಹೊತ್ತಿಗೆ ಇಷ್ಟು ಹೊತ್ತಾಗುತ್ತದೆ. ನಾನು ಏಟನ್ನಾದರೂ ತಿನ್ನಬಲ್ಲೆ ; ಆದರೆ ನಿತ್ಯವೂ ಮಾಡಲೇಬೇಕಾದ ಆಹ್ನಿಕಾದಿ ಕರ್ಮಗಳನ್ನು ಮಾತ್ರ ಬಿಡಲಾರೆ" ಎಂದು ಹೇಳಿ ಕೈಯನ್ನು ಒಡ್ಡಿದರು. ಮುಖ್ಯಾಧ್ಯಾಪಕರು ದಿಗ್ಭ್ರಾಂತರಾಗಿ "ಹಾಗೇನಪ್ಪ ! ನೀನು ಇಷ್ಟು ಧರ್ಮನಿಷ್ಠನೆಂದು ನಾನು ತಿಳಿದಿರಲಿಲ್ಲ. ಇನ್ನು ಮೇಲೆ ನೀನು ಎಷ್ಟು ಹೊತ್ತಿಗಾದರೂ ಬಾ. ನಾನು ನಿನ್ನನ್ನು ಶಿಕ್ಷಿಸುವುದಿಲ್ಲ" ಎಂದು ಹೇಳಿದರು.

ಗುರುಗಳಿಗೆ ಅಚ್ಚುಮೆಚ್ಚು

ಹೀಗೆ ವಿಷ್ಣುತೀರ್ಥರು ಶಾಲೆಗೆ ಹೊತ್ತಾಗಿ ಹೋಗುತ್ತಿದ್ದರೂ ಪಾಠಪ್ರವಚನಗಳಲ್ಲಿ ಯಾವಾಗಲೂ ಮುಂದೇ ಇರುತ್ತಿದ್ದರು. ಕಾರಣ, ಅವರು ಶಾಲೆಯಲ್ಲಿ ಉಪಾಧ್ಯಾಯರು ಹೇಳಿಕೊಟ್ಟಿದ್ದನ್ನು ಚೆನ್ನಾಗಿ ಗ್ರಹಿಸಿಕೊಂಡು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದರು. ಅವರ ಗ್ರಹಣಶಕ್ತಿ ಜ್ಞಾಪಕಶಕ್ತಿಗಳು ಚೆನ್ನಾಗಿದ್ದುವು. ಆಗಿನ ಮಾಧ್ಯಮಿಕ ಶಾಲೆಯಲ್ಲಿ (ಮೋಟುಗೈ) ಶೇಷಗಿರಿರಾಯರೆಂಬುವರು

ಅತ್ಯುತ್ತಮವಾಗಿ ಗಣಿತವನ್ನು ಹೇಳಿಕೊಡುತ್ತಿದ್ದರು. ಶ್ರದ್ಧಾಳುಗಳೂ ವಿದ್ಯಾಸಂಪನ್ನರೂ ಆದ ಶ್ರೀನಿವಾಸಯ್ಯ ಮತ್ತು ಲಕ್ಷ್ಮೀನಾರಾಯಣಪ್ಪ ಎಂಬ ಕನ್ನಡ ಪಂಡಿತರು ಹುಡುಗರಿಗೆ ಮನದಟ್ಟಾಗುವಂತೆ ಕನ್ನಡ ಪಾಠಗಳನ್ನು ಹೇಳಿಕೊಡುತ್ತಿದ್ದರಲ್ಲದೆ ವಿದ್ಯಾರ್ಥಿಗಳಿಂದ ಪ್ರಬಂಧಗಳನ್ನು ಬರೆಸಿ ತಿದ್ದಿಕೊಡುತ್ತಿದ್ದರು. ಅವರಿಗೆ ವಿಷ್ಣುತೀರ್ಥರು ಬರೆಯುತ್ತಿದ್ದ ಪ್ರಬಂಧಗಳು ಅಚ್ಚುಮೆಚ್ಚಾಗಿರುತ್ತಿದ್ದವು. ಅವರು ಆ ಪ್ರಬಂಧಗಳಲ್ಲಿನ ವಸ್ತು ನಿರೂಪಣೆ, ವಿಸ್ತಾರಕ್ರಮ, ಸರಳ ಶೈಲಿ, ಶುದ್ಧವಾದ ಭಾಷೆ ಮೊದಲಾದ ಗುಣಗಳನ್ನು ಮುಕ್ತಕಂಠದಿಂದ ಹೊಗಳುತ್ತಲಿದ್ದರು. ಇಷ್ಟಾದರೂ ಶಾಲೆಯಲ್ಲಿ ಮಾಡಿದ ಪಾಠಗಳನ್ನು ಅವರು ಮನೆಯಲ್ಲಿ ಮತ್ತೆ ಓದುತ್ತಿರಲಿಲ್ಲ. ಮನೆಯಲ್ಲಿ ಏನಿದ್ದರೂ ರಾಮಾಯಣ, ಭಾರತ, ಭಾಗವತ, ಸಾಧುಸಂತರ ಚರಿತ್ರೆಗಳು ಮಧ್ವಸಿದ್ಧಾಂತಪ್ರಕಾಶಿನೀ ಎಂಬ ಮಾಸ ಪತ್ರಿಕೆ ಮುಂತಾದವುಗಳನ್ನು ಓದುತ್ತಿದ್ದರು. ಸಾಯಂಕಾಲದ ವೇಳೆ ಸಂಸ್ಕೃತ ಪಾಠಶಾಲೆಗೆ ಹೋಗುತ್ತಿದ್ದರು. ಪರೀಕ್ಷೆಕಾಲದಲ್ಲಿ ಮಾತ್ರ ಅವರ ಅಣ್ಣಂದಿರಿಂದ ಅಲ್ಪಸ್ವಲ್ಪ ಪಾಠಗಳನ್ನು ಹೇಳಿಸಿಕೊಳ್ಳುತ್ತಿದ್ದರು. ಡಿಸ್ಟ್ರಿಕ್ಟ್ ಆಫೀಸಿನಲ್ಲಿ ನೌಕರರಾಗಿದ್ದ ಅವಲಕ್ಕಿ ರಾಘವೇಂದ್ರಾಚಾರ್ಯರೆಂಬ ಪಂಡಿತರು ಸಂಸ್ಕೃತಪಾಠಗಳನ್ನು ಅರೆದುಹೊಯ್ದರು. ಇವರ ತಂದೆಯವರೇ ಇಂಗ್ಲಿಷ್ ವ್ಯಾಕರಣವನ್ನು ಹೇಳಿಕೊಟ್ಟರು. ಇವೆಲ್ಲದರ ಪರಿಣಾಮವಾಗಿ ತೀರ್ಥರು ೧೯೨೭ರಲ್ಲಿ ನಡೆದ ಲೋಅರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾಗಿ ಹಾಸನ ಜಿಲ್ಲೆಗೇ ಮೊದಲ ಸ್ಥಾನವನ್ನು ಗಳಿಸಿದರು. ಇಷ್ಟಾದರೂ ಪರೀಕ್ಷೆಯ ಫಲಿತಾಂಶದ ಬಗ್ಗೆ ಅವರು ಕಾಳಜಿ ವಹಿಸಿರಲಿಲ್ಲ. ಪರೀಕ್ಷೆಯ ಫಲಿತಾಂಶ ಹೊರಬಿದ್ದಾಗ ಅದನ್ನು ತಿಳಿದುಕೊಳ್ಳಲೂ ಅವರು ಶಾಲೆಗೆ ಹೋಗಲಿಲ್ಲ. ಅದರ ಬದಲು ಮನೆಯಲ್ಲೆ ಇದ್ದು ಏನೋ ಪಾರಾಯಣ ಮತ್ತು ಪೂಜೆಯಲ್ಲಿ ಮಗ್ನರಾಗಿದ್ದರು.

ಪ್ರೌಢಶಾಲೆಯಲ್ಲಿ ವ್ಯಾಸಂಗ

ಲೋಅರ್ ಸೆಕಂಡರಿ ಪರೀಕ್ಷೆಯಲ್ಲಿ ವಿಷ್ಣುತೀರ್ಥರು ಉತ್ತಮದರ್ಜೆಯಲ್ಲಿ ತೇರ್ಗಡೆ ಹೊಂದಿದ್ದರಿಂದ ಹೈಸ್ಕೂಲಿನಲ್ಲಿ ಅವರಿಗೆ ಅರ್ಧಶಾಲಾಶುಲ್ಕದ ರಿಯಾಯಿತಿ ದೊರೆಯಿತು. ಅದೃಷ್ಟವಶಾತ್ ಅವರು ಆ ಪಾಠಶಾಲೆಯಲ್ಲಿ ಓದಿದ ಮೂರು ತರಗತಿಗಳಲ್ಲೂ ಅವರಿಗೆ ಉತ್ತಮವಾದ ಅಧ್ಯಾಪಕವರ್ಗದ ಲಾಭ ದೊರಯಿತು. ಅದರಲ್ಲೂ ಮುಖ್ಯವಾಗಿ ಇಂಗ್ಲಿಷ್ ಅಧ್ಯಾಪಕರುಗಳಾದ ಡಿ. ಆರ್. ನಾರಾಯಣರಾವ್, ಬಿ. ಶ್ರೀನಿವಾಸಶಾಸ್ತ್ರಿ, ವಿಜ್ಞಾನಾಧ್ಯಾಪಕರುಗಳಾದ ಸಿ. ಕೆ.

ಲಕ್ಷ್ಮೀನಾರಾಯಣರಾವ್, ಬಿ. ಎಸ್. ವೆಂಕಟಕೃಷ್ಣವಿಠಲ್ ಮತ್ತು ಎಂ. ಎ. ರಂಗಸ್ವಾಮಿ, ಹಾಗೂ ಮುಖ್ಯೋಪಾಧ್ಯಾಯರೂ ಗಣಿತಶಾಸ್ತ್ರತಜ್ಞರೂ ಆದ ಎಸ್. ಟಿ. ರಾಘವಾಚಾರ್—ಇವರುಗಳು ತಮ್ಮ ತಮ್ಮ ವಿಷಯಗಳನ್ನು ಶ್ರದ್ಧೆಯಿಂದ ಬಹು ಚೆನ್ನಾಗಿ ಹೇಳಿಕೊಟ್ಟಿದ್ದರಿಂದ, ವಿಷ್ಣುತೀರ್ಥರು ಮನೆಯಲ್ಲಿ ತೀರಾ ಕಡಿಮೆ ಓದುತ್ತಿದ್ದರೂ ೧೯೨೯ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿ ಸಲೀಸಾಗಿ ತೇರ್ಗಡೆ ಹೊಂದಿದರು.

ಅನುಪೂರಕ ವ್ಯಾಸಂಗ

ಈ ವರ್ಷಗಳಲ್ಲಿ ಅವರು ಮನೆಯಲ್ಲಿದ್ದ ಕೆಲವು ವೇದಾಂತ ಸಂಬಂಧವಾದ ಸಂಸ್ಕೃತ ಗ್ರಂಥಗಳನ್ನೂ ಅವುಗಳ ಕನ್ನಡಾರ್ಥ, ಟೀಕೆ ಟಿಪ್ಪಣಿ ವ್ಯಾಖ್ಯಾನಗಳೊಂದಿಗೆ ಓದುತ್ತಿದ್ದರು. ಅಲ್ಲದೆ ಮೇಲೆ ಹೇಳಿದ ಶ್ರೀ ಅವಲಕ್ಕಿ ರಾಘವೇಂದ್ರಾಚಾರ್ಯರಿಂದ 'ಮಧ್ವ ವಿಜಯ'ವನ್ನು ಸಂಪೂರ್ಣವಾಗಿ ಛಲಾರಿ ವ್ಯಾಖ್ಯಾನ ಸಹಿತ ಕಲಿತರು. ಇದಕ್ಕೂ ಮುಂಚೆ—೧೯೨೭ರಲ್ಲೇ ಶ್ರೀ ರಾಘವೇಂದ್ರಾಚಾರ್ಯರೂ, ಶ್ರೀ ಅಳಗಿರೀಶಾಚಾರ್ಯರೂ ವಿಷ್ಣುತೀರ್ಥರನ್ನು ತಿರುಪತಿಗೆ ಕಳಿಸಿಕೊಟ್ಟಿದ್ದರು. ಅವರಿಗೆ ಅಲ್ಲಿ ಉತ್ತರಾದಿಮಠದ ಸ್ವಾಮಿಗಳಾದ ಶ್ರೀ ಶ್ರೀ ಸತ್ಯಧ್ಯಾನತೀರ್ಥರಿಂದ ಏರ್ಪಡಿಸಲ್ಪಟ್ಟ ವಿದ್ವದ್ಗೋಷ್ಠಿಯಲ್ಲಿ ಪ್ರೋತ್ಸಾಹರೂಪವಾಗಿ ಕಿರಿಯ ವಿದ್ಯಾರ್ಥಿಗಳಿಗಾಗಿ ನಡೆಸಿದ ಸ್ಪರ್ಧೆಯಲ್ಲಿ ಸನ್ಮಾನ ದೊರಕಿತು. ಶ್ರೀಮಾನ್ ರಾಘವೇಂದ್ರಾಚಾರ್ಯರು ನಿವೃತ್ತರಾಗಿ ಮೈಸೂರಿಗೆ ಹೊರಟು ಹೋದಮೇಲೆ, ಹಾಸನದ ಸರ್ಕಾರೀ ಶಾಲೆಯಲ್ಲಿ ಸಂಸ್ಕೃತ ಪಂಡಿತರಾಗಿದ್ದ ವೇ॥ ಶ್ರೀ॥ ಅನಂತಮೂರ್ತ್ಯಾಚಾರ್ಯರಿಂದ ತತ್ವಸಂಖ್ಯಾನ, ತತ್ವವಿವೇಕ ಮತ್ತು ಖಂಡನತ್ರಯಗಳೆಂಬ ಪ್ರಕರಣಗ್ರಂಥಗಳನ್ನು ಹೇಳಿಸಿಕೊಂಡರು. ಇವರಿಬ್ಬರನ್ನೂ ವಿಷ್ಣುತೀರ್ಥ ತಮ್ಮ ಪ್ರಾರಂಭಿಕ ಗುರುಗಳೆಂದು ನೆನೆಯುತ್ತಾ ಈಗಲೂ ವರ್ಷ ವರ್ಷವೂ ಅವರಿಗೆ ಪರ್ವಕಾಲಗಳಲ್ಲಿ ತಿಲತರ್ಪಣವನ್ನು ಕೊಡುತ್ತಾರೆ.

ಕಾಲೇಜಿನಲ್ಲಿ ವಿದ್ಯಾಭ್ಯಾಸ

೧೯೨೯ ರಲ್ಲಿ ವೆಂಕಟರಮಣಯ್ಯನವರಿಗೆ ಚಿತ್ರದುರ್ಗಕ್ಕೆ ವರ್ಗವಾಯಿತು. ಅಲ್ಲಿಂದ ಆರಂಭವಾಗಿ ಕೆಲವು ವರ್ಷಗಳ ಕಾಲ ವಿಷ್ಣುತೀರ್ಥರ ಜೀವನದಲ್ಲಿ ಅನೇಕ ಮಾರ್ಪಾಟುಗಳುಂಟಾದುವು. ಮುಖ್ಯವಾಗಿ ಅವರ ಆಧ್ಯಾತ್ಮಿಕ ದೃಷ್ಟಿಯಲ್ಲಿ ಬದಲಾವಣೆಯಾಗಿ ಜೀವನಪ್ರವಾಹವು ಲೌಕಿಕದ ಕಡೆಗೆ ನುಗ್ಗಿತು. ಅವರು

ಹಾಸನ ಬಿಟ್ಟು ಮೈಸೂರಿಗೆ ಹೋಗಿ ಶ್ರೀಮಾನ್ ಕೇಶವಯ್ಯ ಎಂಬ ಅವರ ತಂದೆಯ ಪರಿಚಿತರ ಮನೆಯಲ್ಲಿ ಊಟವಸತಿಗಾಗಿ ಇದ್ದುಕೊಂಡು ಗವರ್ನ್‌ಮೆಂಟ್ ಇಂಟರ್‌ಮೀಡಿಯಟ್ ಕಾಲೇಜು ಸೇರಿ ವ್ಯಾಸಂಗವನ್ನು ಮುಂದುವರೆಸಿದರು. ಪ್ರಾಚೀನ ಮತ್ತು ಆಧುನಿಕ ಇತಿಹಾಸಗಳ ಜೊತೆ ತರ್ಕಶಾಸ್ತ್ರವನ್ನು ಐಚ್ಛಿಕ ವಿಷಯಗಳನ್ನಾಗಿ ಆರಿಸಿಕೊಂಡು ಜೂನಿಯರ್ ಇಂಟರ್‌ಮೀಡಿಯಟ್ ಆರ್ಟ್ಸ್ ತರಗತಿಗೆ ಸೇರಿದರು. ಅವರು ಪಠ್ಯಪುಸ್ತಕಗಳನ್ನೂ ಸಹ ಕೊಂಡುಕೊಳ್ಳಲಾಗದೆ ಅವರಿವರಿಂದಲೂ ಕಾಲೇಜಿನ ಪುಸ್ತಕಭಂಡಾರದಿಂದಲೂ ಬೇಕಾದ ಪುಸ್ತಕಗಳ ಎರವು ಪಡೆದು ಓದಿಕೊಳ್ಳಬೇಕಾಯಿತು. ಮರುವರ್ಷ ಸೀನಿಯರ್ ಇಂಟರ್‌ಮೀಡಿಯಟ್‌ಗೆ ಬಂದಾಗ ಅವರು ಕೇಶವಯ್ಯನವರ ಮನೆ ಬಿಟ್ಟು ಅವರ ತಮ್ಮ ಪ್ರಹ್ಲಾದರಾವ್ ಮತ್ತು ಚಿಕ್ಕಪ್ಪನ ಮಗ ಶ್ರೀನಿವಾಸರಾವ್‌ರೊಡನೆ ಕಾಲೇಜಿನ ಸಮೀಪದಲ್ಲಿ ಒಂದು ರೂಮನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲೇ ಸ್ವತಃ ಅಡಿಗೆ ಮಾಡಿಕೊಳ್ಳುತ್ತಾ ಓದನ್ನು ಮುಂದುವರಿಸಿದರು. ಆ ಕೊಠಡಿಯಲ್ಲಿ ಸ್ನಾನಕ್ಕೆ ಅವಕಾಶವಿರಲಿಲ್ಲವಾದುದರಿಂದ ಅವರು ನಿತ್ಯ ಬೆಳಗಿನಝಾವವೇ ಎದ್ದು ಇತರ ಜನರು ಬರುವುದಕ್ಕೆ ಮುಂಚೆ ಬೀದಿನಲ್ಲಿಯಲ್ಲೋ ಅಥವಾ ಆಗ ಇದ್ದ ದೊಡ್ಡಕೆರೆ ಅಥವಾ ಕುಕ್ಕನಹಳ್ಳಿಕೆರೆಗೆ ಹೋಗಿ ಸ್ನಾನಮಾಡಿಕೊಂಡು ಬರಬೇಕಾಗಿತ್ತು. ಜೀವನದ ಅತ್ಯಾವಶ್ಯಕ ವೆಚ್ಚಗಳಿಗಾಗುವಷ್ಟು ಹಣವನ್ನು ಮಾತ್ರ ಅವರ ಅಣ್ಣ ರಾಘವೇಂದ್ರರಾವ್ ಕಳಿಸುತ್ತಿದ್ದರು. ಇಷ್ಟೆಲ್ಲಾ ಬವಣೆಗಳಿದ್ದರೂ ಅಣ್ಣ ತಮ್ಮಂದಿರು ಅಲ್ಲೇ ಸುಖವಾಗಿ ಅನ್ಯೋನ್ಯವಾಗಿ ಇದ್ದುಕೊಂಡು ಜೀವನ ನಿರ್ವಹಿಸುತ್ತಾ ಓದನ್ನು ಮುಂದುವರೆಸಿದರು. ಆದರೆ ವಿಷ್ಣುತೀರ್ಥರ ಕೈಬಿಟ್ಟುಹೋದ ಮೊದಲಿನ ಸಾತ್ವಿಕ, ದೈವಿಕ ಕಾರ್ಯಾಚರಣೆಗಳು ಇನ್ನೂ ಚಿಗುರೊಡೆಯಲಿಲ್ಲ. ಅದಕ್ಕಾಗಿ ಅವರು ಮನಸ್ಸಿನಲ್ಲೇ ಬಹಳವಾಗಿ ನೊಂದುಕೊಳ್ಳುತ್ತಿದ್ದರು. ಅವರು ಕಾಲೇಜಿನಲ್ಲಿ ಓದುತ್ತಿದ್ದಾಗ ಎರಡು ತರಗತಿಗಳಲ್ಲೂ ಅವರಿಗೆ ಅಷ್ಟೇನೂ ಹೇಳಿಕೊಳ್ಳುವಂಥಾ ಉಪನ್ಯಾಸಕರು ಬರುತ್ತಿರಲಿಲ್ಲ. ಆದರೆ ಪ್ರಾಚೀನ ಇತಿಹಾಸಕ್ಕೆ ಬರುತ್ತಿದ್ದ ಶ್ರೀ ನಾ. ಕಸ್ತೂರಿ ಮತ್ತು ತರ್ಕಶಾಸ್ತ್ರಕ್ಕೆ ಬರುತ್ತಿದ್ದ ಶ್ರೀಮಾನ್ ಎಂ. ಎ. ವೆಂಕಟರಾವ್ ಮಾತ್ರ ಸೊಗಸಾಗಿ ಬೋಧಿಸುತ್ತಿದ್ದರು. ಹೀಗೆ ಎಡರು ತೊಡರುಗಳ ನಡುವೆಯೇ ಅವರ ಇಂಟರ್‌ಮೀಡಿಯಟ್‌ನ ವ್ಯಾಸಂಗ ಮುನ್ನಡೆಯಿತು. ಆದರ ಜೊತೆಗೇ ಅವರು ಇಂಗ್ಲಿಷ್‌ನಲ್ಲಿ ಶೀಘ್ರಲಿಪಿ (Shorthand) ಬರವಣಿಗೆಯನ್ನೂ ಸ್ವಲ್ಪಮಟ್ಟಿಗೆ ಕಲಿತರು.

ನೆಲೆ ಬದಲಾವಣೆ

ಒಂದೆರಡು ವರ್ಷಗಳಲ್ಲಿ ಅವರ ಮನೆಯ ಕಡೆ ತೀವ್ರವಾದ ಆರ್ಥಿಕ ಮುಗ್ಗಟ್ಟುಗಳು ಬಂದೊದಗಿದುದರಿಂದ ವಿಷ್ಣುತೀರ್ಥರಾಗಲೀ ಅವರ ತಮ್ಮಂದಿರಾಗಲೀ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲಾಗಲಿಲ್ಲ. ಫಾರೆಸ್ಟ್ ಆಫೀಸಿನಲ್ಲಿ ಅಕೌಂಟೆಂಟ್ ಆಗಿದ್ದ ಅವರ ತಂದೆ ೧೯೩೩ರಲ್ಲಿ ಕೆಲಸದಿಂದ ನಿವೃತ್ತರಾದರು. ಅವರ ಅಣ್ಣಂದಿರಾದ ರಾಘವೇಂದ್ರರಾಯರಿಗೂ ಸರಿಯಾಗಿ ಕೆಲಸ ಸಿಗಲಿಲ್ಲ. ಈ ಕಾರಣದಿಂದಾಗಿ ಅವರು ತಮ್ಮ ಇಬ್ಬರೂ ಸಹೋದರರೊಡನೆ ೧೯೩೪ ರಲ್ಲಿ ಬೆಂಗಳೂರು ನಗರಕ್ಕೆ ಬಂದು ಖಾಸಗಿ ಅಧ್ಯಾಪಕರಾಗಿ (Private Tutors) ನೆಲೆಸಿದರು. ಮೂವರೂ ಮನೆಮನೆಗೆ ಹೋಗಿ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳನ್ನೂ ಹಂಚಿಕೊಂಡು ಸುವ್ಯವಸ್ಥೆಯಿಂದ ಪಾಠ ಹೇಳಿಕೊಡಲು ಆರಂಭಿಸಿದರು, ಅವರ ಈ ಉದ್ಯೋಗ ಒಂದೆರಡು ವರ್ಷಗಳಲ್ಲೇ ಬಹಳ ಯಶಸ್ವಿಯಾಯಿತು. ಆದರೆ ೧೯೩೭ ಮಾರ್ಚ್ ಒಂದನೇ ತಾರೀಖು ಅವರ ಅಣ್ಣ ರಾಘವೇಂದ್ರರಾವ್ ಇದ್ದಕ್ಕಿದ್ದಂತೆ ಹೃದಯಾಘಾತದಿಂದ ಮರಣ ಹೊಂದಿದರು. ಆಗ ಚಿಕ್ಕ ವಯಸ್ಸಿನ ವಿಧವೆಯಾದ ಅವರ ಹೆಂಡತಿ ತೌರುಮನೆಗ್ಗೆ ಹೋದವರು ಹಿಂತಿರುಗಿ ಮತ್ತೆ ಈ ಕಡೆ ಬರಲಿಲ್ಲ. ಆಗ ವಿಷ್ಣುತೀರ್ಥರು ಮತ್ತು ಅವರ ತಮ್ಮ ಇಬ್ಬರೇ ಬೆಂಗಳೂರಿನಲ್ಲಿ ಉಳಿದುಕೊಂಡರು. ಆಗ ಅವರ ವಯಸ್ಸು ಅನುಕ್ರಮವಾಗಿ ೨೪ ಮತ್ತು ೨೨ ಆಗಿತ್ತು. ಅವರ ಚಿಕ್ಕ ವಯಸ್ಸಿನ ಇಬ್ಬರು ತಂಗಿಯರೂ ವೃದ್ಧ ತಂದೆತಾಯಿಗಳೂ ಹಾಸನದಲ್ಲಿದ್ದರು. ಸಂಭವಿಸಿದ ದುರ್ಘಟನೆಯಿಂದ ಅವರ ಚೊಕ್ಕ ಸಂಸಾರಕ್ಕೆ ಭಾರಿ ಕುಂದುಂಟಾಯಿತು. ನೌಕೆ ನಡುನೀರಿನಲ್ಲಿ ಮುಳುಗಿದಂತಾಯಿತು. ಇದನ್ನೆಲ್ಲಾ ಉಳಿದ ಸಹೋದರರಿಬ್ಬರೂ ದೀರ್ಘವಾಗಿ ಆಲೋಚಿಸಿ ತಂದೆ ತಾಯಿಗಳನ್ನೂ ತಂಗಿಯರನ್ನೂ ಬೆಂಗಳೂರಿಗೆ ಕರೆಸಿಕೊಂಡು ಅವರ ಖಾಸಗಿ ಅಧ್ಯಾಪಕವೃತ್ತಿಯನ್ನೇ ಮುಂದುವರೆಸಿಕೊಂಡು ಹೋಗುತ್ತಾ ಮಾತಾಪಿತೃಗಳ ಸೇವೆಯನ್ನು ಮಾಡತೊಡಗಿದರು. ಇನ್ನೆಲ್ಲೂ ಬೇರೆ ನೌಕರಿಗಾಗಿ ಪ್ರಯತ್ನಪಡಲಿಲ್ಲ.

ನೈಜ ಜ್ಞಾನಾರ್ಜನೆಗೆ ನಾಂದಿ

ಹೀಗೆ ಜೀವನದ ಯುವಾವಸ್ಥೆಯಲ್ಲಿ ಅನಿರೀಕ್ಷಿತವಾಗಿ ಒದಗಿ ಬಂದ ಈ ಜವಾಬ್ದಾರಿಯನ್ನು ತಮ್ಮನೊಡನೆ ಸೇರಿ ವಿಷ್ಣುತೀರ್ಥರು ತಾಳ್ಮೆಯಿಂದ, ಶಾಂತತೆಯಿಂದ, ಧೈರ್ಯದಿಂದ ವಹಿಸಿದರು. ಈ ನಡುವೆ ಸುಪ್ತವಾಗಿ ಒಳಗೆ

ಅಡಗಿಕೊಂಡಿದ್ದ ಅವರ ಜ್ಞಾನಾರ್ಜನೆಯ ದಾಹ ಹಾಗೂ ಧಾರ್ಮಿಕ ಪ್ರವೃತ್ತಿ ಪುನಃ ಸ್ಫುಟಗೊಂಡಿತು. ಆಗಲೇ ಅವರು ಧಾರ್ಮಿಕ, ಆಧ್ಯಾತ್ಮಿಕ ಗ್ರಂಥಗಳ ಅಧ್ಯಯನವನ್ನು ಆರಂಭ ಮಾಡಿದರು. ಅವರು ಬೆಳಿಗ್ಗೆ, ಸಾಯಂಕಾಲ ವಿದ್ಯಾರ್ಥಿಗಳಿಗೆ ಸಂಸ್ಕೃತ, ಕನ್ನಡ, ವಿಜ್ಞಾನ, ಚರಿತ್ರೆ, ಪೌರನೀತಿ ಮುಂತಾದ ವಿಷಯಗಳನ್ನು ಹೇಳಿಕೊಡುತ್ತಿದ್ದರಲ್ಲದೆ, ಮಧ್ಯಾಹ್ನದಿಂದ ಸಾಯಂಕಾಲದ ವರೆಗೂ ಮೇಲೆ ತಿಳಿಸಿರುವ ವಿಷಯಗಳಲ್ಲಿ ಸರಿಯಾಗಿ ತರಪೇತಿ ಹೊಂದಿ ವಿಶೇಷ ಜ್ಞಾನವನ್ನು ಪಡೆಯುವುದಕ್ಕಾಗಿ ಹಳೆಯ ಹಾಗೂ ಹೊಸಹೊಸ ಪುಸ್ತಕಗಳನ್ನು ಓದಿ ಟಿಪ್ಪಣಿಗಳನ್ನು ಬರೆದುಕೊಳ್ಳುತ್ತಿದ್ದರು. ಆಂಗ್ಲ ಸಾಹಿತ್ಯಕ್ಕೆ ಸಂಬಂಧಪಟ್ಟ ಅನೇಕ ಪುಸ್ತಕಗಳನ್ನೂ ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿದರು. ಇದಕ್ಕೆ ಮುಖ್ಯಪ್ರೇರಕರು ಅವರ ದೊಡ್ಡಪ್ಪನ ಮಕ್ಕಳಾದ ಇಂಗ್ಲೀಷ್ ಸಾಹಿತಿ ಹಾಗೂ ಎಂ. ಎ. ಪದವೀಧರರಾದ ಶ್ರೀ ಪಿ. ಮಾಧವರಾವ್. ಪುಟಕ್ಕೆ ಹಾಕಿದ ಬಂಗಾರದ ಅದಿರು ಹೇಗೆ ಸ್ಫುಟಗೊಳ್ಳುವುದೋ ಹಾಗೇ ಮಾಧವರಾಯರ ಸಹವಾಸದಿಂದ ವಿಷ್ಣುತೀರ್ಥರು ಎಲ್ಲ ವಿಚಾರಗಳಲ್ಲೂ ಸುಸಂಸ್ಕೃತರಾದರು. ಇಂಗ್ಲೆಂಡಿನ ವರ್ಡ್ಸ್‌ವರ್ತ್, ಶೆಲ್ಲಿ, ಥ್ಯಾಕರೆ, ಎಡ್ಮಂಡ್ ಬರ್ಕ್, ಮತ್ತು ಅಮೆರಿಕಾದ ವಿಲ್ ಡ್ಯೂರಾಂಟ್ ಇವರಿಗೆ ಅತ್ಯಂತ ಪ್ರಿಯರಾದ ಲೇಖಕರಾದರು.

ಇಂಗ್ಲಿಷ್ ಭಾಷೆಯಲ್ಲದೆ ಅವರಿಗೆ ಇತರ ಭಾಷೆಗಳಲ್ಲೂ ಅಭಿಮಾನವಿದ್ದು ದರಿಂದ ರಾತ್ರಿಯ ಹೊತ್ತೂ ಸಹ ಪಾಠದಿಂದ ಬಂದು ಊಟವಾದಮೇಲೆ ೧೦ ಗಂಟೆಯಿಂದ ಎರಡು ಮೂರು ಗಂಟೆಯಕಾಲ ದೀಪ ಉರಿಸಿಕೊಂಡು ಕೂತಿದ್ದು ಸಂಸ್ಕೃತ ಪುಸ್ತಕಗಳನ್ನೂ ಧರ್ಮಗ್ರಂಥಗಳನ್ನೂ ಓದುತ್ತಲೋ ಬರೆಯುತ್ತಲೋ ಇರುತ್ತಿದ್ದರು. ಅದೂ ಅಲ್ಲದೆ ಅವರು ೧೯೩೭ರಿಂದ ೧೯೪೭ರ ನಡುವೆ ಕನ್ನಡ, ತೆಲುಗು, ತಮಿಳು, ಉರ್ದು, ಹಾಗೂ ಬಂಗಾಳಿ ಭಾಷೆಗಳನ್ನು ಸ್ವಲ್ಪಮಟ್ಟಿಗೂ, ಹಿಂದೀ ಸಾಹಿತ್ಯವನ್ನು ವಿಶೇಷವಾಗಿಯೂ ಅಭ್ಯಾಸ ಮಾಡಿದರು. ೧೯೩೮ ರಲ್ಲಿ ಮದರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರ ಸಮಿತಿಯವರಿಂದ ನಡೆಸಲ್ಪಟ್ಟ ರಾಷ್ಟ್ರಭಾಷಾವಿಶಾರದ ಪರೀಕ್ಷೆಗೂ ಕುಳಿತಿದ್ದು ಅದರಲ್ಲಿಯೂ ಉತ್ತೀರ್ಣ ರಾದರು. ಅನಂತರ ೧೯೪೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನವರು ಸಂಜೆ ವೇಳೆ ಯಲ್ಲಿ ನಡೆಸುತ್ತಿದ್ದ ಸಾಹಿತ್ಯ ತರಗತಿಗೆ ಸೇರಿಕೊಂಡರು. ಆಗ ಅಲ್ಲಿ ಕನ್ನಡದ ದಿಗ್ಗಜಗಳಾದ ಸರ್ವಶ್ರೀ ಬಿ. ಎಂ. ಶ್ರೀಕಂಠಯ್ಯ, ಸಿ. ಕೆ. ವೆಂಕಟರಾಮಯ್ಯ, ದೇವುಡು ನರಸಿಂಹಶಾಸ್ತ್ರಿ, ಎಂ.ಆರ್. ಶ್ರೀನಿವಾಸಮೂರ್ತಿ, ಜಿ.ಪಿ. ರಾಜರತ್ನಂ, ವಿ. ಸೀ. ಮುಂತಾದವರು ತರಗತಿಗಳನ್ನು ನಡಸುತ್ತಿದ್ದರು. ವಿಷ್ಣುತೀರ್ಥರು ಆ

ವರ್ಷದ ಕೊನೆಯಲ್ಲಿ ನಡೆದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ "ಕನ್ನಡ ಜಾಣ" ಎಂಬ ಉಪಾಧಿಯನ್ನು ಪಡೆದರು.

೧೯೪೧ ರಿಂದ ೧೯೪೭ರ ನಡುವೆ ಅವರು ಮದರಾಸ್ ವಿಶ್ವವಿದ್ಯಾಲಯದವರು ನಡೆಸಿದ (i) ಹಿಂದೀ–ಸಂಸ್ಕೃತ ಭಾಷೆಗಳ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರಲ್ಲದೆ, (ii) ಪಿ. ಒ.ಎಲ್. (Proficiency in Oriental Learning, with special reference to Literary Criticism as applied to Sanskrit Literature) ಮತ್ತು (iii) ದ್ವೈತವೇದಾಂತದಲ್ಲಿ "ಶಿರೋಮಣಿ" ಪರೀಕ್ಷೆಗಳಿಗೂ ಕುಳಿತು ಹೆಚ್ಚು ಜ್ಞಾನಾರ್ಜನೆ ಮಾಡಿಕೊಂಡರು. ಅದೂ ಅಲ್ಲದೆ ಅಲಹಾಬಾದಿನ "ಹಿಂದೀ ಸಾಹಿತ್ಯರತ್ನ" ಪರೀಕ್ಷೆಗೆ ತಯಾರಾಗಿ ೧೯೪೬ರಲ್ಲಿ ಶ್ರೀಕಂಠಶಾಸ್ತ್ರಿಗಳೆಂಬ ಇನ್ನೊಬ್ಬ ಉತ್ಸಾಹಿ ಯುವಕ ಸಾಹಿತಿಯೊಡನೆ ಅಲಹಾಬಾದಿಗೆ ಹೋದರು. ಆದರೆ ಹಿಂದೂ–ಮುಸ್ಲಿಂ ಪಂಗಡಗಳ ಗಲಭೆಯಿಂದಾಗಿ ಪರೀಕ್ಷೆ ನಡೆಯದ ಕಾರಣ ಅವರು ಹಾಗೆಯೇ ಹಿಂತಿರುಗಬೇಕಾಯಿತು. ಮುಂದೆ ಆ ಪರೀಕ್ಷೆಗೆ ಹೋಗುವ ಸಂದರ್ಭವೇ ಒದಗಲಿಲ್ಲ.

ಪಂಡಿತ್ ಮಾಳವಿಯಾರ ಮೆಚ್ಚುಗೆ

ಅಲಹಾಬಾದಿನಿಂದ ಹಿಂತಿರುಗುವುದಕ್ಕೆ ಮುಂಚೆ ಕಾಶೀ ವಿಶ್ವವಿದ್ಯಾಲಯದ ಸಂಸ್ಥಾಪಕರಾದ ಮದನಮೋಹನ ಮಾಳವಿಯಾ ಎಂಬ ಪ್ರಸಿದ್ಧ ದೇಶಭಕ್ತ ಹಾಗೂ ವಿದ್ವನ್ಮಣಿಗಳನ್ನು ಅವರಿಬ್ಬರೂ ಸಂದರ್ಶಿಸಿ, ಅವರೊಡನೆ ಸಂಸ್ಕೃತ ಭಾಷೆಯಲ್ಲೇ ಮಾತಾಡಿ, ತಾವು ಹಾಗೂ ಶ್ರೀಮಾನ್ ಶ್ರೀಕಂಠಶಾಸ್ತ್ರಿಗಳೂ ಬೆಂಗಳೂರಿನಲ್ಲಿ ಕೆಲವು ವರ್ಷಗಳ ಹಿಂದೆ ಸ್ಥಾಪಿಸಿದ್ದ 'ಸಂಸ್ಕೃತಭಾಷಾ ಪ್ರಚಾರ ಸಂಘದ' ಬಗ್ಗೆ ವಿವರಣೆಗಳನ್ನು ಕೊಟ್ಟರು. ಶ್ರೀ ಮಾಳವಿಯಾಜಿಯವರು ಸಂಸ್ಕೃತಭಾಷಾ ಪ್ರಚಾರದ ಬಗ್ಗೆ ಆ ಯುವಕರಿಗಿದ್ದ ಉತ್ಸಾಹವನ್ನೂ ಅವರು ಸಂಸ್ಕೃತದಲ್ಲಿ ಸುಲಲಿತವಾಗಿ ಮಾತನಾಡುತ್ತಲಿದ್ದುದನ್ನೂ ಕಂಡು ಮೆಚ್ಚುಗೆಯಿಂದ ಅವರೀರ್ವರನ್ನೂ ಆಶೀರ್ವದಿಸಿ ಕಳುಹಿಸಿದರು.

ಸದ್ಗುರುಗಳಿಂದ ಮಾರ್ಗದರ್ಶನ

ವಿಷ್ಣುತೀರ್ಥರ ಸುಯೋಗವೆಂದರೆ ಅವರಿಗೆ ಕಾಲಕಾಲಕ್ಕೆ ಸದ್ಗುರುಗಳಿಂದ ಬೋಧನೆ ಮತ್ತು ಮಾರ್ಗದರ್ಶನವಾದದ್ದು. ಅವರ ಆದಿಗುರುಗಳಾದ ರಾಘವೇಂದ್ರಾಚಾರ್ ಮತ್ತು ಅನಂತಮೂರ್ತ್ಯಾಚಾರ್ಯರ ಬಗ್ಗೆ ಈಗಾಗಲೇ ಉಲ್ಲೇಖಿಸ

ಲಾಗಿದೆ. ಮುಂದೆ ೧೯೩೫ನೇ ವರ್ಷದಲ್ಲಿ ಅವರಿಗೆ ಸಾಗರಕಟ್ಟೆ ಸ್ವಾಮಿಗಳಾದ ಪ್ರದ್ಯುಮ್ನತೀರ್ಥರಿಂದ ಮಂತ್ರೋಪದೇಶವಾಯಿತು. ಅದು ನಡೆದದ್ದು ಹೀಗೆ. ಒಂದು ದಿನ ಶ್ರೀಗಳವರು ಬೆಂಗಳೂರು ಚಾಮರಾಜಪೇಟೆಯ ಮೂರನೇ ಬೀದಿಯಲ್ಲಿರುವ ಆಂಜನೇಯಸ್ವಾಮಿ ಗುಡಿಯಲ್ಲಿ ಬಂದು ತಂಗಿದರು. ಅವರ ದರ್ಶನಾರ್ಥವಾಗಿ ವಿಷ್ಣುತೀರ್ಥರು ಅಲ್ಲಿಗೆ ಹೋಗಿ ಶ್ರೀಗಳವರಿಗೆ ನಮಸ್ಕರಿಸಿ, ತಮಗೆ ಆಶೀರ್ವಾದ ಮಾಡಿ ಏನಾದರೂ ಉಪದೇಶ ಮಾಡಬೇಕೆಂದು ಕೋರಿಕೊಂಡರು. ಈ ಸ್ವಾಮಿಗಳು ಸ್ವಲ್ಪ ಕಾಲದ ಹಿಂದೆ ಹಾಸನಕ್ಕೆ ಹೋಗಿದ್ದಾಗ ವಿಷ್ಣುತೀರ್ಥರ ತಂದೆ ತಾಯಿಗಳ ಮನೆಯಲ್ಲಿ ಸುಮಾರು ಒಂದು ತಿಂಗಳು ಬಿಡಾರ ಮಾಡಿ ಅವರ ಹೃತ್ಪೂರ್ವಕವಾದ ಆದರ ಸತ್ಕಾರಗಳನ್ನೂ ಸೇವೆಯನ್ನೂ ಸ್ವೀಕರಿಸಿದ್ದು ಅವರ ಶ್ರದ್ಧಾಭಕ್ತಿಗಳನ್ನು ನೋಡಿ ಮನಸಾರ ಮೆಚ್ಚಿಕೊಂಡಿದ್ದರು. ಆದ್ದರಿಂದ ವಿಷ್ಣುತೀರ್ಥ ಯಾರೆಂದು ತಿಳಿದಾಗ ಶ್ರೀಗಳಿಗೆ ಅವರ ಬಗ್ಗೆ ವಿಶ್ವಾಸ ಮೂಡಿಬಂತು. ಅದಕ್ಕೆ ಸರಿಯಾಗಿ ಆ ಸಮಯದಲ್ಲಿ ಶ್ರೀಗಳ ಸಮ್ಮುಖದಲ್ಲಿ ಪ್ರಸಿದ್ಧ ಹರಿಕಥಾ ವಿದ್ವನ್ಮಣಿಗಳಾದ ಬೇಲೂರು ಕೇಶವದಾಸರು ಇದ್ದರು. ಅವರು ಉಕ್ತ ವೆಂಕಟರಮಣಯ್ಯನವರ ಆಪ್ತಸ್ನೇಹಿತರಾಗಿದ್ದು ಅವರ ಮನೆತನವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಆದ್ದರಿಂದ ಅವರು ಶ್ರೀಗಳಿಗೆ ವಿಷ್ಣುತೀರ್ಥನನ್ನು ತಾವು ಮೊದಲಿನಿಂದಲೂ ನೋಡಿರುವುದಾಗಿಯೂ ಅವನು ಬಹಳ ಯೋಗ್ಯನೆಂದೂ ದೈವಭಕ್ತಿಯುಳ್ಳವನೆಂದೂ ಪ್ರಶಂಸಿಸಿ ಅವನಿಗೆ ಧರ್ಮರಹಸ್ಯವನ್ನು ಉಪದೇಶ ಮಾಡಬಹುದೆಂದು ಶಿಫಾರಸು ಮಾಡಿದರು. ಆದರೂ ಸಹ ಶ್ರೀಗಳು ತೀರ್ಥರನ್ನು ಕುರಿತು "ನಿನಗೆ ಧರ್ಮಗ್ರಂಥಗಳನ್ನು ವ್ಯಾಸಂಗ ಮಾಡಿ ಸರಿಯಾದ ಜ್ಞಾನವನ್ನು ಸಂಪಾದಿಸಲು ಆಸಕ್ತಿ ಇದೆ ಎಂಬುದನ್ನು ಹೇಗೆ ಸಮರ್ಥಿಸುವಿ ?" ಎಂದು ಕೇಳಿದರು. ತಕ್ಷಣ ವಿಷ್ಣುತೀರ್ಥರು ಮನೆಗೆ ಹೋಗಿ ಒಂದು ಕಿರುಹೊತ್ತಿಗೆಯನ್ನು ತಂದು ಸ್ವಾಮಿಗಳ ಮುಂದಿಟ್ಟರು. ಅದು ತತ್ವಸಂಖ್ಯಾನ ಟೀಕೆಯ ಒಂದು ಪ್ರತಿ. ಅದನ್ನು ಅವರೇ ಖುದ್ದಾಗಿ ಕೈಬರಹದಿಂದ ದೇವನಾಗರಿ ಲಿಪಿಯಲ್ಲಿ ಮುದ್ದಾಗಿ ಬರೆದಿದ್ದು ಅಲ್ಲದೆ ಅದರ ಮುಖಪುಟವನ್ನು ಬಹಳ ಶ್ರದ್ಧಾಸಕ್ತಿಯಿಂದ ಕೆಂಪು ಕರಿ ಶಾಯಿಗಳಲ್ಲಿ ಚಿತ್ರಚಿತ್ರವಾಗಿ ಅಲಂಕರಿಸಿದ್ದರು. ಅದನ್ನು ನೋಡಿದೊಡನೆಯೇ ಶ್ರೀಗಳು ಸಂತೃಪ್ತರಾಗಿ 'ವಿಷ್ಣುರಲಂಕಾರಪ್ರಿಯಃ' ಎಂದು ಉದ್ಗರಿಸಿ, ಅವರಿಗೆ ರಹಸ್ಯವಾದ ಮಂತ್ರಗಳನ್ನು ಉಪದೇಶ ಮಾಡಲು ಒಪ್ಪಿ, ಮಾರನೇ ದಿನ ಬರುವಂತೆ ತಿಳಿಸಿದರು. ಉಪದೇಶ ಮಾಡುವ ಮುಂಚೆ ಅವರು ತೀರ್ಥರಿಗೆ

ಮುಖಕ್ಷೌರ ಮಾಡಿಕೊಳ್ಳಬಾರದು, ಏಕಾದಶೀ ವ್ರತವನ್ನು ಕಟ್ಟುನಿಟ್ಟಾಗಿ ಆಚರಿಸಬೇಕು ಮುಂತಾದ ನಿಬಂಧನೆಗಳನ್ನು ವಿಧಿಸಿದರು.

ಶ್ರೀ ಸತ್ಯಧ್ಯಾನತೀರ್ಥರಿಂದ ಶಾಂತಿಪಾಠ

ಎಲ್ಲಕ್ಕಿಂತ ಮಿಗಿಲಾಗಿ ೧೯೩೯ರಲ್ಲಿ ವಿಷ್ಣುತೀರ್ಥರಿಗೆ ಉತ್ತರಾದಿ ಮಠದ ಹಿರಿಯ ಹಾಗೂ ಅತ್ಯಂತ ಶ್ರೇಷ್ಠ ಗುರುಗಳಾದ ಶ್ರೀ ಶ್ರೀ ಸತ್ಯಧ್ಯಾನತೀರ್ಥಂಗಳವರಿಂದ ಶಾಂತಿಪಾಠವಾದದ್ದು ಅವರ ಜೀವನದಲ್ಲೇ ಅತ್ಯಂತ ಮಹತ್ತರವಾದ ಘಟನೆಯೆಂದು ಹೇಳಬಹುದು. ಅದು ನಡೆದ ಬಗೆ ಹೀಗೆ : ಶ್ರೀಗಳವರು ಉತ್ತರ ಹಿಂದೂಸ್ಥಾನದಲ್ಲೆಲ್ಲಾ ಸಂಚಾರ ಮಾಡಿ ಹೋದೆಡೆಯಲ್ಲೆಲ್ಲಾ ಮಧ್ವಮತ ಸಿದ್ಧಾಂತದ ಪ್ರಚಾರ ಮಾಡಿ ವಿರುದ್ಧ ಮತಗಳ ವಾದಿಗಳನ್ನು ತಮ್ಮ ಜ್ಞಾನ ಪ್ರತಿಭೆ ಮತ್ತು ವಾಗ್ಝರಿಯಿಂದ ಸೋಲಿಸಿ ೧೯೩೯ರಲ್ಲಿ ಬೆಂಗಳೂರಿಗೆ ಬಂದು ನಾಲ್ಕಾರು ತಿಂಗಳು ಶಂಕರಪುರದಲ್ಲಿರುವ ತಮ್ಮ ಮಠದಲ್ಲಿ ನೆಲೆಸಿದ್ದರು. ನಿತ್ಯವೂ ಯಥೇಚ್ಛವಾಗಿ ಪೂಜೆ ಪುರಸ್ಕಾರಗಳು, ತೀರ್ಥಪ್ರಸಾದಗಳು, ವಿದ್ವತ್ಸಭೆಗಳು, ಭಾಷಣಗಳು, ವಿಜೃಂಭಣೆಯಿಂದ ನಡೆಯುತ್ತಿದ್ದವು. ಎಲ್ಲೆಲ್ಲೂ ಅವರ ಜ್ಞಾನ, ವಿದ್ವತ್ತು, ಉದಾರತೆ ಬಗ್ಗೆ ಮಾತುಗಳು ಕೇಳಿಬರುತ್ತಿದ್ದವು. ಹೀಗಿರುವಾಗ ಒಂದು ದಿನ ಅವರು ಮಠದಲ್ಲೇ ಆರಾಮವಾಗಿ ಕುಳಿತಿರುವಾಗ ವಿಷ್ಣುತೀರ್ಥರು ತಮ್ಮ ಪರಿಚಿತರಾದ ಕೃಷ್ಣಾಚಾರ್ಯರ ಜೊತೆ ಹೋಗಿ ಶ್ರೀಗಳಿಗೆ ನಮಸ್ಕಾರ ಮಾಡಿದರು. ಆಗ ಸ್ವಾಮಿಗಳ ಬಳಿ ಇದ್ದ ಜ್ಞಾನಿಗಳೂ ವಿಷ್ಣುತೀರ್ಥರನ್ನು ಚೆನ್ನಾಗಿ ಬಲ್ಲವರೂ ಆದ ಅಕ್ಷೋಭ್ಯಾಚಾರ್ಯರೆಂಬ ಶಿಷ್ಯರು ಅವರನ್ನು ಸ್ವಾಮಿಗಳಿಗೆ ಪರಿಚಯ ಮಾಡಿಕೊಟ್ಟರು. ತಕ್ಷಣ ಅವರು ತಾವು ಬರೆದಿದ್ದ ೨೪ ಪುಟಗಳ ಗುರುಮಂತ್ರಾರ್ಥದ ಹೊತ್ತಿಗೆಯನ್ನು ಸ್ವಾಮಿಗಳಿಗೆ ಅರ್ಪಿಸಿ ಕೃಪೆ ಮಾಡಿ ಅದನ್ನು ತಿದ್ದಿಕೊಡಬೇಕೆಂದು ಬಿನ್ನವಿಸಿಕೊಂಡರು. ಅದನ್ನು ತೀರ್ಥರು ತಮ್ಮ ತಾಯಿಯ ಅರಿವಿಗಾಗಿ ಕನ್ನಡದಲ್ಲಿ ಬರೆದಿದ್ದರಲ್ಲದೆ ಎಲ್ಲೆಲ್ಲಿ ಹೇಗೆ ಕರನ್ಯಾಸ ಮಾಡಬೇಕು ಎಂಬುದನ್ನೂ ಚಿತ್ರಗಳ ಮೂಲಕ ತೋರಿಸಿದ್ದರು. ಅದರ ಜೊತೆಗೆ ಆರಂಭದಲ್ಲಿ ತಾವೇ ರಚಿಸಿದ ಒಂದು ಸಂಸ್ಕೃತ ಶ್ಲೋಕವನ್ನು ಬರೆದಿದ್ದರು. ಅದರಲ್ಲಿ ತಮ್ಮ ಇಷ್ಟದೇವರ ಧ್ಯಾನ ಮಾಡಿ ಅದನ್ನು ಬರೆದಿದ್ದ ಉದ್ದೇಶವನ್ನೂ ನಿರೂಪಿಸಿದ್ದರು. ಅದನ್ನು ಓದಿ ಸ್ವಾಮಿಗಳು ಮೆಚ್ಚುಗೆಯನ್ನು ಸೂಚಿಸಿದರು. ಆ ಹೊತ್ತಿಗೆಯಲ್ಲಿ ಶ್ರೀಗಳವರು ಒಂದು ಕಡೆ ಮಾತ್ರ ಏನನ್ನೋ ತಿದ್ದಿ ಲೇಖಕರಿಗೆ ಮೂರು ದಿನಗಳಾದ ಬಳಿಕ ಹಿಂತಿರುಗಿ ಕೊಟ್ಟರು. ಆ ಸಮಯದಲ್ಲಿ

ತೀರ್ಥರು ತಮಗೆ ಶಾಂತಿಪಾಠ ಹಾಕಬೇಕೆಂದು ಬಹು ವಿನಯದಿಂದ ಕೋರಿ ಕೊಂಡರು. ಆಗ ಅವರು ಒಂದು ನಿಶ್ಚಿತ ದಿನ ತಾವು ಚಾಮರಾಜಪೇಟೆ ಆರನೇ ಬೀದಿಗೆ ಭಿಕ್ಷಾರ್ಥವಾಗಿ ಬರುವುದಾಗಿಯೂ, ಅವತ್ತು ವಿಷ್ಣುತೀರ್ಥ ಅವರಲ್ಲಿಗೆ ಒಂದು ಉಪದೇಶವನ್ನು ಪಡೆಯಬಹುದೆಂದೂ ಆಜ್ಞಾಪಿಸಿದರು. ಆ ದಿನ ಸ್ವಾಮಿ ಗಳು ವಿಷ್ಣುತೀರ್ಥರನ್ನು ಆದರದಿಂದ ಹತ್ತಿರ ಕೂರಿಸಿಕೊಂಡು ಶಾಂತಿಪಾಠ ಹಾಕಿ ಸೂತ್ರಭಾಷ್ಯವನ್ನು ಆರಂಭಿಸಿದರು. ಅಷ್ಟೇ ಅಲ್ಲದೆ ಅವರನ್ನು ಶ್ರೀ ಅಕ್ಷೋಭ್ಯಾ ಚಾರ್ಯರ ಜೊತೆ ಮಾಡಿ ಉತ್ತರಾದಿ ಮಠದ ಆವರಣದೊಳಗೇ ವಾಸಿಸು ತ್ತಿದ್ದು ಆ ಮಠದ ದ್ವೈತವೇದಾಂತ ಪ್ರಾಧ್ಯಾಪಕರಾಗಿದ್ದ ಮಧ್ವಶಾಸ್ತ್ರಸಂಪನ್ನ ರಾದ ಶ್ರೀರಂಗಂ ಮಾಧವಾಚಾರ್ಯರ ಬಳಿಗೆ ಕಳಿಸಿ ಅವರ ಸಂಶಯಗಳನ್ನು ನಿವಾ ರಣೆ ಮಾಡಬೇಕೆಂದು ಹೇಳಿಕಳುಹಿಸಿದರು. ವೇದಮೂರ್ತಿ ಮಾಧವಾಚಾರ್ಯರು ವಿಷ್ಣುತೀರ್ಥರ ವಿನಯಸಂಪನ್ನತೆಗೆ ಮೆಚ್ಚಿ ಪ್ರೀತ್ಯಾದರಗಳಿಂದ ಮನೆಯಲ್ಲೇ ವೇದಾಂತಪಾಠ ಹೇಳಿಕೊಡಲು ಆರಂಭ ಮಾಡಿದರು.

೬ || ಶ್ರೀರಂಗ ಮಾಧವಾಚಾರ್ಯರಲ್ಲಿ ಶಿಷ್ಯತ್ವ

ವೇದಮೂರ್ತಿ ಮಾಧವಾಚಾರ್ಯರು ವಿಷ್ಣುತೀರ್ಥರಿಗೆ ಹೆಚ್ಚು-ಕಡಿಮೆ ಎಂಟು ವರ್ಷಗಳ ತನಕ ಪಾಠ ಹೇಳಿಕೊಟ್ಟರು. ಅವರು ಸರ್ವಮೂಲಗ್ರಂಥಗಳೆ ಲ್ಲವನ್ನೂ (ತಾತ್ಪರ್ಯನಿರ್ಣಯ, ಭಾಗವತತಾತ್ಪರ್ಯಾದಿ ಕೆಲವನ್ನು ಬಿಟ್ಟು) ಉಪದೇಶಿಸಿ, ಮಧ್ವಸಿದ್ಧಾಂತದ ಉಚ್ಚಶ್ರೇಣಿಯ ಎಲ್ಲಾ ಗ್ರಂಥಗಳಲ್ಲಿಯ ಆಯ್ದ ಭಾಗಗಳನ್ನು ಒಂದೊಂದಾಗಿ ಬೋಧಿಸಿದರು. ಅಲ್ಲದೆ ಕೃಷ್ಣ ಯಜು ರ್ವೇದಸಂಹಿತೆ, ಅರಣ್ಯಕ ಮತ್ತು ಬ್ರಾಹ್ಮಣಗಳನ್ನೂ ಋಗ್ವೇದಸಂಹಿತೆಯ ಪ್ರಥಮಾಷ್ಟಕವನ್ನೂ ಸಸ್ವರವಾಗಿ ಹೇಳಿಕೊಟ್ಟರು. ಆ ಕಾಲದಲ್ಲೇ ವಿಷ್ಣು ತೀರ್ಥರು ಮದ್ರಾಸ್ ವಿಶ್ವವಿದ್ಯಾಲಯದ ದ್ವೈತವೇದಾಂತಶಿರೋಮಣಿ ಪರೀಕ್ಷೆಗೆ ಕುಳಿತಿದ್ದು. ಈ ಸಂದರ್ಭದಲ್ಲಿ ಅವರು ಶಿರೋಮಣಿ ಪರೀಕ್ಷೆಯ ಪಠ್ಯ ಪುಸ್ತಕಗಳಲ್ಲೊಂದಾದ ಸಿದ್ಧಾಂತಕೌಮುದಿಯನ್ನು ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀಮಾನ್ ತಿರುನಾರಾಯಣಯ್ಯಂಗಾರ್ಯರ ಮಕ್ಕಳು ಎನ್. ಟಿ. ಶ್ರೀನಿವಾಸಯ್ಯಂಗಾರ್ಯರಲ್ಲಿ ಅಧ್ಯಯನ ಮಾಡಿದರು. ಅದಕ್ಕೂ ಮಿಗಿಲಾಗಿ ಅವರು ಹಿಂದೆಯೇ ವ್ಯಾಕರಣದ ಪೂರ್ಣಜ್ಞಾನವನ್ನು ದಯಪಾಲಿಸುವಂತೆ ಮನೆಯಲ್ಲಿ ಅನನ್ಯ ಭಕ್ತಿಯಿಂದ ನಲವತ್ತೆಂಟು ದಿನ ವಾಯು ಸ್ತುತಿಯಿಂದ ಪ್ರಾಣದೇವರ ಅಭಿಷೇಕ ಮಾಡಿದ್ದರು. ಅದು ಫಲ ಕೊಟ್ಟಿತು.

ಕೆಲವು ಅಹಿತ ಘಟನೆಗಳ ಪರಿಣಾಮ

ಜೀವನಚಕ್ರ ಸುತ್ತುತ್ತಲೇ ಇರುವುದರಿಂದ ಪ್ರತಿಯೊಬ್ಬನ ಬಾಳಿನಲ್ಲೂ ಅನೇಕ ಹಂತಗಳಲ್ಲಿ ಏರುಪೇರುಗಳಾಗುವುದು ಸ್ವಾಭಾವಿಕ. ಅಂತೆಯೇ ವಿಷ್ಣು ತೀರ್ಥರ ಬದುಕಿನಲ್ಲೂ ಸುಮಾರು ೧೯೪೩–೪೪ರಿಂದ ಆರಂಭವಾಗಿ ನಾಲ್ಕಾರು ವರ್ಷಗಳ ತನಕ ಕೆಲವು ಅಹಿತ ಘಟನೆಗಳು ನಡೆದು ಅವರ ಮನಸ್ಸಿನ ಮೇಲೆ ಭಾರೀ ಪರಿಣಾಮವನ್ನುಂಟುಮಾಡಿದವು. (೧) ಮೊದಲನೆಯದಾಗಿ ಅವರು ಚೆನ್ನಾಗಿ ಅಭ್ಯಾಸಮಾಡಿ ತಯಾರಾಗಿ ಕುಳಿತಿದ್ದ ಶಿರೋಮಣಿ ಪರೀಕ್ಷೆಯಲ್ಲಿ ಕೆಲವು ವಿಶೇಷ ಕಾರಣಗಳಿಂದ, ಮುಖ್ಯವಾಗಿ ದೈವೇಚ್ಛೆಯ ಪ್ರಕಾರ ಅವರು ಖಾತರಿಯಾಗಿ ನಿರೀಕ್ಷಿಸಿದ ಅಂಕಗಳು ಬಾರದಿದ್ದುದರಿಂದ ಅವರಿಗೆ ಬಿ.ಓ.ಎಲ್. (ಅದೇ ಮುಂದೆ ಎಂ. ಎ. ಪದವಿಗೆ ಸ್ವಯಂ ಪರಿವರ್ತಿತವಾದ) ಪರೀಕ್ಷೆಗೆ ಕೂಡುವ ಅರ್ಹತೆ ಸ್ವಲ್ಪದರಲ್ಲಿ ತಪ್ಪಿಹೋಯಿತು. (೨) ಇದಕ್ಕೂ ಮುಂಚೆ ಅವರ ಪ್ರಬಲ ಪ್ರೋತ್ಸಾಹಿಗಳಾಗಿದ್ದ ಶ್ರೀ ಶ್ರೀ ಸತ್ಯಧ್ಯಾನತೀರ್ಥರು ದೈವಾಧೀನ ರಾದರು. (೩) ೧೯೪೪ನೇ ಡಿಸೆಂಬರ್ ತಿಂಗಳಲ್ಲಿ ಅವರ ಮಾತೃಶ್ರೀಯವರು ಸ್ವರ್ಗಸ್ಥರಾದರು. (೪) ೧೯೪೮ರಲ್ಲಿ ಅವರ ತಂದೆ ತೀರಿಹೋದರು. (೫) ಅದಾದ ಅಲ್ಪಕಾಲದಲ್ಲಿಯೇ ಅವರ ಪರಮ ವಿದ್ಯಾಗುರುಗಳಾದ ವೇ|| ಮಾಧವಾಚಾರ್ಯರು ಪರಂಧಾಮವನ್ನೈದಿದರು. (೬) ಕಡೆಯದಾಗಿ, ವಿಷ್ಣುತೀರ್ಥರು ನಿಸ್ವಾರ್ಥತೆ ಯಿಂದ ಸೇವೆ ಸಲ್ಲಿಸುತ್ತಲಿದ್ದ ಹಿಂದೀ ಪ್ರಚಾರ ಸಭೆಯ ಕೆಲವು ಸದಸ್ಯರು ನಿಷ್ಕಾ ರಣವಾಗಿ ಅವರೊಡನೆ ವೈಮನಸ್ಯ ಹೊಂದಿ ಅವರಿಗೆ ತೀವ್ರವಾದ ಖೇದ ಉಂಟು ಮಾಡಿದರು. ಇವುಗಳೆಲ್ಲದರ ಪರಿಣಾಮವಾಗಿ ಅವರ ಅಂತರಾಳದಲ್ಲೇ ಹುದುಗಿ ಕೊಂಡಿದ್ದ ವೈರಾಗ್ಯಭಾವವು ತಾನಾಗಿ ಹೊರಹೊಮ್ಮಿತು.

ಈ ನಡುವೆ ವಿಷ್ಣುತೀರ್ಥರಿಗೆ ಒಟ್ಟು ಕುಟುಂಬದಲ್ಲಿದ್ದು ಏನೇನು ಕರ್ತವ್ಯ ಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಿದ್ದಾಯಿತು ಎನಿಸಿತು. ಅವರ ಇಬ್ಬರು ತಂಗಿಯರಿಗೂ ಸಕಾಲದಲ್ಲಿ ಸರಿಯಾದ ಕಡೆ ಮದುವೆಯಾಯಿತು. ತಮ್ಮ ನಿಗೂ ವಿವಾಹವಾಯಿತು. ತೀರ್ಥರು ಮಾತ್ರ ತಂದೆ–ತಾಯಿಗಳು ಎಷ್ಟು ಹೇಳಿ ದರೂ ವಿವಾಹಕ್ಕೊಪ್ಪದೇ ಜೀವನದಲ್ಲಿ ಇನ್ನೂ ಹೆಚ್ಚು ಮಹತ್ವದ ಸಾಧನೆ ಮಾಡಬೇಕೆಂಬ ಆಕಾಂಕ್ಷೆಯಿಂದ ಬ್ರಹ್ಮಚಾರಿಯಾಗೇ ಉಳಿದರು. ಈಗ ಅವರು ತಾವು ಹೊತ್ತಿದ್ದ ಜವಾಬ್ದಾರಿಯೆಲ್ಲಾ ಹೆಚ್ಚು ಕಡಿಮೆ ಕಳೆಯಿತೆಂದು ತಿಳಿದು ಇನ್ನು ಮುಂದೆ ಪಾರಮಾರ್ಥಿಕ ಜೀವನ ನಡೆಸಬೇಕೆಂದು ತೀರ್ಮಾನಿಸಿದರು. ಅದರ ಮೊದಲನೆಯ ಮೆಟ್ಟಲಾಗಿ ಅವರು ಹದಿನಾಲ್ಕು ವರ್ಷಗಳಿಂದಲೂ

ಕೀರ್ತಿಶೇಷರಾದ ಸಾಗರಕಟ್ಟೆ ಮಠದ
ಹಿಂದಿನ ಸ್ವಾಮಿಗಳಾದ ಶ್ರೀ ಪ್ರದ್ಯುಮ್ನತೀರ್ಥರು
(ವಿಷ್ಣುತೀರ್ಥರಿಗೆ ಗುರುಮಂತ್ರ ಉಪದೇಶ ಮಾಡಿದ ಗುರುಗಳು)



ತತ್ವಸಂಖ್ಯಾನ ಟೀಕಾ ಹಸ್ತಪ್ರತಿಯ ರಕ್ಷಾಪುಟ
(ಸಾಗರಕಟ್ಟೆ ಸ್ವಾಮಿಂಗಳ ಮೆಚ್ಚಿಗೆ ಪಡೆದದ್ದು)


तत्त्वसङ्ख्यानटिप्पणी
राघवेन्द्रतीर्थीया
श्रीसीतारामचन्द्राय नमः

ತತ್ವಸಂಖ್ಯಾನಕ್ಕೆ ರಾಯರ ಟಿಪ್ಪಣಿಯ ಮೊದಲ ಪುಟ
(ಸಾಗರಕಟ್ಟೆ ಸ್ವಾಮಿಗಳ ಮೆಚ್ಚಿಗೆ ಪಡೆದದ್ದು)



ऋग्भाष्ये

वायो तान् प्रस्थितान् पिब ॥१॥ उभा देवा दिविस्पृशा इन्द्रवा-
यू हवामहे । अस्य सोमस्य पीतये ॥२॥ इन्द्रवायू मनोजुवा
विप्रा हवन्त ऊतये । सहस्राक्षा धियस्पती ॥३॥ मित्रं वयं ह-
वामहे वरुणं सोमपीतये । जज्ञाना पूतदक्षसा ॥४॥ ऋते-
न यावृतावृधावृतस्य ज्योतिषस्पती । ता मित्रावरुणा हु-
सर्वदेवानां ज्ञानाधिक्यौ दिविस्पृशौ । मनसः प्रेरकौ चै-
व बहुज्ञानौ धियस्पती ॥ जज्ञानौ यजमानौ तु यज-
मानस्य शोधकौ । परेण ब्रह्मणा तस्मिन् वृद्धौ सत्यपती

द्वि० अ० २३ सू
॥१०४

ಪಾರಾಯಣಕ್ಕಾಗಿ ಬರೆದು ಕೊಂಡ ಋಗ್ಭಾಷ್ಯ ಪ್ರತಿಯ ಪುಟ

ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದ ಖಾಸಗಿ ಶೈಕ್ಷಣಿಕ ವೃತ್ತಿಯನ್ನು ತ್ಯಜಿಸಿ, ೧೯೪೭ರ ಏಪ್ರಿಲ್ ತಿಂಗಳಲ್ಲಿ ಅವರ ತಂದೆ ಮತ್ತು ಭಾವಂದಿರಾದ ಶ್ರೀ ರಘೂತ್ತಮಪುಟ್ಟಿಯವರೊಡನೆ ಯಾತ್ರಾರ್ಥವಾಗಿ ಹೊರಟು ಹಂಪೆ, ಯಂತ್ರೋದ್ಧಾರಕರ (ಪ್ರಾಣದೇವರ) ಕ್ಷೇತ್ರ, ನವವೃಂದಾವನಾದಿ ಸ್ಥಳಗಳಿಗೆ ಹೋಗಿ ಕೊನೆಗೆ ಮಂತ್ರಾಲಯ ಸೇರಿದರು. ಯಾತ್ರೆ ಮುಗಿಸಿಕೊಂಡು ತಂದೆ, ಭಾವ ಹಿಂತಿರುಗಿದರು. ಆದರೆ ವಿಷ್ಣುತೀರ್ಥರು ಮಾತ್ರ ಮಂತ್ರಾಲಯದಲ್ಲೇ ಉಳಿದುಕೊಂಡು ಶ್ರೀ ಗುರುವರ್ಯರ ಸೇವೆ ಮಾಡಲುಪಕ್ರಮಿಸಿದರು.

ಮಂತ್ರಾಲಯದಲ್ಲಿ ರಾಯರ ಸೇವೆ

ಈ ಸೇವೆಯ ಉದ್ದೇಶ ಅವರಿಗೆ ಗುರುಗಳು ಜ್ಞಾನ, ಭಕ್ತಿ, ವೈರಾಗ್ಯಗಳನ್ನು ದಯಪಾಲಿಸಲೆಂದೂ ಅಧ್ಯಯನ ಮಾಡಿದ ವೇದಾಂತ ವಿದ್ಯೆ ಸಿದ್ಧಿಸಬೇಕೆಂಬುದು ಮಾತ್ರ ಆಗಿತ್ತೇ ವಿನಃ ಯಾವ ಪ್ರಾಪಂಚಿಕ ಕಾಮಾರ್ಥಗಳ ಈಡೇರಿಕೆಯೂ ಆಗಿರಲಿಲ್ಲ. ಅವರು ಸೇವೆ ಮಾಡಲುಪಕ್ರಮಿಸಿದ ಆರಂಭದ ದಿನಗಳಲ್ಲಿ ಮಠದ ಕೆಲವು ನೌಕರರು ವಿಷ್ಣುತೀರ್ಥರ ಬಗ್ಗೆ ಏನೂ ತಿಳಿಯದೆ ಅವರು ಸೇವೆಯ ನೆಪ ಮಾಡಿಕೊಂಡು ಕವಳಧ್ವಂಸಕ್ಕಾಗಿ ಬಂದಿದ್ದಾರೆಂದು ಭಾವಿಸಿ ಅವರನ್ನು ಮೂದಲಿಸಲು ಶುರು ಮಾಡಿದ್ದರು. ಆದರೆ ಒಂದು ದಿನ, ವಿಷ್ಣುತೀರ್ಥ ಶಿರೋಮಣಿ ಪರೀಕ್ಷೆಗೆ ಕುಳಿತಿದ್ದೂ, ಹಿಂದೀ ವಿದ್ವತ್ ಪಾಸಾದದ್ದೂ, ಅಲಹಾಬಾದಿನ ಸಾಹಿತ್ಯರತ್ನ ಪರೀಕ್ಷೆಗೆ ಹೋಗಿದ್ದೂ ತಿಳಿದ ಅವರ ಪರಿಚಿತರಾದ ಶ್ರೀಪಾದಪುತ್ರರು ಮಠದ ಉದ್ಯೋಗಿಗಳಿಂದ ತೀರ್ಥರಿಗೆ ಆಗುತ್ತಿದ್ದ ಅವಹೇಳನವನ್ನು ಕಣ್ಣಾರೆ ಕಂಡು ಅವರಿಗೆ, 'ವಿಷ್ಣುತೀರ್ಥರ ಗೊಡವೆಗೆ ಮಾತ್ರ ಯಾರೂ ಹೋಗಬೇಡಿ, ಅವರ ಯೋಗ್ಯತೆ ನಿಮಗೆ ಗೊತ್ತಿಲ್ಲ. ಅವರು ಬಂದಿರುವುದು ರಾಯರ ಸೇವೆಗಾಗಿ' ಎಂದು ಗದರಿಸಿ ಎಚ್ಚರಿಕೆ ಕೊಟ್ಟರು. ಅಂದಿನಿಂದ ತೀರ್ಥರು ಯಾರ ತಂಟೆಯೂ ಕಿರುಕುಳವೂ ಇಲ್ಲದೆ ತಮ್ಮ ಪಾಡಿಗೆ ತಾವು ರಾಯರ ಸೇವೆ ಮಾಡಿಕೊಂಡಿರುತ್ತಿದ್ದರು. ಸೇವೆಯ ಅಂಗವಾಗಿ ಪಾರಾಯಣ, ಅಷ್ಟಮಹಾಮಂತ್ರ ಜಪ, ದ್ವಾಸಪ್ತತಿ ಮಹಾಮಂತ್ರ ಜಪಗಳ ಜೊತೆ ಅವರು ರಾಯರ ಗುಡಿಗೆ ಲೇಪನ ಮಾಡುವ ಗಂಧವನ್ನು ಮೂರು ತಿಂಗಳವರೆಗೆ ತೇದುಕೊಟ್ಟರು.

ಒಂದು ದಿನ ಮಠದ ಪಾಠಶಾಲೆಯಲ್ಲಿ ಒಬ್ಬ ಪಂಡಿತರು ಬಾಲಕರಿಗೆ ಸಂಸ್ಕೃತ ವ್ಯಾಕರಣ ಹೇಳಿಕೊಡುತ್ತಿದ್ದರು. ತೀರ್ಥರು ಅಂದು ಅದೇ ಆವರಣದಲ್ಲಿ ಕುಳಿತುಕೊಂಡು ಧ್ಯಾನ ಮಾಡುತ್ತಿದ್ದರು. ಒಬ್ಬ ವಿದ್ಯಾರ್ಥಿ ಬೋಧಿತ

ವಾದ ವ್ಯಾಕರಣದ ವಿಷಯವಾಗಿ ಏನೋ ಅಸ್ಪಷ್ಟವಾದುದನ್ನು ನಿವಾರಣೆ ಮಾಡಬೇಕೆಂದು ಅಧ್ಯಾಪಕರನ್ನು ಕೇಳಿಕೊಂಡ. ಅದಕ್ಕೆ ಅವರು ರೇಗಿ, "ಏ, ತಲೆ ಹರಟೆ, ಎಷ್ಟು ಹೇಳಿಕೊಡುತ್ತೇನೋ ಅಷ್ಟು ಕಲಿ. ಪುಸ್ತಕದಲ್ಲಿರುವುದೇ ಹಾಗೆ. ಅದಕ್ಕೆ ಟೀಕೆ ಟಿಪ್ಪಣಿಗಳನ್ನು ಕೇಳಬೇಡ" ಎಂದು ಗದರಿಸಿ ಅವನ ಬಾಯಿ ಮುಚ್ಚಿಸಿದರು. ಈ ಸಂಭಾಷಣೆಯನ್ನು ಕೇಳಿದ ವಿಷ್ಣುತೀರ್ಥರು ಸ್ವಲ್ಪ ಮುಂದೆ ಬಂದು ಅಧ್ಯಾಪಕರನ್ನು ಕುರಿತು, "ದಯವಿಟ್ಟು ವಿದ್ಯಾರ್ಥಿಯ ಮೇಲೆ ಕೋಪ ಮಾಡಿಕೊಳ್ಳಬೇಡಿ, ಸ್ವಾಮಿ. ಅವನಿಗೆ ಅರ್ಥವಾಗದುದನ್ನು ಕೇಳಿದರೆ ಅದರಲ್ಲೇನು ತಪ್ಪು? ಅವನು ಕೇಳಿದ ವ್ಯಾಕರಣಾಂಶ ನಿಜವಾಗಿಯೂ ಕಠಿಣವಾಗಿದೆ. ಕ್ಷಮಿಸಿ, ನಾನು ಅವನ ಸಂಶಯವನ್ನು ನಿವಾರಿಸುತ್ತೇನೆ" ಎಂದು ಹೇಳಿ ಆ ವ್ಯಾಕರಣಾಂಶ ವನ್ನು ಉದಾಹರಣೆಗಳ ಸಹಿತ ಸ್ಪಷ್ಟವಾಗಿ ವಿವರಿಸಿದರು. ಅದನ್ನು ಕೇಳಿ ಅಧ್ಯಾ ಪಕರಿಗೆ ದಂಗುಬಡಿದಂತಾಯಿತು. ಅವರಿಗೇ ಆ ವಿಷಯ ಗೊತ್ತಿರಲಿಲ್ಲ. ಅಂದಿ ನಿಂದ ಆ ಪಂಡಿತರು ವಿಷ್ಣುತೀರ್ಥರ ಬಗ್ಗೆ ಸದಭಿಪ್ರಾಯವನ್ನು ಹೊಂದಿದರಲ್ಲದೆ ಅವರ ಆಪ್ತಮಿತ್ರರಾದರು.

ತೀರ್ಥರು ಮಂತ್ರಾಲಯದಲ್ಲಿದ್ದಷ್ಟು ದಿನಗಳೂ ಗುರುಸೇವೆಯನ್ನುಳಿದ ಸಮಯಲ್ಲಿ ಆ ಊರಿನಲ್ಲಿದ್ದ ಹುಡುಗರನೇಕರಿಗೆ ಆದರದಿಂದ ಒಂದಲ್ಲ ಒಂದು ವಿಷಯದಲ್ಲಿ—ಇಂಗ್ಲೀಷ್, ಕನ್ನಡ, ಸಂಸ್ಕೃತ, ಹಿಂದೀ ಹೀಗೆ ಯಾವ ಭಾಷೆ ಯಲ್ಲಾದರೂ ಬೇಕುಬೇಕಾದ ಪಾಠಗಳನ್ನು ಉಚಿತವಾಗಿ ಹೇಳಿಕೊಡುತ್ತಾ ಅವರಿ ಗೆಲ್ಲಾ ಅಚ್ಚುಮೆಚ್ಚಿನವರಾಗಿದ್ದರು. ಅವರ ಸಂಯಮ, ನಡತೆ, ವಿದ್ಯೆ, ವಿಚಾರ ಶೀಲತೆಗಳಿಂದ ಅನೇಕ ಹಿರಿಯರೂ ಸಹ ಅವರಿಗೆ ಆಪ್ತರಾದರು.

ಮಂತ್ರಾಲಯದಿಂದ ಹಿಂತಿರುಗಿದ್ದು

ಹೀಗೆ ಅವರು ಮಂತ್ರಾಲಯದಲ್ಲಿ ಸುಮಾರು ಎಂಟು ತಿಂಗಳು ಇದ್ದು ಕಟಂಕಟಿ ಸೇವೆ ಸಲ್ಲಿಸಿದರು. ಆದರೆ ದಸರಾ ಹೊತ್ತಿಗೆ ಅವರಿಗೆ ಮಲೇರಿಯಾ ಆಗಿ ದೇಹಸ್ಥಿತಿ ಕೆಟ್ಟಿತು. ಆ ಸಮಯದಲ್ಲಿ ಕೆಲವು ಆಪ್ತರು ಅವರಿಗೆ ಔಷಧಿ ಕೊಟ್ಟು ಚೆನ್ನಾಗಿ ನೋಡಿಕೊಂಡು ಬಂಧುಗಳಿಗಿಂತಲೂ ಹೆಚ್ಚಾಗಿ ಆರೈಕೆ ಮಾಡಿದರು. ಆದರೂ ಅನೀಮಿಯಾದ (ರಕ್ತಹೀನತೆಯ) ಕಾರಣದಿಂದ ಬಹಳ ನಿಶ್ಯಕ್ತರಾದರು. 'ಈ ಸ್ಥಿತಿಯಲ್ಲಿ ನಿನಗೆ ಮನಃಪೂರ್ವಕವಾಗಿ ಸೇವೆ ಮಾಡುವುದಕ್ಕಾಗುವುದಿಲ್ಲ, ಸದ್ಯ ಇಲ್ಲಿಂದ ಹೊರಟುಹೋಗು. ಪುನಃ ಬೇಕಾದಾಗ ನಿನ್ನನ್ನು ಕರೆಸಿಕೊಳ್ಳುವೆ' ಎಂದು ರಾಯರು ಅವರಿಗೆ ಸ್ವಪ್ನದಲ್ಲಿ ಸ್ಪಷ್ಟ ಸೂಚನೆ ಕೊಟ್ಟ ಕಾರಣ, ಅವರು

ಸೇವೆಯನ್ನು ನಿಲ್ಲಿಸಿ ಡಿಸೆಂಬರ್ ಕಡೆಯ ವಾರದಲ್ಲಿ ಮಂತ್ರಾಲಯ ಬಿಟ್ಟು ಬೆಂಗಳೂರಿಗೆ ಬಂದು ತಮ್ಮನ ಮನೆ ಸೇರಿದರು. ಆಮೇಲೆ ಕೆಲವು ತಿಂಗಳು ಹಾಸನಕ್ಕೆ ಹೋಗಿ ಅಲ್ಲಿ ಅವರ ತಂಗಿ, ತಂದೆ–ಭಾವಂದಿರ ಜೊತೆ ಇದ್ದು ಔಷಧೋಪಚಾರ ಮಾಡಿಕೊಂಡರು. ಈ ಮಧ್ಯದಲ್ಲೇ ೧೯೪೮ರ ಏಪ್ರಿಲ್ ತಿಂಗಳಲ್ಲಿ ಅವರ ತಂದೆ ವೆಂಕಟರಮಣಯ್ಯನವರು ದೈವಾಧೀನರಾದ್ದರಿಂದ ಅವರ ಉತ್ತರಕ್ರಿಯೆಗಳನ್ನೆಲ್ಲಾ ಹಾಸನದಲ್ಲೇ ತಮ್ಮನೊಂದಿಗೆ ನಡೆಸಿ, ಬೆಂಗಳೂರಿಗೆ ಹಿಂದಿರುಗಿದರು. ಅಲ್ಲಿ ಪುನಃ ಒಂದು ವರ್ಷ ಕಾಲ ಹಿಂದಿನಂತೆ ತಮ್ಮನ ಜೊತೆ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲು ಆರಂಭಿಸಿದರು.

ಸಂಸ್ಕೃತದ ಸರಳ ಪಾಠಗಳ ಲೇಖನ

ಈ ಕಾಲದಲ್ಲಿ ಅವರು ಬಿಡುವಾದಾಗಲ್ಲೆಲ್ಲ ಸಂಸ್ಕೃತದ ಸರಳ ಪಾಠಗಳನ್ನು ವ್ಯಾಕರಣಬದ್ಧವಾಗಿ, ಅವರದೇ ಆದ ಒಂದು ಹೊಸ ರೀತಿಯಲ್ಲಿ ಕನ್ನಡ ಭಾಷೆಯಲ್ಲಿ ಬರೆದು ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ 'ದೇಶಬಂಧು' ಎಂಬ ದಿನ ಪತ್ರಿಕೆಯಲ್ಲಿ ಪ್ರತಿ ಭಾನುವಾರದ ದಿನಗಳಲ್ಲಿ ಪ್ರಕಟಿಸುತ್ತಿದ್ದರು. ಅದು ಬಹಳ ಯಶಸ್ವಿಯಾಗಿ ಅನೇಕ ಓದುಗರ ಮೆಚ್ಚುಗೆಯನ್ನು ಗಳಿಸಿತು. ಹೀಗೆ ಅವರ ೧೯ ಪಾಠಗಳು ಮುದ್ರಿತವಾದುವು. ಆದರೆ ಕೆಲವು ತಿಂಗಳ ನಂತರ ದುರ್ದೈವದಿಂದ ಆ ಪತ್ರಿಕೆಯೇ ನಿಂತುಹೋದುದರಿಂದ ಅವರು ಮುಂಗಡವಾಗಿ ಬರೆದುಕೊಟ್ಟಿದ್ದ ಇನ್ನೂ ೧೨ ಪಾಠಗಳು ಮುದ್ರಿತವಾಗಲೇ ಇಲ್ಲ. ಅಲ್ಲದೇ ಅವುಗಳ ಪ್ರತಿಗಳನ್ನು ಲೇಖಕರು ಇಟ್ಟುಕೊಳ್ಳದೆ ಇದ್ದುದರಿಂದ ಅವು ಕಳೆದೇಹೋದವು ಮತ್ತು ಮುಂದೆ ಬರೆಯಬೇಕೆಂದುಕೊಂಡಿದ್ದ ಸುಮಾರು ಇನ್ನೂ ಇಪ್ಪತ್ತು ಪಾಠಗಳನ್ನು ಅವರು ಬರೆಯಲೇ ಇಲ್ಲ. ಹೀಗಾಗಿ ಅವರು ಸ್ಫೂರ್ತಿಯಿಂದ ಆರಂಭಿಸಿದ ವ್ಯಾಕರಣದ ಹೆಸರೇ ಅಡಗಿಹೋಯಿತು.

ಆ ವರ್ಷ ವಿಷ್ಣುತೀರ್ಥರು ಕೈಗೊಂಡ ಇನ್ನೊಂದು ಕಾರ್ಯವೆಂದರೆ ಮಧ್ಯಾಹ್ನದ ವೇಳೆಯಲ್ಲಿ ಸರ್ಕಾರಿ ಸೆಂಟ್ರಲ್ ಮತ್ತು ಕೋಟೆ ಪ್ರೌಢಶಾಲೆಯ ತರಗತಿಗಳಲ್ಲಿ ಹಿಂದಿಯನ್ನು ಗೌರವಾರ್ಥವಾಗಿ ಹೇಳಿಕೊಡಲು ಒಪ್ಪಿಕೊಂಡದ್ದು. ಆದರೆ ಎರಡು ವರ್ಷಗಳ ನಂತರ ಉನ್ನತ ಅಧಿಕಾರಿಗಳು ಅವರ ಆ ಕೆಲಸವನ್ನು ಖಾಯಂ ಮಾಡುವುದಾಗಿ ತಿಳಿಸಿದಾಗ ಅವರು ನಿರಾಕರಿಸಿದರು.

ಬಂಧವಿಮೋಚನೆ

೧೯೪೯ರ ಏಪ್ರಿಲ್‌ನಲ್ಲಿ ಇವರ ತಂದೆಯ ವರ್ಷಾಬ್ಧಿಕ ಕರ್ಮಗಳೆಲ್ಲಾ

ಮುಗಿದವು. ನಂತರ ಅದೇ ಜೂನ್ ತಿಂಗಳಲ್ಲಿ ಮದರಾಸಿನಲ್ಲಿ ವಾಸವಾಗಿದ್ದ ಅನೇಕ ಹೋಟಲುಗಳ ಮಾಲೀಕರಾದ ಕೆ. ಸೀತಾರಾಮರಾಯರು ಅವರ ಮನೆಯಲ್ಲೇ ಇದುಕೊಂಡು ಅವರ ಮಕ್ಕಳಿಗೆ ಪಾಠ ಹೇಳಿಕೊಡುವಂಥಾ ಒಬ್ಬ ನುರಿತ ಅಧ್ಯಾಪಕರು ಬೇಕೆಂದು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದರು. ವಿಷ್ಣುತೀರ್ಥರು ಅವರ ತಮ್ಮನನ್ನು ಪ್ರೋತ್ಸಾಹಿಸಿ ಆ ಹುದ್ದೆಗೆ ಅರ್ಜಿ ಹಾಕಿಸಿದರು. ಆ ಕೆಲಸ ಅವರಿಗೆ ದೊರೆತಾಗ ತೀರ್ಥರು ನೆಮ್ಮದಿಯ ಉಸಿರನ್ನು ಬಿಟ್ಟರು. ಹೀಗೆ ಅವರು ಸಾಂಸಾರಿಕ ಜೀವನದ ಎಲ್ಲಾ ಜವಾಬ್ದಾರಿಗಳಿಂದಲೂ ಬಂಧನಗಳಿಂದಲೂ ವಿಮುಕ್ತರಾಗಿ ಇನ್ನು ಮುಂದೆ ತಾವು ಮುಂಚಿನಿಂದಲೂ ಆಶಿಸುತ್ತಿದ್ದಂತೆ ಸಾತ್ವಿಕ ಹಾಗೂ ಪಾರಮಾರ್ಥಿಕ ಬಾಳನ್ನು ನಡೆಸಲು ಸಿದ್ಧರಾದರು. ಈ ನಿರ್ಧಾರಕ್ಕೆ ಅನುಗುಣವಾಗಿ ಅವರು ತಮ್ಮ ಹಿರಿಯರಿಂದ ಬಂದಿದ್ದ ಅಲ್ಪಸ್ವಲ್ಪ ಆಸ್ತಿಯನ್ನು ನೋಡಿಕೊಂಡು ಸರಿಯಾಗಿ ನಿರ್ವಹಿಸಲು ಅವರ ತಮ್ಮನಿಗೆ ಅಧಿಕಾರ ಪತ್ರ (ಜನರಲ್ ಪವರ್ ಆಫ್ ಅಟಾರ್ನಿ) ಯನ್ನು ರಿಜಿಸ್ಟರ್ ಮಾಡಿಸಿಕೊಟ್ಟರು. ಆದರೂ ವೈಯಕ್ತಿಕ ಕಾರಣಗಳಿಂದಾಗಿ ಅವರು ಇನ್ನೂ ಸ್ವಲ್ಪ ಕಾಲ ಬೆಂಗಳೂರಿನಲ್ಲೇ ಇರಬೇಕಾಯಿತು. ಈ ಸಮಯದಲ್ಲಿ ತಾವಿದ್ದ ಚಾಮರಾಜಪೇಟೆ ಮೂರನೇ ಬೀದಿಯಲ್ಲೇ "ಭಾಷಾಪ್ರಚಾರ ಸಭೆ" ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅನೇಕ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಭಾಷೆಗಳನ್ನು, ಮುಖ್ಯವಾಗಿ ಹಿಂದಿ, ಸಂಸ್ಕೃತವನ್ನು ಏನೂ ಶುಲ್ಕ ಪಡೆಯದೆ ಹೇಳಿಕೊಡುತ್ತಿದ್ದರು.

ಮಂತ್ರಾಲಯಕ್ಕೆ ಪುನರಾಗಮನ

೧೯೫೦ನೇ ಆಗಸ್ಟ್‌ನಲ್ಲಿ ಅವರು ಮಂತ್ರಾಲಯಕ್ಕೆ ಮತ್ತೆ ಆರಾಧನೆಗಾಗಿ ಹೋದರು. ಇದು, ಮೂರು ವರ್ಷಗಳ ಹಿಂದೆ ಆ ರಾಯರು ತಿಳಿಸಿದ್ದ ಸೂಚನೆಯ ಪೂರಕವಾಗಿತ್ತು. ಅದೇ ಸಮಯದಲ್ಲೇ ಮದರಾಸಿನಲ್ಲಿದ್ದ ಅವರ ತಮ್ಮನೂ ಆರಾಧನೆಯ ಸಲುವಾಗಿಯೇ ಮಂತ್ರಾಲಯಕ್ಕೆ ಬಂದಿದ್ದರು. ಇಬ್ಬರೂ ಮಂತ್ರಾಲಯಕ್ಕೆ ಬಂದು ಗುಂಜಳ್ಳಿ ಶ್ರೀನಿವಾಸಾಚಾರ್ಯರ ಮನೆಯಲ್ಲಿ ಇಳಿದುಕೊಂಡರು. ಮುಖ್ಯ ಆರಾಧನೆಯ ರಾತ್ರಿ ಬೆಳ್ಳಿ ರಥೋತ್ಸವ ಹೊರಟಾಗ ವಿಷ್ಣುತೀರ್ಥರೂ ಅವರ ತಮ್ಮನೂ ಜನಜಂಗುಳಿಯಿಂದ ಸಾಕಷ್ಟು ದೂರದಲ್ಲಿ ಕೈಕಟ್ಟಿಕೊಂಡು ನಿಂತಿದ್ದರು. ಅರ್ಚಕವರ್ಗದವರೂ ಭಕ್ತಾದಿಗಳೂ ಮಂತ್ರಪಠನ ಮಾಡುತ್ತ ಹೂವು, ಹಣ್ಣು, ಉತ್ತುತ್ತೆಗಳನ್ನು ಉತ್ಸವಮೂರ್ತಿ ಕಡೆ ಎಸೆಯಲು ಆರಂಭಮಾಡಿದಾಗ ಒಂದು ಉತ್ತುತ್ತೆ ಉತ್ಸವಮೂರ್ತಿಯ ಮೇಲೆ ಬಿದ್ದು

ಚಿಮ್ಮಿಕೊಂಡು ದೂರದಲ್ಲಿ ನಿಂತಿದ್ದ ವಿಷ್ಣುತೀರ್ಥರ ಮುಷ್ಟಿಗೆ ಬಂದು ತಾಕಿತು. ಅವರು ಕೈಬೆರಳನ್ನು ಸರಿಪಡಿಸಿಕೊಂಡಾಗ ಆ ಉತ್ತುತ್ತೆ ಅವರ ಕೈಯೊಳಗೇ ಸೇರಿ ಕೊಂಡಿತು. ಹೀಗೆ ಗುರುಸಾರ್ವಭೌಮರು ತೀರ್ಥರಿಗೆ ನಿಂತ ಕಡೆಯೇ ತಮ್ಮ ಪ್ರಸಾದವನ್ನು ಕೊಟ್ಟು ಅನುಗ್ರಹಿಸಿದರು. ಇದರಿಂದ ಮೊದಲು ಕೆಲವು ನಿಮಿಷ ಸಂತೋಷವಾಯಿತಾದರೂ ಅವರಿಗೆ ಆಮೇಲೆ 'ಫಲ–ಮಂತ್ರಾಕ್ಷತೆ ಎರಡೂ ಕೊಡಬೇಕಾಗಿರುವಾಗ ಮಂತ್ರಾಕ್ಷತೆಯಿಲ್ಲದೆ ಕೇವಲ ಫಲ ಕೊಟ್ಟಿದ್ದರ ಅರ್ಥ ವೇನು ?' ಎಂಬ ಸಂದೇಹವೇ ಬಲವಾಯಿತು. ಆದ್ದರಿಂದ ಅವರು ರಾಯರನ್ನು ಪ್ರಾರ್ಥಿಸಿಕೊಂಡು ಮಲಗಿದರು. ಆ ರಾತ್ರಿಯೇ ಬೆಳಗಿನ ಝಾವದಲ್ಲಿ ರಾಯರು ಆಗಿದ್ದ ಪೀಠಾಧಿಪತಿಗಳ ರೂಪದಿಂದ ಕಾಣಿಸಿಕೊಂಡು "ನಿನ್ನ ಮೇಲೆ ನಮ್ಮ ಪೂರ್ಣಾನುಗ್ರಹವಿದೆ, ನಿನ್ನ ಬೇಡಿಕೆಯನ್ನು ಶ್ರೀ ಯಂತ್ರೋದ್ಧಾರಕ ಪ್ರಾಣ ದೇವರೇ ಈಡೇರಿಸುವರು. ನಾವೂ ಅಲ್ಲಿಗೇ ಹೊರಟಿದ್ದೇವೆ, ನೀನೂ ಅಲ್ಲಿಗೆ ಬಂದು ಅವರ ಸೇವೆ ಮಾಡು" ಎಂದು ಸೂಚಿಸಿ ಸಂದೇಶ ನೀಡಿದರು.

ಯಂತ್ರೋದ್ಧಾರಕರ ಸನ್ನಿಧಿಗೆ ಬಂದದ್ದು

ಈ ಸಂದೇಶ ಸಿಕ್ಕಮೇಲೆ ಮಂತ್ರಾಲಯದಿಂದ ಹಂಪೆಗೆ ಹೋಗಿ ಯಂತ್ರೋ ದ್ಧಾರಕ ಪ್ರಾಣದೇವರ ದರ್ಶನ ಮಾಡಿಕೊಂಡು ಬೆಂಗಳೂರಿಗೆ ಹಿಂದಿರುಗಿದರಾ ದರೂ ಪುನಃ ಹಂಪೆಗೆ ಹಿಂದಿರುಗುವುದೇ ಅವರ ಧ್ಯೇಯವಾಯಿತು. ಜನವರಿ ಯಲ್ಲಿ ಅವರ ತಾಯಿಯ ಆಬ್ದಿಕ ಬರುವುದಿತ್ತು. ಅದನ್ನು ಮಾಡಲು ಮದರಾಸಿ ನಲ್ಲಿದ್ದ ತಮ್ಮನ ಮನೆಗೆ ಹೋದರು. ಈ ಸಂದರ್ಭದಲ್ಲೇ ಅವರ ಬಂಧುಗಳೊ ಬ್ಬರು ತಮಗೆ ವಾಯುಸ್ತುತಿಯ ಶ್ಲೋಕಗಳ ಭಾವಾರ್ಥವನ್ನು ಸರಳ ಶೈಲಿಯಲ್ಲಿ ಬರೆದು ಕಳುಹಿಸುವಂತೆ ಪ್ರಾರ್ಥಿಸಿಕೊಂಡರು. ಅದನ್ನು ಅವರು 'ಇದೂ ಭಗವ ತ್ಪ್ರೇರಣೆಯೇ ಆಗಿದೆ. ಈ ಅರ್ಥವನ್ನೇ ಪ್ರಾಣದೇವರಿಗೆ ವಿಚಾರಣೀಯ ಪ್ರಬಂಧ ವಾಗಿ (ಥೀಸಿಸ್ ಆಗಿ) ಸಮರ್ಪಿಸೋಣ' ಎಂದುಕೊಂಡು ಕರಡುಪ್ರತಿ ಬರೆದು ಅದರ ಶುದ್ಧ ಪ್ರತಿಗಳನ್ನು ದಿನಾಂಕ ೩–೨–೧೯೫೧ರಲ್ಲಿ ಬರೆದು ಆ ರಾತ್ರಿಯೇ ಮದ್ರಾಸಿನಿಂದ ಹೊಸಪೇಟೆಗೆ ಹೊರಟು ೪–೨–೧೯೫೧ ರಂದು ಹಂಪೆ ಸೇರಿ ದರು. ಮರುದಿನವೇ ಪುರಂದರದಾಸರ ಆರಾಧನೆಯಿತ್ತು. 'ಅಂಜಿಕಿನ್ನ್ಯಾತಕಯ್ಯ ಸಜ್ಜನರಿಗೆ, ಸಂಜೀವರಾಯರ ಸ್ಮರಣೆ ಮಾಡಿದಮೇಲೆ' ಎಂಬ ಅವರ ಕೀರ್ತನೆ ಹೇಳಿಕೊಂಡೇ ಆ ದಿನ—೫–೨–೧೯೫೧—ಮಂತ್ರಾಲಯದ ರಾಯರನ್ನು ಸ್ಮರಿಸಿ ಕೊಂಡು ಯಂತ್ರೋದ್ಧಾರಕರ ಸೇವೆ ಆರಂಭಿಸಿದರು.

ಯಂತ್ರೋದ್ಧಾರಕರ ಸೇವೆ

ವಿಷ್ಣುತೀರ್ಥರು ಹಂಪೆಯ ಯಂತ್ರೋದ್ಧಾರಕರ ಗುಡಿಯಲ್ಲಿ ಪೂರಾ ಒಂದು ವರ್ಷ ಇದ್ದರು. ನಿತ್ಯವೂ ಅವರು ಬೆಳಗ್ಗೆ ಸೂರ್ಯೋದಯಕ್ಕೆ ಮುಂಚೆಯೇ ಚಕ್ರತೀರ್ಥದಲ್ಲಿ ಸ್ನಾನ ಮಾಡಿ ಪ್ರಾಣದೇವರ ಗುಡಿಯಲ್ಲಿ ಕುಳಿತು ಕೊಂಡು ಪ್ರಾತಃಕಾಲದ ಆಹ್ನಿಕಗಳನ್ನೂ ದೇವರ ಪೂಜೆ, ಜಪಾನುಷ್ಠಾನಗಳನ್ನೂ ಮಾಡಿಕೊಳ್ಳುತ್ತಿದ್ದರು. ಬಾಕಿ ಕಾಲದಲ್ಲಿ ಪುರಾಣಾದಿ ಗ್ರಂಥಗಳನ್ನೂ ಓದಿ ಬರೆ ಯುವ ಅಭ್ಯಾಸವನ್ನಿಟ್ಟುಕೊಂಡಿದ್ದರು. ಕೆಲವು ದಿನ ಗುಡಿಯ ಅರ್ಚಕರಾವ ವೇ|| ಬ್ರ|| ಶ್ರೀ ವೆಂಕೋಬಾಚಾರ್ಯರು ಪ್ರಾಣದೇವರ ಅಭಿಷೇಕ ಅರ್ಚನೆಗಳನ್ನು ಮಾಡಲು ಅವರಿಗೇ ಒಪ್ಪಿಸಿಬಿಡುತ್ತಿದ್ದರು. ಆಗ ಇವರು ಶ್ರದ್ಧಾಭಕ್ತಿಯಿಂದ ಆ ಕಾರ್ಯವನ್ನು ನಿರ್ವಹಿಸುತ್ತಿದ್ದರಲ್ಲದೆ ಭಕ್ತಾದಿಗಳು ಕೊಟ್ಟ ಕಾಣಿಕೆ ಮಂಗಳಾ ರತಿ ಹಣ ಮುಂತಾದುವನ್ನು ಒಂದು ಕಾಸೂ ತೆಗೆದುಕೊಳ್ಳದೆ ಪ್ರಾಮಾಣಿಕವಾಗಿ ವೆಂಕೋಬಾಚಾರ್ಯರಿಗೇ ಕೊಟ್ಟುಬಿಡುತ್ತಿದ್ದರು. ಈ ಕಾರಣದಿಂದ ಅವರೀರ್ವರ ನಡುವೆ ಗಾಢವಾದ ಸ್ನೇಹ ಬೆಳೆಯಿತು.

ಅದ್ಭುತ ಸ್ವಪ್ನ

ಹೀಗೆ ವಿಷ್ಣುತೀರ್ಥರು ಅಲ್ಲಿ ಸೇವೆ ಮಾಡಿಕೊಂಡಿರುವಾಗ ಪ್ರಾರಂಭದಲ್ಲೇ ಒಂದು ದಿನ ಬೆಳಗಿನಝಾವ ಅವರಿಗೆ ಒಂದು ಅದ್ಭುತ ಸ್ವಪ್ನ ಬಿತ್ತು. ಆ ಸ್ವಪ್ನ ದಲ್ಲಿ ಇವರು ಚಕ್ರತೀರ್ಥದಲ್ಲಿ ಸ್ನಾನ ಮಾಡುತ್ತಿದ್ದಾರೆ. ಆಗ ಪ್ರವಾಹದಲ್ಲಿ ಇವರ ಹಿರಿಯ ಅಣ್ಣ ರಾಘವೇಂದ್ರರಾವ್ (೧೯೩೬ರಲ್ಲಿ ಸತ್ತುಹೋದವರು.) ತೇಲಿಬರು ತ್ತಿದ್ದಂತೆ ಕಾಣಿಸಿತು. ಇವರು ಗಾಬರಿಯಾಗಿ ಪ್ರಾಣದೇವರನ್ನು ನೆನೆಸಿಕೊಂಡು ಈಜು ಬರದಿದ್ದರೂ ಪ್ರವಾಹದಲ್ಲಿ ನುಗ್ಗಿ ಅವರನ್ನು ತಂದು ದಡಕ್ಕೆ ಹಾಕಿದರು, ಆದರೆ ಅದರಲ್ಲಿ ಪ್ರಾಣವೇ ಇರಲಿಲ್ಲ. ಆಗ ಅವರು, "ಈ ಮೃತ ದೇಹವನ್ನು ಸೀನಿಯರ್ ಸರ್ಜನ್ನರಾದ ಪ್ರಾಣದೇವರ ಬಳಿಗೆ ಒಯ್ದು ತೋರಿಸೋಣ ; ಅವರು ಅನುಗ್ರಹ ಮಾಡಿದರೆ ಇವನು ಬದುಕುವುದೇನೂ ಹೆಚ್ಚಲ್ಲ" ಎಂದು ಕೊಂಡು ಆ ಜಡದೇಹವನ್ನು ಗುಡಿಗೆ ತಂದು ಪ್ರಾಣದೇವರ ಮುಂದೆ ಹಾಕಿದರು. ಇಲ್ಲಿಗೆ ಆ ಸ್ವಪ್ನ ಮುಗಿಯಿತು.

ಆಗ ತೀರ್ಥರು ನಿದ್ದೆಯಿಂದ ನಿಜವಾಗಿ ಎದ್ದು ಪ್ರಾಣದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ 'ಸ್ವಾಮಿ, ನಮ್ಮಣ್ಣನನ್ನು ಬದುಕಿಸಿ, ಉದ್ಧಾರ ಮಾಡಿ' ಎಂದು ಕಳಕಳಿಯಿಂದ ಪ್ರಾರ್ಥಿಸಿಕೊಂಡು ಪುನಃ ಮಲಗಿಕೊಂಡರು. ಆಗ ಬೆಳ

ಗಿನ ಝಾವ ನಾಲ್ಕೂವರೆ ಗಂಟೆಯಾಗಿತ್ತು. ಮಲಗಿಕೊಂಡ ಸ್ವಲ್ಪ ಹೊತ್ತಿಗೆ ಪುನಃ ನಿದ್ದೆ ಬಂತು. ಆಗ ಹಿಂದಿನ ಸ್ವಪ್ನವೇ ಮುಂದುವರೆಯಿತು. ಇವರು ಅಣ್ಣನ ಶವದ ಮುಂದೆ ಸಪ್ಪೆ ಮುಖ ಹಾಕಿಕೊಂಡು ಕುಳಿತಿದ್ದಾರೆ. ಆಗ ಪ್ರಾಣ ದೇವರು ಎದ್ದು ಬಂದು 'ಏನಪ್ಪಾ ನಿನ್ನ ಕಾಟ?' ಎಂದು ಹೇಳುತ್ತಾ ಆ ಶವವನ್ನು ಸ್ಪರ್ಶ ಮಾಡುತ್ತಾರೆ. ಕೂಡಲೇ ರಾಘವೇಂದ್ರರಾವ್ ಕಣ್ಣುಬಿಟ್ಟು ನೋಡು ತ್ತಾರೆ. ತಮ್ಮನನ್ನು ಕಂಡು ಅವರಿಗೂ ಬ್ರಹ್ಮಾನಂದವಾಗಿ ವಿಷ್ಣುತೀರ್ಥರನ್ನು ತಬ್ಬಿಕೊಂಡು 'ನೋಡಪ್ಪಾ, ನಿನ್ನಿಂದ ನಾವೆಲ್ಲಾ ಉದ್ಧಾರವಾದೆವು. ಆದರೆ ನನಗೆ ಬಹಳ ಹಸಿವಾಗಿದೆ. ಏನಾದರೂ ಇಡ್ಲಿ-ಗಿಡ್ಲಿ ಇದ್ದರೆ ತಿನ್ನುವುದಕ್ಕೆ ಕೊಡು' ಎಂದು ಕೇಳಿದರು. ಅಲ್ಲಿಗೆ ಸ್ವಪ್ನ ಮುಗಿದುಹೋಯಿತು.

ಮರುದಿನ ಬೆಳಿಗ್ಗೆ ಅವರ ಈ ಸ್ವಪ್ನವೃತ್ತಾಂತವನ್ನು ಕೇಳಿ ಅರ್ಚಕರಾದ ಶ್ರೀ ವೆಂಕೋಬಾಚಾರ್ಯರು 'ರಾಘವೇಂದ್ರರಾಯರ ಹೆಸರಿನಲ್ಲಿ ಭೋಜನ ಮಾಡಿಸಿ' ಎಂದು ಸಲಹೆ ಕೊಟ್ಟರು. ಅದಕ್ಕೆ ಸರಿಯಾಗಿ ರಾಘವೇಂದ್ರರಾಯರ ವೈದೀಕ ಒಂದು ವಾರದಲ್ಲೇ ಬರುವುದಿತ್ತು. ಆ ದಿನ ತೀರ್ಥರು ಅವನ ಹೆಸರಿನಲ್ಲಿ ಚಟಕಶ್ರಾದ್ಧ ಮಾಡಿ ನಾಲ್ಕೈದು ಜನ ಬ್ರಾಹ್ಮಣರಿಗೆ ಭೋಜನ ಮಾಡಿಸಿದರು. ಅಲ್ಲದೆ ಅವರು ತಂದೆ ತೀರಿದಮೇಲೆ ೧೯೪೬ ರಿಂದ ಇವತ್ತಿನವರೆಗೂ ಪ್ರತಿವರ್ಷ ಆ ರಾಘಣ್ಣನ ವೈದೀಕ ಮಾಡುತ್ತಾ ಬಂದಿದ್ದಾರೆ. ಜೊತೆಗೆ ಪ್ರತಿನಿತ್ಯವೂ ಬ್ರಹ್ಮ ಯಜ್ಞದ ಪಿತೃತರ್ಪಣದಲ್ಲಿ ದ್ವಾದಶ ಪಿತೃಗಳ ಜೊತೆ 'ಜ್ಯೇಷ್ಠ ಭ್ರಾತಾ ಪಿತೃ ಸಮಃ' ಎಂಬ ಶಾಸ್ತ್ರವಚನದಂತೆ ಈ ರಾಘಣ್ಣನಿಗೂ, ತಮ್ಮ ಆಚಾರ್ಯರಾದ ಶ್ರೀರಂಗಂ ಮಾಧವಾಚಾರ್ಯರಿಗೂ ತರ್ಪಣ ಕೊಡುತ್ತಾರೆ. ದರ್ಶಾದಿ ಪರ್ವ ಕಾಲಗಳಲ್ಲಂತೂ ಅವರೆಲ್ಲರಿಗೂ ತಿಲತರ್ಪಣವನ್ನೂ ಕೊಟ್ಟೇಕೊಡುತ್ತಾರೆ.

ನವವೃಂದಾವನಕ್ಕೆ ಪ್ರಯಾಣ

ಅಲ್ಲಿಂದ ಮುಂದೆ ಒಂದು ವರ್ಷ, ಎಂದರೆ ಮುಂದಿನ ಪುರಂದರದಾಸರ ಆರಾಧನೆವರೆಗೆ (ಜನವರಿ ೧೯೫೨) ಅವರು ಯಂತ್ರೋದ್ಧಾರಕರ ಸೇವೆ ಮಾಡಿ ಕೊಂಡಿದ್ದರಾದರೂ ಅವರ ಮನಸ್ಸಿಗೆ ಯಾಕೋ ನೆಮ್ಮದಿ ಬರಲಿಲ್ಲ. ಜೊತೆಗೆ ನವವೃಂದಾವನಕ್ಕೇ ಹೋಗಿಬಿಡಬೇಕೆಂಬ ಕುತೂಹಲ ದಿನದಿನಕ್ಕೂ ಹೆಚ್ಚಾಗುತ್ತಾ ಬಂತು. ಕೊನೆಗೆ ಪ್ರಾಣದೇವರೇ ಅವರ ನೆರವಿಗೆ ಬಂದರು. ಪುರಂದರದಾಸರ ಆರಾಧನೆಗೆ ಬಂದಿದ್ದ ಒಬ್ಬ ರಾಜಪುರೋಹಿತರು (ಕನಕಗಿರಿ ಶೇಷಾಚಾರ್ಯರು) ಇವರನ್ನು ನವವೃಂದಾವನಕ್ಕೆ ಕರೆದುಕೊಂಡುಹೋಗಿ ಬಿಡಲು ಸಿದ್ಧರಾದರು.

ಅವರ ಜೊತೆ ಇವರು ಆರಾಧನೆಯ (ತಾ॥ ೨೭–೧–೫೨) ಸಂಜೆಯೇ ಆನೆಗೊಂದಿಗೆ ಹೋದರು. ಮರುದಿನ ಆ ರಾಜಪುರೋಹಿತರ ಹೇಳಿಕೆಯಂತೆ ಒಬ್ಬ ಆಳು ಇವರನ್ನು ನವವೃಂದಾವನಕ್ಕೆ ಕರೆದುಕೊಂಡು ಹೋಗಿ ಬಿಟ್ಟುಬಂದ.

ನವವೃಂದಾವನದ ಪರಿಚಯ

ನವವೃಂದಾವನ ಆನೆಗೊಂದಿಯ ಈಶಾನ್ಯಕ್ಕೆ ತುಂಗಭದ್ರಾನದಿಯ ಮಧ್ಯದಲ್ಲಿರುವ ಒಂದು ನಡುಗಡ್ಡೆ (ಸಣ್ಣ ದ್ವೀಪ). ಹಿಂದೆ ಈ ಸ್ಥಳದಲ್ಲೇ ಸತ್ಯವ್ರತರಾಜ ತಪಸ್ಸು ಮಾಡಿದ್ದನೆಂದೂ, ಶಿವನು ವಿಷಪಾನ ಮಾಡಿ ಜೀರ್ಣಿಸಿಕೊಂಡನೆಂದೂ ಸ್ಕಾಂದಪುರಾಣದಲ್ಲಿ ಹೇಳಿದೆ. ತ್ರೇತಾಯುಗದಲ್ಲಿ ಸಪ್ತಜನಾಶ್ರಮವಿದ್ದ ಸ್ಥಳವೂ ಇದೇ. ವಾಲ್ಮೀಕಿರಾಮಾಯಣದಲ್ಲಿ ಕಿಷ್ಕಿಂಧಾಖಂಡದ ೧೩ನೇ ಸರ್ಗದಲ್ಲಿ ಸುಗ್ರೀವ ರಾಮನಿಗೆ ವರ್ಣಿಸುವ ಈ ಸಪ್ತರ್ಷಿಗಳು ಈಗಿರುವ ನವವೃಂದಾವನದ ಬಳಿಯ ನೀರಿನಲ್ಲೇ ತಲೆಕೆಳಕಾಗಿ ನಿಂತು ವಾರಕ್ಕೆ ಒಂದಾವರ್ತಿ ವಾಯುಭಕ್ಷಣೆ ಮಾಡಿಕೊಂಡು ೭೦೦ ವರ್ಷ ತಪಸ್ಸು ಮಾಡಿದ್ದರಿಂದ ಸಶರೀರವಾಗಿ ಸ್ವರ್ಗಾರೋಹಣ ಮಾಡಿದರೆಂದೂ, ಅವರ ಸ್ಮರಣೆ ಮಾಡಿ ನಮಸ್ಕಾರ ಮಾಡುವವರಿಗೆ ಯಾವ ಅಶುಭವೂ ಆಗುವುದಿಲ್ಲವೆಂದೂ, ಇಲ್ಲಿಯ ಗೆಡ್ಡೆ-ಗೆಣಸು, ಹಣ್ಣು, ನೀರು ಎಲ್ಲವೂ ರುಚಿಯಾಗಿರುವುದು ("ಸ್ವಾದುಮೂಲ ಫಲೋದಕಂ") ಎಂದೂ ವರ್ಣಿಸಿದ್ದಾನೆ. ಆ ಸಪ್ತಜನಾಶ್ರಮವೇ ಈಗಿರುವ ನವವೃಂದಾವನ ಕ್ಷೇತ್ರವಾಗಿದೆ ಎಂಬುದು ಅನೇಕ ನಿದರ್ಶನಗಳಿಂದಲೂ ಭೌಗೋಲಿಕ ಸನ್ನಿವೇಶಗಳ ಪರ್ಯಾಲೋಚನೆಯಿಂದಲೂ ಗೊತ್ತಾಗುತ್ತದೆ.

ಅಂಥಾ ಮಹತ್ವವಿಲ್ಲದಿದ್ದರೆ ಮಧ್ವಮತಾವಲಂಬಿಗಳಾದ ಒಂಬತ್ತು ಜನ ಯತಿವರ್ಯರು ಅದೇ ಸ್ಥಳವನ್ನು ತಮ್ಮ ವೃಂದಾವನಕ್ಕೆ ಯಾಕೆ ಆರಿಸಿಕೊಳ್ಳುತ್ತಿದ್ದರು ? ಯಾತ್ರಾರ್ಥಿಗಳು ಅಲ್ಲಿಗೆ ಹೋಗಬೇಕಾದರೆ ಆನೆಗೊಂದಿಯ ಕಡೆಯಿಂದ ಹರಿಗೋಲಿನಲ್ಲಿ ಹೊಳೆ ದಾಟಿ ಹೋಗಬೇಕು. ಈ ಗಡ್ಡೆಯ ಮೇಲ್ಭಾಗದ ಒಂದು ಸಮಪ್ರದೇಶದಲ್ಲಿ ವಿಶಾಲವಾದ ಆವರಣದಲ್ಲಿ ಒಂಬತ್ತು ದೊಡ್ಡ ಚಿಕ್ಕ ವೃಂದಾವನಗಳು ನಿರ್ಮಿಸಲ್ಪಟ್ಟಿವೆ. ಅವು ಯಾವುವೆಂದರೆ : ೧. ಶ್ರೀ ಪದ್ಮನಾಭ-ತೀರ್ಥರು (ಕ್ರಿ. ಶ. ೧೩೨೪), ೨. ಶ್ರೀ ಕವೀಂದ್ರರು (೧೩೯೯), ೩. ಶ್ರೀ ವಾಗೀಶರು (೧೪೦೭), ೪. ಶ್ರೀ ವ್ಯಾಸರಾಯರು (೧೫೩೯), ೫. ಶ್ರೀ ರಘುವರ್ಯರು (೧೫೫೮), (ಇದನ್ನು ಶ್ರೀ ಟೀಕಾರಾಯರ ವೃಂದಾವನವೆಂದು ಈಗಿನ ವ್ಯಾಸರಾಜಮಠಾಧೀಶರು ಹೇಳುತ್ತಾರೆ. ಆದರೆ ಅದನ್ನು ಹೆಚ್ಚು ಜನ ಒಪ್ಪುವು

ಶ್ರೀ ಶ್ರೀ ವಾದಿರಾಜರು, ನರಸಿಂಹತೀರ್ಥ, ಮುಳಬಾಗಲು

ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ವೃಂದಾವನ, ಮಂತ್ರಾಲಯ



ಸವವೃಂದಾವನದಲ್ಲಿರುವ ಶ್ರೀ ವ್ಯಾಸರಾಯರು (ಪಕ್ಕದಲ್ಲಿ—ವಿಷ್ಣುತೀರ್ಥರು)

ಪ್ರಾತಃಸ್ಮರಣೀಯರಾದ
ಶ್ರೀ ಸತ್ಯಧ್ಯಾನತೀರ್ಥರು
ವಿಷ್ಣುತೀರ್ಥರಿಗೆ ಶಾಂತಿಪಾಠ ಹಾಕಿದ ಗುರುಗಳು

ವಿಷ್ಣುತೀರ್ಥರ ಅಣ್ಣಂದಿರಾದ
ಸ್ವ|| ಪಿ. ರಾಘವೇಂದ್ರರಾಯರು

ದಿಲ್ಲ.) ೬. ಶ್ರೀ ಶ್ರೀನಿವಾಸತೀರ್ಥರು (೧೫೬೪), ೭. ಶ್ರೀ ರಾಮತೀರ್ಥರು (೧೫೮೪), ೮. ಶ್ರೀ ಸುಧೀಂದ್ರರು (೧೬೨೪), ಮತ್ತು ೯. ಶ್ರೀ ಗೋವಿಂದ ಒಡೆಯರೆಂಬ ಬಿಡಿ ಸನ್ಯಾಸಿಗಳು (೧೫೩೫). ಈ ಆವರಣದ ಪೂರ್ವಭಾಗದಲ್ಲಿ ವೃಂದಾವನಗಳ ಎದುರಿಗೆ ಮಧ್ವರಾಯರ (ಪುಸ್ತಕಪಾಣಿಯಾದ ಹನುಮಂತನ) ಚಿಕ್ಕ ಗುಡಿ ಇದೆ. ಪಶ್ಚಿಮದಲ್ಲಿ ಎತ್ತರದ ವಿಶಾಲವಾದ ವೇದಿಕೆಯ ಹಿಂಭಾಗದಲ್ಲಿ ಒಂದು ಗವಿ ಇದ್ದು ಅದರಲ್ಲಿ ರಂಗನಾಥದೇವರ ಪ್ರತಿಮೆ ಇದೆ. ದಕ್ಷಿಣಭಾಗದಲ್ಲೂ ಇನ್ನೊಂದು ಸಣ್ಣ ವೇದಿಕೆಯ ಮೇಲೆ ಹನುಮಂತದೇವರ ಗುಡಿ ಇದೆ.

ಮೇಲೆ ಹೇಳಿದ ಗವಿಯಲ್ಲೇ ವಿಷ್ಣುತೀರ್ಥರು ಇಪ್ಪತ್ತು ವರ್ಷಗಳ ಕಾಲ ವಾಸಮಾಡಿಕೊಂಡಿದ್ದು ಯತಿಗಳ ಸೇವೆ ಮಾಡಿದರು. ಈ ಆವರಣದ ದಕ್ಷಿಣ-ಭಾಗದಲ್ಲಿ ಪಾಳುಬಿದ್ದ ಒಂದು ಮಹಲ್ ಇದೆ. ಅದರ ಸುತ್ತಮುತ್ತ ಪೊದೆಗಳು ದಟ್ಟವಾಗಿ ಬೆಳೆದು ಅವುಗಳ ನಡುವೆ ಹಾವುಗಳ ಹುತ್ತಗಳೂ ಇವೆ. ವಿಷ್ಣುತೀರ್ಥರು ಅಲ್ಲಿಗೆ ೧೯೫೨ರ ನವೆಂಬರ್‌ನಲ್ಲಿ ಹೋದಾಗ ಆ ಗಡ್ಡೆಯ ಪೊದೆಗಳಲ್ಲಿ ದೊಡ್ಡದೊಂದು ಹುಲಿ ಇತ್ತು. ಅದು ನಡುಗಡ್ಡೆಗೆ ಮೇಯುವುದಕ್ಕಾಗಿ ಬರುತ್ತಿದ್ದ ದನಕರುಗಳನ್ನು ತಿಂದು ಜೀವಿಸುತ್ತಿತ್ತು. ಆದರೆ ಅದು ಒಂದು ದಿನವೂ ತೀರ್ಥರಿಗೆ ಕಾಣಿಸಿಕೊಳ್ಳಲೂ ಇಲ್ಲ ಮತ್ತು ಅದು ವ್ಯಾಸರಾಯರ ದಯೆದಿಂದ ಅವರಿಗೆ ಯಾವ ರೀತಿಯ ತೊಂದರೆಯನ್ನಾಗಲೀ ಭಯವನ್ನಾಗಲೀ ಉಂಟು ಮಾಡಲಿಲ್ಲ. ಆದರೆ ಒಂದು ಸಲ ಮಾತ್ರ ಅವರಿಗೆ ಅಲ್ಲಿಂದ ಹೊರಟುಹೋಗುವಂತೆ ಮೇಲೆಮೇಲೆ ಸೂಚನೆಗಳಾದುವಲ್ಲದೆ ಹನ್ನೊಂದು ದಿನ ನಿಟ್ಟುಪವಾಸವೂ ಮಾಡಬೇಕಾಯಿತು. ಆದ್ದರಿಂದ ಹನ್ನೆರಡನೆಯ ದಿನ ಅವರು ಅಲ್ಲಿಂದ ಹೊರಟು ಆನೆಗೊಂದಿಗೆ ಬಂದುಬಿಟ್ಟರು. ಕೆಲವೇ ದಿನಗಳಲ್ಲಿ ಆ ಹುಲಿಯನ್ನು ಯಾರೋ ಗುಂಡಿಟ್ಟು ಕೊಂದುಹಾಕಿದರು. ಆಮೇಲೆಯೇ ಅವರಿಗೆ ಹುಲಿಯ ಅರಿವಾದದ್ದು.

ನವವೃಂದಾವನದಲ್ಲಿ ನೆಲೆಸಿದ್ದು

೧೯೪೦ರಲ್ಲಿ ತೀರ್ಥರು ಮೊಟ್ಟಮೊದಲ ಬಾರಿ ತಮ್ಮ ತಂದೆ ಮತ್ತು ಭಾವಂದಿರ ಜೊತೆ ಅಲ್ಲಿಗೆ ಭೇಟಿ ಕೊಟ್ಟಿದ್ದರೆಂದು ಹಿಂದೆ ತಿಳಿಸಿದ್ದಾಗಿದೆಯಷ್ಟೆ. ಅನಂತರ ಅವರು ೧೯೪೯ರ ಮತ್ತು ೧೯೫೧ರ ವ್ಯಾಸರಾಯರ ಆರಾಧನೆಗೆ ಹೋಗಿದ್ದರಲ್ಲದೆ ಬೇರೆ ಎರಡು ಮೂರು ಸಂದರ್ಭಗಳಲ್ಲೂ ಆ ಗಡ್ಡೆಗೆ ಹೋಗಿದ್ದರು, ಆದರೆ ೧೯೫೨ರ ಜನವರಿಯಲ್ಲಿ ಹೋದಾಗ ಅವರು ಅಲ್ಲೇ ನಿಂತುಬಿಡಬೇಕೆಂದು ನಿರ್ಧರಿಸಿಕೊಂಡಿದ್ದುದರಿಂದ ಮಾರ್ಗದರ್ಶಕ ಆಳಿನ ಜೊತೆ ನದಿ

ದಾಟುವಾಗಲೇ ಅವರಿಗೆ ಅಲ್ಲಿನ ಬಂಡೆಗಳು, ಗುಹೆಗಳು, ಕುರುಚಲುಗಿಡಗಳು, ಕಾಡು ಮರಗಳು ಇವುಗಳಿಂದ ಆವೃತವಾದ ನಿರ್ಜನ ನೀರವ ಪ್ರದೇಶದ ಚಿತ್ರ ಅವರ ಕಣ್ಣ ಮುಂದೆ ಬಂದು ಆ ಜಾಗದಲ್ಲಿ ತಾವೊಬ್ಬರೇ ಹೇಗಿರುವುದು ಎಂಬ ಯೋಚನೆ ಬಂತು. ಆದರೆ 'ಒಂಬತ್ತು ಜನ ಆ ಮಹನೀಯರಿರುವಾಗ ನಾನೇಕೆ ಹೆದರಬೇಕು ?' ಎಂದು ಧೈರ್ಯಮಾಡಿಕೊಳ್ಳುತ್ತಾ ಆ ಗಡ್ಡೆ ಸೇರಿದರು. ಅವರು ಅಲ್ಲಿ ಕಾಲಿಟ್ಟದ್ದೇ ತಡ, ಯಾರೋ ಚಿರಪರಿಚಿತರಂತೆ 'ಓ ವಿಷ್ಣು, ಬಾರೋ ಇಲ್ಲಿ, ನೀನು ಬಂದದ್ದು ತುಂಬಾ ಸಂತೋಷ' ಎಂದು ಗಟ್ಟಿಯಾಗಿ ಕೂಗಿದ್ದು ಕೇಳಿಸಿತು. ಅದನ್ನು ಕೇಳಿ ಅವರಿಗೆ ತಮ್ಮನ್ನು ವ್ಯಾಸರಾಯರೇ ಅಕ್ಕರೆಯಿಂದ ಕರೆಯುತ್ತಲಿದ್ದಾರೋ ಎಂಬ ಭಾವನೆ ಉಂಟಾಯಿತು. ಮುಂದೆ ಹೋಗಿ ನೋಡಿದರೆ ಹಾಗೆ ಕೂಗಿದವರು ಶ್ರೀ ವ್ಯಾಸರಾಯರ ಆರಾಧನೆಯನ್ನು ಅನೇಕ ವರ್ಷಗಳಿಂದ ಮಾಡುತ್ತಿದ್ದ ವ್ಯಾಸರಾಜಮಠದ ಪ್ರತಿನಿಧಿಗಳಾದ ಮತ್ತು ತೀರ್ಥರಿಗೆ ಚಿರಪರಿಚಿತರಾಗಿದ್ದ ಕಾಕಪಾಡು ರಾಮರಾಯರೇ ಆಗಿದ್ದರು. ಅವರು ಆ ಗಡ್ಡೆಗೆ ಒಂದು ವಾರದ ಹಿಂದೆಯೇ ಬಂದು ಅಲ್ಲೇ ಸೇವೆ ಮಾಡಿಕೊಂಡಿದ್ದರು. ಅವರು ಮುಂದೆಯೂ ಇಪ್ಪತ್ತಾರು ದಿವಸ ವಿಷ್ಣುತೀರ್ಥರ ಜೊತೆ ಇದ್ದು ಅವರಿಗೆ ವೃಂದಾವನಗಳ ಪರಿಚಯ ಮಾಡಿಸಿ, ಹೇಗೆ ಸೇವೆ ಮಾಡಬೇಕೆಂಬುದನ್ನೂ ತಿಳಿಸಿಕೊಟ್ಟರು. ಅಲ್ಲದೆ ರಾತ್ರಿ ಹೊತ್ತು ಅಲ್ಲಿ ಕೇಳಿಬರುತ್ತಿದ್ದ ಬಗೆಬಗೆಯ ಸಪ್ಪಳಗಳ ಪರಿಚಯ ಮಾಡಿಸಿ, ಅವಕ್ಕೆಲ್ಲಾ ಅಂಜಬಾರದೆಂದೂ ಧೈರ್ಯ ಹೇಳಿದರು. ಹೀಗೆ ವ್ಯಾಸರಾಯರೇ ರೂಪಾಂತರದಿಂದ ವಿಷ್ಣುತೀರ್ಥರಿಗೆ ಅಭಯ ಕೊಟ್ಟು ತಮ್ಮ ಬಳಿ ಇಟ್ಟುಕೊಂಡಂತಾಯಿತು.

ಅಲ್ಲಿಯ ಜೀವನ ನಿರ್ವಹಣೆ

ವಿಷ್ಣುತೀರ್ಥರು ನವವೃಂದಾವನಕ್ಕೆ ಹೋಗಿ ನೆಲೆಸಿದ ಮೇಲೆ ಅವರ ಜೀವನ ನಿರ್ವಹಣೆಯಲ್ಲಿ ಬಹಳ ಬದಲಾವಣೆಯಾಯಿತು. ಮೊದಲನೆಯದಾಗಿ ಅವರು ಊಟ–ತಿಂಡಿ, ಹಾಸಿಗೆ–ಹೊದ್ದಿಗೆ, ಬಟ್ಟೆ–ಬರೆ, ಉಡುಗೆ–ತೊಡುಗೆ, ದುಡ್ಡು–ಕಾಸು ಮುಂತಾದವುಗಳ ಯೋಚನೆಯನ್ನೇ ಸಂಪೂರ್ಣವಾಗಿ ಬಿಟ್ಟು ಬಿಟ್ಟರು. ಆಯಾ ದಿನ ದೇವರು ಏನು ಕೊಡುತ್ತಾರೋ ಅಷ್ಟರಲ್ಲೇ ಸಂತುಷ್ಟಿಗೊಂಡು ಸೇವೆ ಮುಂದುವರಿಸುತ್ತಿದ್ದರು. ಸುಮಾರು ಆರು ವರ್ಷಗಳ ವರೆಗೆ ಅವರು ಬರೀ ಹೆಸರುಕಾಳನ್ನೋ ಕಡಲೇಕಾಳನ್ನೋ ನೆನೆ ಹಾಕಿ ಅದನ್ನೇ ಗುರುಗಳಿಗೆ ಅರ್ಪಿಸಿ, ತಾವೂ ತಿಂದಿದ್ದು ಬಿಡುತ್ತಿದ್ದರು.

ಈ ನಡುವೆ ಅಲ್ಲಿರುವ ಯತಿಗಳು ಇವರ ಮನೋದಾರ್ಢ್ಯವನ್ನು ಅನೇಕ ರೀತಿಯಿಂದ ಒರೆ ಹಚ್ಚಿ ನೋಡಿ, ಪರೀಕ್ಷಿಸದೆ ಬಿಡಲಿಲ್ಲ. ಶೀತ, ಗಾಳಿ, ಮಳೆ, ಬಿಸಿಲು, ಛಳಿ ಯಾವುದಕ್ಕೂ ಅಂಜುವವನಲ್ಲ ಎಂದು ನಿರ್ಧರಿಸಿಕೊಂಡು ಎರಡು ಮೂರು ಸಲ ನಿಟ್ಟುಪವಾಸ ಹಾಕಿ ಪರೀಕ್ಷಿಸಿದರು. ಒಂದು ಪ್ರಸಂಗದಲ್ಲಿ ಕಟಂಕಟಿ ಮೂರು ದಿನಗಳೂ, ಇನ್ನೊಂದು ಸರಿ ಏಳು ದಿನಗಳೂ, ಮತ್ತೊಂದು ಸಲ ಹನ್ನೊಂದು ದಿನಗಳ ಕಾಲವೂ ಉಪವಾಸ ಮಾಡಬೇಕಾಗಿ ಬಂತು. ಈ ಎಲ್ಲಾ ಪರೀಕ್ಷೆಗಳಲ್ಲೂ ಅವರು ಉತ್ತೀರ್ಣರಾದರು. ಯತಿಗಳು ಆಗ ಆನೆಗೊಂದಿಯಲ್ಲಿ ರುವ ಪಟೇಲ್ ಶ್ರೀ ಕೃಷ್ಣಮೂರ್ತಿಯವರಿಗೆ ಇವರ ಸ್ಥಿತಿಯ ಬಗ್ಗೆ ಸೂಚನೆ ಕೊಟ್ಟು ಅವರಿಗೆ ನೆರವಾಗುವಂತೆ ಮಾಡಿದರು. ಆ ಕೃಷ್ಣಮೂರ್ತಿಗೌಡರೂ ಅವರ ಮನೆಯವರೂ ಇಂದಿನವರೆಗೂ ನವವೃಂದಾವನದ ಯತಿಗಳ ಭಕ್ತರಾ ಗಿದ್ದು ವಿಷ್ಣುತೀರ್ಥರಿಗೂ ದಿನದಿನಕ್ಕೂ ಹೆಚ್ಚುಹೆಚ್ಚಾಗಿ ನವವೃಂದಾವನಕ್ಕೆ ಬರು ತ್ತಿರುವಂತಹ ಯಾತ್ರಾರ್ಥಿಗಳಿಗೂ ಮಾರ್ಗದರ್ಶನ ಮಾಡಿ, ಯಥಾಶಕ್ತಿ ಸಹಾಯ ಮಾಡುತ್ತಾ ಬಂದಿದ್ದಾರೆ. ಈ ಸಮಯದಲ್ಲೇ ತೀರ್ಥರು ತಮ್ಮದೇ ಆದ ಒಂದು ಸ್ವಂತ ಹರಿಗೋಲನ್ನು ಮಾಡಿಸಿಕೊಂಡು ಅನೇಕ ವರ್ಷಕಾಲ ಅದರಲ್ಲೇ ನದಿ ದಾಟುವ ಏರ್ಪಾಡು ಮಾಡಿಕೊಂಡಿದ್ದರು. ಆದರೆ ಈಚೆಗೆ ಬೇರೆ ಜನಗಳು (ಅಂಬಿಗರು) ತಮ್ಮ ತಮ್ಮ ಹರಿಗೋಲಿನಲ್ಲೇ ಯಾತ್ರಿಕರನ್ನು ಸಾಗಿಸುವ ವ್ಯವಸ್ಥೆ ಆಗಿದೆ.

ನವವೃಂದಾವನದಲ್ಲಿ ನಡೆಸಿದ ಅನುಷ್ಠಾನಗಳು

ನವವೃಂದಾವನದಲ್ಲಿ ಇದ್ದಾಗ ವಿಷ್ಣುತೀರ್ಥರು ನಿತ್ಯ ಬೆಳಿಗ್ಗೆ ಎದ್ದು ನದಿ ಯಲ್ಲಿ ಸ್ನಾನ ಮಾಡಿ ಪ್ರಾತರಾಹ್ನಿಕವನ್ನೂ ನಿರ್ಮಾಲ್ಯವಿಸರ್ಜನೆಯನ್ನೂ ಮಾಡಿ ನದಿಯಿಂದ ನೀರು ಹೊತ್ತು ತಂದು ಎಲ್ಲಾ ವೃಂದಾವನಗಳಿಗೂ ಯಥೇಚ್ಛವಾಗಿ ಅಭಿಷೇಕ ಮಾಡುತ್ತಿದ್ದರು. ಅನಂತರ ಗಂಧಾಕ್ಷತೆ ಮಾಡಿಟ್ಟುಕೊಂಡು ದೇವತಾ ರ್ಚನೆ ಮಾಡಿ ಎಲ್ಲಾ ವೃಂದಾವನಗಳಿಗೂ ಗಂಧಾಕ್ಷತೆ ಹಚ್ಚಿ ತೀರ್ಥ ಕೊಟ್ಟು ಜಪ ಪಾರಾಯಣಗಳಲ್ಲಿ ನಿರತರಾಗುತ್ತಿದ್ದರು. ಮೊದಮೊದಲು ಗುರುಗಳ ಸೇವೆಯ ಅಂಗವಾಗಿ ಅಷ್ಟಮಹಾಮಂತ್ರಾದಿ ತಂತ್ರಸಾರೋಕ್ತ ಜಪಗಳನ್ನೂ ತಂತ್ರಸಾರ, ತಾತ್ಪರ್ಯನಿರ್ಣಯ, ಋಗ್ಭಾಷ್ಯಾದಿ ಗ್ರಂಥಗಳ ಪಾರಾಯಣವನ್ನೂ ಮಾಡುತ್ತಿದ್ದರು. ೧೯೫೪ರಲ್ಲಿ ಇವರಿಗೆ ಏಳು ದಿನ ಕಟಂಕಟಿ ಉಪವಾಸ ಇರ ಬೇಕಾಗಿ ಬಂತಲ್ಲದೆ ಶ್ರೀ ಟೀಕಾರಾಯರ ಆರಾಧನೆ ದಿನವೇ ಸ್ವಪ್ನದಲ್ಲಿ ಇವರಿಗೆ

ದೀಕ್ಷೆ ಬಿಟ್ಟಿದ್ದ ತೇಜಸ್ವಿಗಳಾದ ಕೃಷ್ಣಾಚಾರ್ಯರೂ ಅವರ ಪೀಠದ ಕೆಳಗೆ ಒಬ್ಬ ಸಂನ್ಯಾಸಿಗಳೂ ಕೂತಂತೆಯೂ ಇನ್ನೂ ಎಷ್ಟೋ ಯತಿಗಳು ಬೇರೆ ಬೇರೆ ಅನುಷ್ಠಾನಾಸಕ್ತರಾಗಿದ್ದಂತೆಯೂ ಕಾಣಿಸಿತು. ಆ ಕೃಷ್ಣಾಚಾರ್ಯರೂ ಅವರ ಬಳಿಯಿದ್ದ ಸ್ವಾಮಿಗಳೂ ಇವರನ್ನು ಕರೆದರೂ ಇವರು ಗಮನಿಸಲಿಲ್ಲ. ಈ ಸ್ವಪ್ನದ ಅರ್ಥವನ್ನು ಇವರಿಗೆ ಹುಬ್ಬಳ್ಳಿಯಲ್ಲಿದ್ದ ಇವರ ಮುಖವನ್ನೇ ಕಾಣದ (ಕೇವಲ ಪತ್ರಮುಖೇನ ಪರಿಚಿತರಾಗಿದ್ದ) ವೇ॥ ಶ್ರೀ ಮಂಗಳವೇಡಿ ಬಾಳಾಚಾರ್ಯರು ತಿಳಿಸಿಕೊಟ್ಟರು. ಆ ಕೃಷ್ಣಾಚಾರ್ಯರೇ ವೇದವ್ಯಾಸರು, ಅವರ ಕೆಳಗೆ ಕುಳಿತಿದ್ದ ಸಂನ್ಯಾಸಿಗಳೇ ವ್ಯಾಸರಾಯರು. ಮಿಕ್ಕವರೆಲ್ಲಾ ನವವೃಂದಾವನದ ಯತಿಗಳೆಂದೂ 'ವೇದವ್ಯಾಸರೂ ವ್ಯಾಸರಾಯರೂ ಕೂಗಿದರೂ ಗಮನಿಸದಿದ್ದುದು ನಿಮ್ಮ ಪ್ರಾರಬ್ಧ' ಎಂದೂ ವಿವರಿಸಿದರು. ಇದರಿಂದ ಖಿನ್ನರಾದ ತೀರ್ಥರು ಪುನಃ ೧೯೫೪ರಲ್ಲಿ ರಾಯರ ಆರಾಧನೆಗೆ ಹೋಗಿ ಅವರ ಮೊರೆಹೊಕ್ಕರು. ಅವರು ಒಂದು ತಿಂಗಳು ಅಲ್ಲಿದ್ದು ಗುರುಗಳ ಸೇವೆ ಮಾಡಿದರು.

ತೀರ್ಥರು ಮಂತ್ರಾಲಯದಲ್ಲಿ ಸೇವೆ ಮಾಡಿದರೂ ಸೂಚನೆಯಾದದ್ದು ಹುಬ್ಬಳ್ಳಿಯಲ್ಲಿದ್ದ ವೇ॥ ಶ್ರೀ ಬಾಳಾಚಾರ್ಯರಿಗೆ. ತೀರ್ಥರು ಅವರನ್ನು ಭೇಟಿಯಾದಾಗ ಅವರು ಕಾರ್ಯಸಿದ್ಧಿಗಾಗಿ ನವವೃಂದಾವನದಲ್ಲೇ ಇದ್ದುಕೊಂಡು ದೀಕ್ಷೆಬಿಟ್ಟು ವಾಯುಸ್ತುತಿಯ ಅಥವಾ ಗಾಯತ್ರಿಯ ಪುರಶ್ಚರಣೆ ಮಾಡಬೇಕೆಂದು ತಿಳಿಸಿದರು. ಅದರಂತೆ ತೀರ್ಥರು ಮಾರ್ಗಶಿರ ಮಾಸದಲ್ಲಿ ವಾಯುಸ್ತುತಿ ಪುರಶ್ಚರಣೆ ಆರಂಭಿಸಿ, ಹನ್ನೆರಡು ದಿನ (ಕಾಲು ಮಂಡಲ) ಮಾಡಿದರು. ಮರು ದಿನ ಬೆಳಗಿನ ಝಾವದಲ್ಲಿ ಸ್ವಪ್ನದಲ್ಲಿ ಇವರು ಪಠನ ಮಾಡುತ್ತಾ ಕುಳಿತಿದ್ದಾರೆ. ಆಗ ಒಬ್ಬರು ಆಜಾನುಬಾಹುಗಳಾದ ಸಂನ್ಯಾಸಿಗಳು ಬಂದು ಆ ಪಾರಾಯಣ ನಿಲ್ಲಿಸಬೇಕೆಂದು ಹೇಳಿ ತೀರ್ಥರಿಗೆ ಶಾಂತಿಪಾಠ ಹೇಳಿಕೊಟ್ಟು ಅವರಿಂದ ಹೇಳಿಸಿ ಹೊರಟುಹೋಗುತ್ತಾರೆ. ಅಂದಿನಿಂದಲೇ ವಿಷ್ಣುತೀರ್ಥರು ವಾಯುಸ್ತುತಿ ಪುರಶ್ಚರಣೆ ನಿಲ್ಲಿಸಿ ಗಾಯಿತ್ರಿ ಪುರಶ್ಚರಣೆ ಆರಂಭಿಸಿ, ಸತತ ನಾಲ್ಕೂವರೆ ವರ್ಷ ಮಾಡಿದರು. ಅನಂತರ ವೇ॥ ಶ್ರೀ ಬಾಳಾಚಾರ್ಯರು ತಿಳಿಸಿದಂತೆ ಭಾಗವತದಲ್ಲಿ ಸಪ್ತಮಸ್ಕಂಧ ಒಂದನ್ನೇ ನೂರೆಂಟು ಸಲ ಪಾರಾಯಣ ಮಾಡಿ ನವಯತಿವರೇಣ್ಯರಿಗೆ ಅರ್ಪಿಸಿದರು.

ಭಾಗವತ ಮಂಗಳ

ಈ ಸಂಧರ್ಭದಲ್ಲಿ ಒಂದು ಸ್ವಾರಸ್ಯವಾದ ಘಟನೆ ನಡೆಯಿತು. ಭಾಗವತ

ಪಾರಾಯಣ ಮಾಡುವುದು ನೂರರ ಹತ್ತಿರಕ್ಕೆ ಬಂದಾಗ ಇದ್ದಕ್ಕಿದ್ದ ಹಾಗೆ ಬೆಳಿಗ್ಗೆ ಸುಮಾರು ಹನ್ನೊಂದು ಗಂಟೆ ಸಮಯದಲ್ಲೂ ಮತ್ತೆ ಸಂಜೆ ಐದು ಗಂಟೆಯ ಹೊತ್ತಿನಲ್ಲೂ ನೂರಾರು ಕಾಗೆಗಳು ನವವೃಂದಾವನದ ಆವರಣದ ಸುತ್ತಲೂ ಕುಳಿತುಕೊಂಡು ಸುಮಾರು ಕಾಲು ಗಂಟೆ ಹೊತ್ತು ಕರ್ಕಶ ವಾಗಿ 'ಕಾ, ಕಾ' ಎಂದು ಕಿರುಚಿ, ತಮಗೆ ತಾವೇ ಹಾರಿಹೋಗಿಬಿಡುತ್ತಿದ್ದವು. ಹೀಗೆ ನಾಲ್ಕೈದು ದಿನಗಳು ನಡೆದವು. ಕೊನೆಯ ದಿನ ಬೆಳಿಗ್ಗೆ ಅವು ಕೂಗಿ ಕೊಂಡಾಗ ತೀರ್ಥರಿಗೆ ಅದರ ಅರ್ಥ ಅನ್ನಶಾಂತಿಯಾಗಬೇಕೆಂದು ಹೊಳೆಯಿತು. ಆ ಕ್ಷಣ ಅವರು ವ್ಯಾಸರಾಯರ ವೃಂದಾವನದ ಮುಂದೆ ನಿಂತು ಕಣ್ಣೀರು ಸುರಿ ಸುತ್ತಾ ಕೈಮುಗಿದುಕೊಂಡು, "ಅಲ್ಲಾ ಸ್ವಾಮೀ, ಈ ಅವಸ್ಥೆಯಲ್ಲಿ ನಾನೇನು ಅನ್ನಶಾಂತಿ ಮಾಡಬಲ್ಲೆ ? ತಾವೇಕೆ ನನ್ನನ್ನು ಹೀಗೆ ಪರೀಕ್ಷಿಸುತ್ತೀರಿ ?" ಎಂದು ಪ್ರಾರ್ಥಿಸಿಕೊಂಡರು. ಸರಿ, ಆ ರಾತ್ರಿಯೇ ಅವರಿಗೆ ಸ್ವಪ್ನವಾಗಿ, 'ಆಗಲಿ ನಾವೇ ನೋಡಿಕೊಳ್ಳುತ್ತೇವೆ. ನೀನು ಯೋಚಿಸಬೇಡ' ಎಂದು ಧೈರ್ಯಕೊಟ್ಟರು. ಮರು ದಿನದಿಂದ ಕಾಗೆಗಳ ಸುಳಿವೇ ಇಲ್ಲದಂತಾಯಿತು.

ಇದಾದ ಕೆಲವು ದಿನಗಳ ಮೇಲೆ ನವರಾತ್ರಿ ಸಮಯದಲ್ಲಿ ವಿಷ್ಣುತೀರ್ಥರ ತಮ್ಮ ಪ್ರಹ್ಲಾದರಾವ್ ಬೆಂಗಳೂರಿನಿಂದ ನವ ವೃಂದಾವನಕ್ಕೆ ಯತಿಗಳ ದರ್ಶನ ಕ್ಕಾಗಿ ಮೊಟ್ಟಮೊದಲ ಸಲ ಬಂದರು. ಆಗ ತೀರ್ಥರ ಹರಿಗೋಲು ಕಳೆದು ಹೋಗಿತ್ತಾದ್ದರಿಂದ ಪಟೇಲ್ ಕೃಷ್ಣಮೂರ್ತಿಗಳ ನೆಂಟರ ಜೊತೆ ಪ್ರಹ್ಲಾದ ರಾವ್ ಈಜಿಕೊಂಡು ನವವೃಂದಾವನಕ್ಕೆ ಹೋಗಬೇಕಾಯಿತು. ಅಣ್ಣ ತಮ್ಮಂದಿ ರಿಬ್ಬರೂ ಒಟ್ಟಿಗೇ ಎರಡು ದಿನ ಇದ್ದು, ವೃಂದಾವನಗಳ ಸಮ್ಮುಖದಲ್ಲೇ ಕುಳಿತು ಮಂಗಳದ ಸಲುವಾಗಿ ಅನ್ನ ಶಾಂತಿಯ ಬಗ್ಗೆ ವಿಚಾರವಿನಿಮಯ ಮಾಡಿ ಕೊಂಡರು. ಅದೇ ವೇಳೆಯಲ್ಲಿ ಒಬ್ಬ ಅಂಬಿಗರವನು ಒಂದು ತಿಂಗಳ ಹಿಂದೇ ಕಳೆದುಹೋಗಿದ್ದ ತೀರ್ಥರ ಹರಿಗೋಲನ್ನು ಎಲ್ಲೋ ಸಿಕ್ಕಿತು ಎಂದು ಹೇಳಿ ತಂದ. ಆಗ ಅದರಲ್ಲೇ ಕುಳಿತು ಅಣ್ಣತಮ್ಮಂದಿರಿಬ್ಬರೂ ನದಿ ದಾಟಿ ಹಂಪೆಗೆ ಹೋಗಿ ಯಂತ್ರೋದ್ಧಾರಕರ ದರ್ಶನ ಮಾಡಿ ಆ ಪ್ರಾಣದೇವರ ಎದುರಿಗೇ ಕುಳಿತು ಭಾಗವತ ಮಂಗಳದ ಬಗ್ಗೆ ಒಂದು ಕರಡು ಯೋಜನೆ ಹಾಕಿಕೊಂಡರು. ಅನಂತರ ಪ್ರಹ್ಲಾದರಾವ್ ಬೆಂಗಳೂರಿಗೆ ಹೊರಟುಹೋದರು. ಇದು ಆಗಿ ಒಂದು ತಿಂಗಳಲ್ಲೇ ವಿಷ್ಣುತೀರ್ಥರು ಭಾಗವತ ಮಂಗಳದ ವಿಷಯ ಮತ್ತು ಸಮಾರಂಭದ ದಿನಾಂಕವನ್ನು ತಿಳಿಸಿ ನೂರಾರು ಆಹ್ವಾನ ಪತ್ರಿಕೆಗಳನ್ನು ವಿತರಿಸಿ ದರು.

ಕಾರ್ತೀಕ ಶುದ್ಧ ಹುಣ್ಣಿಮೆ ದಿನ (ದಿನಾಂಕ ೧೫–೧೧–೧೯೫೯) ಭಾನುವಾರವೂ ಮತ್ತು ಮರುದಿನವೂ ಒಟ್ಟು ಎರಡು ದಿನ ನವ ವೃಂದಾವನದಲ್ಲಿ ಅಣ್ಣತಮ್ಮಂದಿರ ನಿರೀಕ್ಷೆ ಮೀರಿ ಅನೇಕ ಭಕ್ತಾದಿಗಳ ಸಹಕಾರ ಸಹಾಯಗಳಿಂದ ಆ ಮಂಗಳಮಹೋತ್ಸವವು ಬಹಳ ಯಶಸ್ವಿಯಾಗಿ ಅದ್ಧೂರಿಯಿಂದ ನಡೆಯಿತು. ಒಂಬತ್ತು ವೃಂದಾವನಗಳಿಗೂ ಯಥೇಚ್ಛವಾಗಿ ಪಂಚಾಮೃತಾಭಿಷೇಕವಾಗಿ ಅವು ಹೂಹಾರಗಳಿಂದ ಜಗಜಗಿಸುತ್ತಿದ್ದು, ಕಣ್ಣು ಕೋರೈಸುವಂತೆ ಮಂಗಳಾರತಿಗಳಾದ ಮೇಲೆ ನೂರಾರು ಜನ ಬ್ರಾಹ್ಮಣ ಸುವಾಸಿನಿಯರಿಗೂ ಅನೆಗೊಂದಿಯ ರಾಜಬಂಧುಗಳೇ ಮೊದಲಾದ ಇತರ ಅನೇಕ ಜನಗಳಿಗೂ ಮಂಡಿಗೆಸಂತರ್ಪಣೆ ನಡೆಯಿತು. ಹಾಲು–ತುಪ್ಪದ ಕೋಡಿ ಹರಿದು ಬಂದಿದ್ದವರೆಲ್ಲರೂ ಸಂತೃಪ್ತರಾಗಿ ಬಹಳ ಸಂತೋಷಪಟ್ಟುಕೊಂಡು ಹೋದರು. ಈ ಸಮಾರಂಭಕ್ಕೆ ೩೫ ಕೊಡ ಡೈರಿ ಹಾಲನ್ನು ಒದಗಿಸಿದ ಒಬ್ಬ ಪುಣ್ಯಾತ್ಮರು ಅಭಿಷೇಕಾದಿ ವೈಖರಿಯನ್ನು ನೋಡಿ ಪೂರ್ಣವಾಗಿ ಸಂತುಷ್ಟಗೊಂಡು ಹಾಲಿಗೆ ದುಡ್ಡನ್ನು ಇಸಿದುಕೊಳ್ಳಲೇ ಇಲ್ಲ. ಆದರೆ ಇನ್ನೊಬ್ಬ ದುರ್ದೈವಿಗಳು ಎರಡು ಡಬ್ಬ ಬೆಣ್ಣೆ ಕಾಸಿದ ತುಪ್ಪವನ್ನು ಮುಫತ್ತಾಗಿ ಒದಗಿಸಿದ್ದರೂ ಅದರಲ್ಲಿ ಇಲಿ ಬಿದ್ದು ವಾಸನೆ ಬಂದ ಕಾರಣ ಅದನ್ನು ನಿರಾಕರಿಸಿದ್ದರಿಂದ ಬಹಳ ಖಿನ್ನಮನಸ್ಕರಾದರು. ಈ ಮಂಗಳಕ್ಕಾಗಿ ಹುರುಪಿನಿಂದ ಕೆಲಸ ಮಾಡಿ ತಮ್ಮಲ್ಲಿದ್ದ ಅಲ್ಪಸ್ವಲ್ಪ ಹಣವನ್ನೆಲ್ಲಾ ತೆರೆದ ಮನಸ್ಸಿನಿಂದ ಖರ್ಚು ಮಾಡಿದ ಕಾರಣ ತಮ್ಮ ಪ್ರಹ್ಲಾದರಾಯರ ಆರ್ಥಿಕ ಸ್ಥಿತಿಯೂ ಅಂದಿನಿಂದ ಉತ್ತಮಗೊಂಡಿತು.

ನವವೃಂದಾವನದಲ್ಲಿ ಅವರು ಮುಂದುವರಿಸಿದ ಸೇವೆ

ಮಂಗಳವಾದ ಬಳಿಕ ವಿಷ್ಣುತೀರ್ಥರು ಸಪ್ತಾಹವಿಧಿಯಿಂದ ನಾಲ್ಕೈದು ಸಲ ಸಂಪೂರ್ಣ ಭಾಗವತವನ್ನೂ, ವಾಲ್ಮೀಕಿರಾಮಾಯಣದ ಸಪ್ತಕಾಂಡಗಳನ್ನೂ, ಹದಿನೆಂಟು ಪರ್ವ ಮೂಲ ಮಹಾಭಾರತವನ್ನೂ, ಹರಿವಂಶಾದಿಗಳನ್ನೂ ಅನೇಕ ಮಾಧ್ವ ಸಚ್ಛಾಸ್ತ್ರಗ್ರಂಥಗಳನ್ನೂ ನವವೃಂದಾವನದಲ್ಲೇ ಇದ್ದು ಪಾರಾಯಣ ಮಾಡಿ ನವಯತಿಗಳಿಗೆ ಸಮರ್ಪಿಸಿದರು. ಅವರು ಅಲ್ಲೇ ಇದ್ದುದರಿಂದ ನವ ವೃಂದಾವನಕ್ಕೆ ಬಂದು ಹೋಗುವ ಯಾತ್ರಿಕರ ಸಂಖ್ಯೆ ಕ್ರಮವಾಗಿ ಹೆಚ್ಚಿತು. ತಂಡೋಪತಂಡ ಯಾತ್ರಿಕರು ಬಂದಾಗಲೂ ಸಹ ಅವರು ಶ್ರದ್ಧೆಯಿಂದ ಅಡಿಗೆ ಮಾಡಿ, ನೈವೇದ್ಯ ಮಾಡಿ ಹಸ್ತೋದಕಕ್ಕಿಟ್ಟು ಅವರಿಗೆಲ್ಲಾ ತೀರ್ಥಪ್ರಸಾದವನ್ನು ಹಂಚುತ್ತಿದ್ದರು. ಹರಿಗೋಲಿನಲ್ಲಿ ಬಂದು ಹೋಗುವುದಕ್ಕೆ ಅನುಕೂಲವಾಗಿ

ಅಂಬಿಗರು ಯಾವಾಗಲೂ ಸಿದ್ಧವಾಗಿರುತ್ತಿದ್ದರು. ಪ್ರತಿಯಾಗಿ ಇದರಿಂದ ಅವರಿಗೆಲ್ಲಾ ಯಥೇಚ್ಛವಾಗಿ ದುಡ್ಡು ಬರುತ್ತಿದ್ದುದರಿಂದ ಅಂಬಿಗರೆಲ್ಲರೂ ವಿಷ್ಣುತೀರ್ಥರಿಗೆ ಈಗಲೂ ಚಿರಋಣಿಯಾಗಿದ್ದಾರೆ. ಹೀಗೆ ಇಪ್ಪತ್ತು ವರ್ಷ ಕಾಲ (೧೯೫೨–೭೨) ವಿಷ್ಣುತೀರ್ಥರು ನವವೃಂದಾವನದಲ್ಲಿ ಏಕಾಂಗಿಯಾಗಿ ಇದ್ದುಕೊಂಡು ಸೇವೆ ಸಲ್ಲಿಸಿದರು. ಆದರೂ ಅವರು ಒಂದು ದಿನವೂ ಯಾರನ್ನೂ ದುಡ್ಡಿಗಾಗಿಯಾಗಲೀ, ಬೇರೆ ಯಾವುದಕ್ಕೇ ಆಗಲೀ ಕೇಳಿ ಕೈಚಾಚಿದವರಲ್ಲ. ತಾನಾಗಿ ಬಂದ ದುಡ್ಡನ್ನು ಭಕ್ತಾದಿಗಳ ಊಟ ಉಪಚಾರ ಮುಂತಾದ ಅನುಕೂಲಕ್ಕಾಗಿಯೇ ಖರ್ಚು ಮಾಡಿ ಅವರನ್ನು ಸಂತೃಪ್ತಿಗೊಳಿಸಿ ಕಳುಹಿಸುತ್ತಿದ್ದರು. ಹೀಗೆ ತೀರ್ಥರು ನವವೃಂದಾವನದಲ್ಲಿರುವಾಗಲೇ ೧೯೬೪ನೇ ವರ್ಷದಲ್ಲಿ ಅವರ ತಮ್ಮನ ಹಿರಿಯ ಮಗನ ಉಪನಯನವೂ ೧೯೭೨ನೇ ಮಾರ್ಚ್‌ನಲ್ಲಿ ಅವರ ಅರುವತ್ತನೇ ವರ್ಷದ ಶಾಂತಿಯೂ ನಡೆದವು.

ಪಂಪಾಮಹಾತ್ಮ್ಯದ ಲೇಖನ

ವಿಷ್ಣು ತೀರ್ಥರು ನವವೃಂದಾವನಕ್ಕೆ ಹೋದ ಹೊಸದರಲ್ಲಿ ಮೊದಲ ಮೂರು ವರ್ಷ ಜುಲೈ ತಿಂಗಳ ಕಡೆಯಲ್ಲಿ ನವವೃಂದಾವನ ಬಿಟ್ಟು ಮಳೆಗಾಲದಲ್ಲಿ ಮಾತ್ರ ಹಂಪೆಯಲ್ಲಿ ಯಂತ್ರೋದ್ಧಾರಕರ ಗುಡಿಯಲ್ಲಿದ್ದುಕೊಂಡು ಪ್ರಾಣದೇವರ ಸೇವೆ ಮಾಡುತ್ತಿದ್ದು ಕಾರ್ತಿಕ ಮಾಸದ ಕೊನೆಯಲ್ಲಿ ಪದ್ಮನಾಭತೀರ್ಥರ ಆರಾಧನೆ ಹೊತ್ತಿಗೆ ನವವೃಂದಾವನಕ್ಕೆ ಹಿಂತಿರುಗುತ್ತಿದ್ದರು. ಹೀಗೆ ಹಂಪೆಯಲ್ಲಿ ವಾಸಮಾಡುತ್ತಿದ್ದುದರ ಗುರುತಾಗಿ ಅಲ್ಲಿನ ಕ್ಷೇತ್ರಾಧಿಪತಿಯ ಪ್ರೀತ್ಯರ್ಥವಾಗಿ. ತೆಲುಗುಲಿಪಿಯಲ್ಲಿ ಮುದ್ರಿತವಾದ ಸ್ಕಾಂದಪುರಾಣದ ಹೇಮಕೂಟ ಖಂಡದ ಪಂಪಾಮಾಹಾತ್ಮ್ಯ ಎಂಬ ಒಂದು ಗ್ರಂಥವನ್ನು ಮುಖ್ಯ ಆಧಾರವಾಗಿಟ್ಟುಕೊಂಡು ಆಮೇಲೆ ದೇವನಾಗರಿ ಲಿಪಿಯಲ್ಲಿ ಪ್ರಾಪ್ತವಾದ ಅದರ ಇನ್ನೊಂದು ಹಸ್ತಪ್ರತಿಯನ್ನೂ ಉಪಯೋಗಿಸಿಕೊಂಡು ಪಂಪಾಮಾಹಾತ್ಮ್ಯದ ಸಂಗ್ರಹಾನುವಾದವನ್ನು ೧೯೫೬ ರಲ್ಲಿ ಕನ್ನಡದಲ್ಲಿ ಬರೆದು ೨೫೦ ಪುಟಗಳ ಪುಸ್ತಕವಾಗಿ ೧೯೬೪ರಲ್ಲಿ ಮುದ್ರಿಸಿ ಪ್ರಕಟಿಸಿದರು. ಈ ಪುಸ್ತಕದ ಕೊನೆಯ ಭಾಗದಲ್ಲಿ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಹಂಪೆ ಮತ್ತು ಕಿಷ್ಕಿಂಧಾ ಕ್ಷೇತ್ರಗಳಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನೂ ಅವುಗಳ ಮಹಿಮೆಯನ್ನೂ ಪ್ರಾಮಾಣಿಕವಾಗಿ ಬರೆದಿರುವುದಲ್ಲದೆ ಅಲ್ಲಿಗೆ ಹೋಗಲು ಮಾರ್ಗದ ವಿವರಗಳನ್ನೂ ಕೊಟ್ಟಿದ್ದಾರೆ. ಜೊತೆಗೆ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನೂ ಸಂಕ್ಷಿಪ್ತವಾಗಿ ಅದರ

ಸಾಕ್ಷ್ಯಾಧಾರಗಳೊಡನೆ ಬರೆದಿದ್ದಾರೆ. ಈ ಪುಸ್ತಕವನ್ನು ವಿಮರ್ಶಿಸುತ್ತಾ ಕನ್ನಡದ ಅನೇಕ ಪ್ರಮುಖ ದೈನಿಕ, ಸಾಪ್ತಾಹಿಕ, ಮಾಸಿಕಾದಿ ಪತ್ರಿಕೆಗಳು ಅದರ ಹೆಗ್ಗಳಿಕೆಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದರಿಂದ ಇದರ ಎಲ್ಲಾ ಪ್ರತಿಗಳೂ ಶೀಘ್ರವಾಗಿ ಮುಗಿದುಹೋದುವು. ಆದರೆ ಆರ್ಥಿಕಬೆಂಬಲವಿಲ್ಲದೆ ಈ ಗ್ರಂಥದ ಪುನರ್ಮುದ್ರಣ ಈವರೆವಿಗೂ ಆಗಿಲ್ಲ.

ಸ್ಥಾನಪಲ್ಲಟ

ವಿಷ್ಣುತೀರ್ಥರು ನವವೃಂದಾವನದಲ್ಲಿರುತ್ತಿದ್ದಾಗ ೧೯೫೬ರ ನವೆಂಬರ್‌ನಲ್ಲಿ ಒಮ್ಮೆ ಇವರಿಗೂ ನದೀ ದಡದ ಆಚೆ ಆನೆಗೊಂದಿಯಲ್ಲಿದ್ದ ಶ್ರೀ ಚಿಂತಾಮಣಿಮಠದ ಮುಖ್ಯಸ್ಥರಾದ ಸ್ಮಾರ್ತಸ್ವಾಮಿಗಳಿಗೂ ಪರಿಚಯವಾಯಿತು. ಅವರಿಗೆ ತೀರ್ಥರು ಸರ್ಕಾರದೊಡನೆ ಇಂಗ್ಲೀಷ್‌ನಲ್ಲಿ ನಡೆಸಬೇಕಾದ ಪತ್ರವ್ಯವಹಾರ ಮಾಡುವುದರಲ್ಲೂ ಮಠದ ಲೆಕ್ಕಪತ್ರಗಳ ಲೇಖನದಲ್ಲೂ ಪ್ರತಿಫಲಾಪೇಕ್ಷೆಯಿಲ್ಲದೆ ಶ್ರದ್ಧೆಯಿಂದ ಸಹಾಯ ಮಾಡಲು ಅನುವಾದರು, ಈ ಕಾರಣದಿಂದ ತೀರ್ಥರ ಮತ್ತು ಆ ಸ್ವಾಮಿಗಳ ನಡುವೆ ಇದ್ದ ಸ್ನೇಹ ಇನ್ನೂ ಗಾಢವಾಗಿ ಬೆಳೆಯಿತು. ಅಲ್ಲದೆ ಸ್ವಾಮಿಗಳು ತೀರ್ಥರ ನಿಷ್ಕಾಮ ಜೀವನ, ತ್ಯಾಗ, ವಿದ್ಯೆ, ವಿನಯ, ದೈವಭಕ್ತಿ, ನಿಷ್ಠೆಯಿಂದ ಮಾಡುವ ಕಾರ್ಯಸಾಧನೆ, ಮುಂತಾದ ಗುಣಗಳಿಗೆ ಮಾರುಹೋದರು. ೧೯೭೧ ರಲ್ಲಿ ಆ ಚಿಂತಾಮಣಿ ಮಠದ ಸ್ವಾಮಿಗಳನ್ನೇ ಕರ್ನಾಟಕ ಸರ್ಕಾದವರು ಕೂಡಲೀ ಶೃಂಗೇರಿ ಮಠದ ಪೀಠಾಧಿಪತಿಗಳನ್ನಾಗಿ ಆರಿಸಿ, ಅವರಿಗೆ ಅಧಿಕಾರ ವಹಿಸಿಕೊಟ್ಟರು. ಶ್ರೀಗಳವರು ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದ ಕೂಡಲೀ ಮಠದ ಆಗು-ಹೋಗುಗಳು ಒಂದು ಹದಕ್ಕೆ ಬರುವವರೆಗೂ ತೀರ್ಥರನ್ನು ತಮ್ಮ ಬಳಿ ಇದ್ದು ಸಹಾಯ ಮಾಡುವಂತೆ ಅಪೇಕ್ಷಿಪಟ್ಟರು. ತೀರ್ಥರು ಅದಕ್ಕೊಪ್ಪಿದರು. ಹೀಗಾದ್ದರಿಂದ ಇಪ್ಪತ್ತು ವರ್ಷಗಳಿಂದ ನವವೃಂದಾವನದಲ್ಲೇ ಇದ್ದು ಯತಿವರ್ಯರ ಸೇವೆ ಮಾಡುತ್ತಿದ್ದ ಅವರ ಸುಯೋಗ ಈಗ ತಪ್ಪಿಹೋಯಿತು, ನಿಜ. ಆದರೆ ಅದೂ ಹರೀಚ್ಛೆಯೇ ಎಂದು ಭಾವಿಸಿ ಸಮಾಧಾನ ಮಾಡಿಕೊಂಡರು.

ವಿಷ್ಣುತೀರ್ಥರು ಕೂಡಲಿಯಲ್ಲಿ ಸುಮಾರು ಹದಿನಾರು ವರ್ಷ ಕಾಲ ಇದ್ದು ಆ ಸ್ವಾಮಿಗಳಿಗೆ ಬಲಭುಜದಂತಿದ್ದರು. ಈ ಕಾಲದಲ್ಲಿ ಅವರು ಶಕ್ತಿ ಮೀರಿ ಕೆಲಸ ಮಾಡಿ, ಆ ಮಠವು ಸುವ್ಯವಸ್ಥಿತವಾಗಿ ರೂಪುಗೊಳ್ಳುವಂತೆಯೂ, ತನ್ನ ಕಾರ್ಯಕಲಾಪಗಳನ್ನು ತಾನೇ ನಡೆಸಿಕೊಂಡು ಹೋಗಲು ಸಮರ್ಥವಾಗುವಂತೆಯೂ

ಕೂಡಲೀ ಶೃಂಗೇರಿ ಮಹಾಸಂಸ್ಥಾನದ ಸರ್ವಾಧಿಕಾರಿಗಳಾದ
ಶ್ರೀರಾಮನಾರಾಯಣ ಅವಧಾನಿಗಳು 'ಕೂಡಲೀಮಠದ ಇತಿಹಾಸ ಬಿಡುಗಡೆ'
ಸಮಾರಂಭದಲ್ಲಿ ಶಾಲು ಹೊದಿಸಿ ಗೌರವಿಸುತ್ತಿರುವುದು

ಮಾನ್ಯ ಶ್ರೀ ರಾಮಾಜೋಯಿಸ (ನ್ಯಾಯಮೂರ್ತಿ) ಅವರ ಅಧ್ಯಕ್ಷತೆಯಲ್ಲಿ
ನಡೆದ ಇತಿಹಾಸ ಪುಸ್ತಕದ ಬಿಡುಗಡೆ ಸಮಾರಂಭ

ಮಾಡಿ ಸಹಕರಿಸಿದರು. ಈ ಹದಿನಾರು ವರ್ಷವೂ ಅವರ ಸಂಬಳ ಸಾರಿಗೆ ಏನೂ ತೆಗೆದುಕೊಳ್ಳದೆ ಯಾವ ವಿಧವಾದ ಪ್ರತಿಫಲಾಪೇಕ್ಷೆಯೂ ಇಲ್ಲದೆ, ನಿಸ್ವಾರ್ಥ ಸೇವೆ ಸಲ್ಲಿಸಿದರು.

ಕೂಡಲಿಯಲ್ಲಿದ್ದಾಗ ವಿಷ್ಣುತೀರ್ಥರು ಸ್ಥಳೀಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶ್ರೀ ಶಂಕರಾಚಾರ್ಯರು ರಚಿಸಿದ ಸುಮಾರು ೬೦–೭೦ ಸ್ತೋತ್ರಗಳನ್ನು ಇಂಪಾಗಿ ರಾಗಬದ್ಧವಾಗಿ ಪಠಿಸುವುದನ್ನು ಅಭ್ಯಾಸ ಮಾಡಿಸಿದರು. ಅದೂ ಅಲ್ಲದೆ ಸಂಸ್ಕೃತ ಕಲಿಸುವುದಕ್ಕಾಗಿಯೇ ಒಂದು ಹೊಸ ಪಾಠಶಾಲೆಯನ್ನೇ ಆರಂಭಿಸಿ ಸಂಸ್ಕೃತಪಾಠಗಳನ್ನು ಹೇಳಿಕೊಟ್ಟು ಅನೇಕ ಸಂಸ್ಕೃತಪರೀಕ್ಷೆಗಳಿಗೆ ಕೂಡಿಸಿ ಉತ್ತೀರ್ಣರಾಗಲು ಪ್ರೋತ್ಸಾಹಿಸುತ್ತಿದ್ದರಲ್ಲದೆ ಶಾಲೋಪಯೋಗಿ ವಿಷಯಗಳನ್ನೂ ಬೋಧಿಸಿ ಯಥೇಷ್ಟ ಸಹಾಯ ಮಾಡುತ್ತಿದ್ದರು. ಅದಕ್ಕೂ ಹೆಚ್ಚಾಗಿ ಅಧಿಕೃತರಾದ ಉತ್ಸಾಹಿ ಬಾಲಕರಿಗೆ ಪೂಜೋಪಯೋಗಿ ಮಂತ್ರಗಳನ್ನು ಸಸ್ವರವಾಗಿ ನಮಕ, ಚಮಕ ಪವಮಾನಾದಿ ವೇದಭಾಗಗಳನ್ನು ಅಭ್ಯಾಸ ಮಾಡಿಸಿದರಲ್ಲದೆ ಅಷ್ಟಾವಧಾನ ಸೇವೆಗೆ ಅನುಕೂಲ ವಾಗುವಂತೆ ಅನೇಕ ಋಗ್ವೇದ, ಯಜುರ್ವೇದ ಮಂತ್ರಗಳಿಗೆ ಪದಕ್ರಮ ಜಟಾ-ಘನ ಪಾಠವನ್ನು ಹೇಳಿಸಿಯೂ ತರಪೇತು ಮಾಡಿದರು.

ಅದಕ್ಕೂ ಮಿಗಿಲಾಗಿ ಆ ಕೂಡಲೀ ಶೃಂಗೇರಿ ಮಠದ ಸಾವಿರಾರು ದಾಖಲೆಗಳನ್ನು ಶೋಧನೆ ಮಾಡಿ ಸುಮಾರು ಹತ್ತು ವರ್ಷ ವಿಶೇಷ ಶ್ರಮಪಟ್ಟು ಆ ಮಠದ ಸಂಕ್ಷಿಪ್ತ ಆದರೆ ಪ್ರಾಮಾಣಿಕವಾದ ಇತಿಹಾಸವನ್ನು ಕನ್ನಡಭಾಷೆಯಲ್ಲಿ ಬರೆದು ಕೊಟ್ಟರು. ಅದು ೧೯೬೮ರಲ್ಲಿ ಮುದ್ರಿತವಾಗಿ ಕರ್ನಾಟಕ ಸರ್ಕಾರದ ಉಚ್ಚನ್ಯಾಯಾಧಿಕಾರಿಗಳಾಗಿದ್ದ ಮಾನ್ಯ ಶ್ರೀ ರಾಮಾಜೋಯಿಸರ ನೇತೃತ್ವದಲ್ಲಿ ಬಿಡುಗಡೆಯೂ ಆಯಿತು. ಈ ಇತಿಹಾಸವನ್ನು ಶ್ರೀಗಳವರು ಇಂಗ್ಲಿಷ್, ತೆಲುಗು, ತಮಿಳು, ಮರಾಠಿ ಮತ್ತು ಹಿಂದೀ ಭಾಷೆಗಳಲ್ಲೂ ಭಾಷಾಂತರಿಸಿ ಪ್ರಚಾರಪಡಿಸಬೇಕೆಂದಿದ್ದಾರೆ. ಅದರ ಇಂಗ್ಲಿಷ್ ಭಾಷಾಂತರವನ್ನು ವಿಷ್ಣುತೀರ್ಥರ ತಮ್ಮಂದಿರೂ ಬೆಂಗಳೂರು ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ನಿವೃತ್ತಿ ಹೊಂದಿದವರೂ, ಪ್ರಸ್ತುತ 'ಎಲೆಮರೆಯ ಹೂ'ವಿನ ಲೇಖಕರೂ ಆದ ಪಿ. ಪ್ರಹ್ಲಾದರಾವ್ ಸಿದ್ಧಪಡಿಸಿದ್ದಾರೆ. ಅದು ಸದ್ಯದಲ್ಲೇ ಮುದ್ರಣವಾಗಬಹುದು. ತೀರ್ಥರು ಬರೆದ ಈ ಕೃತಿಯನ್ನೂ ಪಂಪಾಮಹಾತ್ಮ್ಯೆಯನ್ನೂ ಮತ್ತು ಇತರ ಲೇಖನಗಳನ್ನೂ ಓದಿ ಮೆಚ್ಚಿಕೊಂಡ, ವಿದ್ಯಾಪಕ್ಷಪಾತಿಗಳೂ ಉದಾರ ದಾನಿಗಳೂ ಆದ ಕಂಚೀ ಮಠದ ಸ್ವಾಮಿಗಳು ವಿಷ್ಣುತೀರ್ಥರನ್ನು

ತಮ್ಮ ಮಠಕ್ಕೆ ಈಚೆಗೆ ಕರೆಸಿಕೊಂಡು ಸನ್ಮಾನ ಮಾಡಿದರು.

ಧರಣೀಧರನ್‌ರ ಉತ್ಸುಕತೆ

ಕೆಲವು ವರ್ಷಗಳ ಹಿಂದೆ ಮದರಾಸಿನಿಂದ ಹೊರಡುವ "ಆನಂದ ವಿಕಟನ್" ಎಂಬ ತಮಿಳು ವಾರಪತ್ರಿಕೆಯು ದಕ್ಷಿಣ ಹಿಂದೂಸ್ಥಾನದಲ್ಲಿ ಅಲ್ಲಲ್ಲಿ ಹರಡಿಕೊಂಡಿರುವ ಅನೇಕ ಪುಣ್ಯಸ್ಥಳಗಳ, ಮಠಗಳ ಮತ್ತು ಧಾರ್ಮಿಕ ಸಂಸ್ಥೆಗಳ ವಿವರಗಳನ್ನೊಳಗೊಂಡ ಒಂದು ಸುದೀರ್ಘ ಲೇಖನಮಾಲೆಯನ್ನು ಪ್ರಕಟಿಸಲಾರಂಭಿಸಿತು. ಇದಕ್ಕೆ ಲೇಖನದಾತರಾದ ಶ್ರೀ ಧರಣೀಧರನ್ ಎಂಬುವರು ಎಲ್ಲಾ ಕಡೆ ಸಂಚಾರ ಮಾಡುತ್ತಾ ಕೂಡಲಿಗೂ, ಹಂಪೆ, ಆನೆಗೊಂದಿ, ಹೊಸಪೇಟೆ—ಇವುಗಳಿಗೂ ಭೇಟಿ ಕೊಟ್ಟರು. ಅವರು ಮೇಲಿನ ಮೂರು ಸ್ಥಳಗಳ ಹಾಗೂ ಅಲ್ಲಿಯ ಸುತ್ತಮುತ್ತಲಿನ ವಿಶೇಷ ಸ್ಥಳಗಳ ಪ್ರಾಮಾಣಿಕವಾದ ವಿವರಣೆಗಳನ್ನು ಕೊಡಬಲ್ಲ ಒಬ್ಬ ವ್ಯಕ್ತಿಗಾಗಿ ಅರಸುತ್ತಿದ್ದಾಗ ಅಲ್ಲಿಯ ಪ್ರಮುಖ ವ್ಯಕ್ತಿಗಳೆಲ್ಲ ಅವರಿಗೆ ವಿಷ್ಣುತೀರ್ಥರನ್ನು ಹೆಸರಿಸಿದರಲ್ಲದೆ 'ಆ ವಿವರಣೆಗಳು ನಮಗೆ ಸರಿಯಾಗಿ ಗೊತ್ತಿಲ್ಲ. ನಿಮ್ಮ ಪ್ರಶ್ನೆಗಳಿಗೆಲ್ಲಾ ಸಮರ್ಪಕವಾದ ಉತ್ತರಗಳನ್ನು ಶ್ರೀ ವಿಷ್ಣುತೀರ್ಥರೊಬ್ಬರು ಮಾತ್ರ ಕೊಡಬಲ್ಲರಲ್ಲದೆ ಇನ್ನಾರೂ ಈ ವಿಷಯಗಳನ್ನು ನಿಮಗೆ ತಿಳಿಸಲಾರರು' ಎಂದರಂತೆ. ಆದರೆ ದುರ್ದೈವದಿಂದ ಮೂರು ಸ್ಥಳಗಳಿಗೆ ಹೋದಾಗಲೂ ಶ್ರೀ ಧರಣೀಧರನ್ ಅವರಿಗೆ ವಿಷ್ಣುತೀರ್ಥರನ್ನು ಭೇಟಿಯಾಗುವ ಯೋಗ ದೊರಕಲೇ ಇಲ್ಲ. ಆದರಿಂದ ಅವರು ನಿರಾಶರಾಗಿ ಮದರಾಸಿಗೆ ಹಿಂತಿರುಗಿದರು. ಸ್ವಲ್ಪ ಕಾಲಾನಂತರ ವಿಷ್ಣುತೀರ್ಥರಿಗೆ ಕಾಗದ ಬರೆದು ಅವರಿಗೆ ಬೇಕಾದ ವಿಷಯಗಳನ್ನು ಸಂಗ್ರಹಿಸಿಕೊಂಡು ತಮ್ಮ ಪತ್ರಿಕೆಯಲ್ಲಿ ಉದ್ದೇಶಿತ ಪ್ರಬಂಧವನ್ನು ಬರೆದು ವಿಷ್ಣುತೀರ್ಥರ ಪರಿಚಯದೊಡನೆ ಪ್ರಕಟಿಸಿದರು. ಅದನ್ನು ಓದಿದ ತೀರ್ಥರ ಕೆಲವು ಹಳೆಯ ವಿದ್ಯಾರ್ಥಿಗಳಿಂದ ಈ ವಿಷಯ ಅವರಿಗೆ ತಿಳಿಯಿತು.

ಅಸೀಮ್ ಕೃಷ್ಣದಾಸನ ಪರಿಚಯ

ಈಗ್ಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ನಿವಾಸಿಯಾದ ಒಬ್ಬ ಸಂಶೋಧಕನು ವಿಷ್ಣುತೀರ್ಥರ ಸಂಪರ್ಕ ಹುಡುಕಿಕೊಂಡು ಬಂದ. ಈತ ತನ್ನ ದೇಶದಿಂದ ಭಾರತಕ್ಕೆ ಬಂದು ಸಾಲಿಗ್ರಾಮಗಳ ಬಗ್ಗೆ ಅನ್ವೇಷಣೆ ಮತ್ತು ಅಧ್ಯಯನ ಮಾಡಿ ಒಂದು ಪ್ರೌಢ ಪ್ರಬಂಧವನ್ನು ಬರೆದು

ಕೊಟ್ಟು ಡಾಕ್ಟರೇಟ್ ಪಡೆದನಲ್ಲದೆ ಚೈತನ್ಯ ಕೃಷ್ಣಪಂಥದ ದೀಕ್ಷೆ ವಹಿಸಿ, ಅಸೀಮ್ ಕೃಷ್ಣದಾಸ್ ಎಂಬ ನಾಮಧೇಯವನ್ನೂ ಧರಿಸಿದ್ದಾನೆ. ಈತನು ಹಂಪೆಯ ಅಂತರರಾಷ್ಟ್ರೀಯ ಯೋಜನೆಗೆ ಸ್ಕಾಂದಪುರಾಣದ ಹೇಮಕೂಟ ಖಂಡಕ್ಕೆ ಸೇರಿದ ಪಂಪಾಮಹಾತ್ಮೆಯ ಅಧಿಕೃತ ಸಂಸ್ಕೃತ ಮೂಲವನ್ನೂ ಅದರ ಇಂಗ್ಲೀಷ್ ಅನುವಾದವನ್ನೂ ಸಿದ್ಧಪಡಿಸಿಕೊಡುವುದಾಗಿ ಒಪ್ಪಿಕೊಂಡಿದ್ದಾನೆ. ಈತ ಸಂಸ್ಕೃತಮೂಲವನ್ನು ಪಾಠಾಂತರಗಳೊಡನೆಯೂ, ಅತ್ಯುಪಯುಕ್ತವಾದ ಅಧ್ಯಾಯ ಸಾರಾಂಶ. ಮಾರ್ಗದರ್ಶನಾದಿ ಸಂಪಾದಕೀಯ ಟಿಪ್ಪಣಿಗಳೊಡನೆ ಬರೆದುಕೊಡಲು ವಿಷ್ಣುತೀರ್ಥರನ್ನು ಆಶ್ರಯಿಸಿದ್ದಾನೆ. ಅವರು ಈ ಕೆಲಸ ಆರಂಭಿಸಿ ಇಪ್ಪತ್ನಾಲ್ಕು ತಿಂಗಳಾದವು. ಈ ಮಧ್ಯೆ ಆರು ವಾರ ಉತ್ತರ ಪ್ರದೇಶದ ಮಥುರಾ ಬಳಿ ಇರುವ ಬೃಂದಾವನಕ್ಕೂ ಈ ಕೆಲಸಕ್ಕಾಗಿಯೇ ಹೋಗಿ ಬಂದರು. ಆದರೂ ಅವರು ನಿರೀಕ್ಷಿಸಿದಷ್ಟು ಕೆಲಸ ಸಾಗಲಿಲ್ಲವಾದ್ದರಿಂದ ಬೇರೆ ಯೋಜನೆಗಳನ್ನು ಕೈಗೊಳ್ಳುವ ಆಲೋಚನೆಯಲ್ಲಿದ್ದಾರೆ.

ದೇಶಾಟನೆ

ವಿಷ್ಣುತೀರ್ಥರು ತಮ್ಮ ಜೀವನದ ಆದಿ ಮಧ್ಯ ಭಾಗಗಳಲ್ಲಿ ಹೆಚ್ಚು ಪ್ರಯಾಣ ಮಾಡದಿದ್ದರೂ ಕಡೆಕಡೆಯ ದಶಕಗಳಲ್ಲಿ ಬಹಳ ಸಂಚಾರ ಮಾಡಿದ್ದಾರೆ. "ಆಸೇತುಹಿಮಾಚಲ" ಎಂಬ ನಾಣ್ಣುಡಿಗೆ ಅನುಗುಣವಾಗಿ ಅವರು ನಮ್ಮ ದೇಶದ ಎಲ್ಲಾ ಪುಣ್ಯಕ್ಷೇತ್ರಗಳಿಗೂ, ಅದರಲ್ಲೂ ವಿಶೇಷವಾಗಿ ಮಾಧ್ವರಿಗೆ ಆಸಕ್ತಿ ಕೆರಳಿಸುವ ಸ್ಥಳಗಳಿಗೆ ಯಾತ್ರೆ ಹೋಗಿ ಬಂದಿದ್ದಾರೆ. ಬದರೀಕ್ಷೇತ್ರಕ್ಕೇ ಮೂರು ಸಾರಿ ಹೋಗಿ ಬಂದಿದ್ದಾರೆ. ಈ ಇಳಿವಯಸ್ಸಿನಲ್ಲೂ (೭೯ ವರ್ಷ) ಅವರು ಗಂಟುಮೂಟೆಗಳನ್ನು. ಅಂದರೆ ತಮ್ಮ ದೇವಪೂಜಾ ಸಾಮಗ್ರಿಗಳನ್ನೂ ರಾಶಿರಾಶಿ ಪುಸ್ತಕಗಳನ್ನೂ ಹೊತ್ತುಕೊಂಡು ಹೋಗುವುದನ್ನು ನೋಡಿದರೆ ಅವರ ಕಾಲಿನಲ್ಲಿ ಚಕ್ರವಿದೆಯೋ ಎನಿಸದೆ ಇರದು.

ವಿಷ್ಣುತೀರ್ಥರ ಜನಪ್ರಿಯತೆ

ಯಾರೇ ಆಗಲಿ, ಅವರ ಮೇಲೆ ಶ್ರೀಹರಿಯ ಒಲುಮೆ ಇದ್ದರೆ ಮಾತ್ರ ಗಂಡ, ಹೆಂಡತಿ, ಮಕ್ಕಳು, ಬಂಧು–ಮಿತ್ರಾದಿಗಳೆಲ್ಲ ಅವರಿಗೆ ಪ್ರಿಯರಾಗುವರೇ ಹೊರತು, ತಾವಾಗಿ ಬಯಸಿದ ಮಾತ್ರಕ್ಕೆ ಅವರು ಪ್ರಿಯರಾಗವುದಿಲ್ಲವೆಂದು ಬೃಹದಾರಣ್ಯಕೋಪನಿಷತ್ತಿನಲ್ಲಿ (ಅ. ೪, ಬ್ರಾ. ೪, ಖಂ. ೫) ಪ್ರತಿಪಾದಿಸಲ್ಪ

ಟ್ಟಿದೆ. ಈ ಹೇಳಿಕೆಯ ತಥ್ಯ ಸಂಪೂರ್ಣವಾಗಿ ತಮ್ಮ ಅನುಭವಕ್ಕೆ ಬಂದಿದೆ ಯೆಂದು ವಿಷ್ಣುತೀರ್ಥರು ಹೇಳುತ್ತಾರೆ. ಅವರು ತಾವಾಗಿ ಯಾರ ಸ್ನೇಹವನ್ನೂ ಬಯಸುವುದಿಲ್ಲ. ಆದರೆ ಅವರು ಎಲ್ಲಿದ್ದರೂ ಎಲ್ಲೆಲ್ಲಿ ಹೋದರೂ ಎಲ್ಲಾ ತರಹದ ಜನಗಳೂ ಅವರ ಸರಳತೆಯಿಂದ ಆಕರ್ಷಿತರಾಗುತ್ತಾರೆ. ಅಷ್ಟೇ ಅಲ್ಲದೆ ಅವ ರೊಡನೆ ಒಂದು ಸಲ ಆದ ಪರಿಚಯು ಚಿರಕಾಲ ವೃದ್ಧಿಯಾಗುತ್ತಲೇ ಹೋಗು ತ್ತದೆ. ಎಲ್ಲರೂ ಇವರಿಗೆ ಸ್ವಲ್ಪ ಕಾಲದಲ್ಲೇ ಅಣ್ಣ ತಮ್ಮಂದಿರಂತೆ, ಅಕ್ಕತಂಗಿಯ ರಂತೆ ಹೊಂದಿಕೊಂಡುಬಿಡುತ್ತಾರೆ. ಚಿಂತಾಮಣಿ ಸ್ವಾಮಿಗಳ ಉಲ್ಲೇಖ ಈಗಾ ಗಲೇ ಬಂದುಹೋಗಿದೆ. ಅದೇ ರೀತಿಯಲ್ಲಿ ಅವರು ಶ್ರೀ ಭಂಡಾರಕೇರಿ ಮಠದ ಸ್ವಾಮಿಗಳು, ಶ್ರೀಮದುತ್ತರಾದಿ ಮಠದ (ಶ್ರೀ ಸತ್ಯಧ್ಯಾನತೀರ್ಥ ಶ್ರೀಪಾದಂ ಗಳು ಮಾತ್ರವಲ್ಲದೇ) ಈಗಿನ ಸ್ವಾಮಿಗಳೂ, ಶ್ರೀ ವ್ಯಾಸರಾಯಮಠದ ಹಿಂದಿನ ಶ್ರೀ ವಿದ್ಯಾಪ್ರಸನ್ನತೀರ್ಥರೂ,ಈಗಿನ ಸ್ವಾಮಿಗಳೂ, ಶ್ರೀ ಶ್ರೀಪಾದರಾಜಮಠದ ಹಿಂದಿನ ಸತ್ಯನಿಧಿತೀರ್ಥರಲ್ಲದೆ ಈಗಿನ ಸ್ವಾಮಿಗಳೂ, ರಾಯರ ಮಠದ ಶ್ರೀಪಾದಂಗಳವರು ಹೀಗೇ ಅನೇಕ ಮಾಧ್ವಮಠದ ಸ್ವಾಮಿಗಳೆಲ್ಲರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಅಷ್ಟೇ ಅಲ್ಲದೆ ಅವರು ಪ್ರಯಾಣ ಮಾಡಿದ ಮೈಸೂರು, ಬೆಂಗಳೂರು, ಮಂತ್ರಾಲಯು, ಹಂಪೆ, ಆನೆಗೊಂದಿ, ಕೂಡಲೀ, ಹೊಸಪೇಟೆ, ಧಾರವಾಡ, ಹುಬ್ಬಳ್ಳಿ, ಬೆಳಗಾಂ. ಗದಗ್, ಬೊಂಬಾಯಿ, ದೆಹಲಿ—ಹೀಗೆ ಎಲ್ಲ ಕಡೆಯೂ ಅವರಲ್ಲಿ ಪ್ರೀತ್ಯಾದರವುಳ್ಳ ಜನಗಳಿದ್ದು, ತೀರ್ಥರು ಎಲ್ಲಿದ್ದರೂ ಅವ ರೊಡನೆ ಪತ್ರವ್ಯವಹಾರ ಮಾಡುತ್ತಲೇ ಇರುತ್ತಾರೆ. ಇವರೂ ಅವರಿಗೆಲ್ಲಾ ಪ್ರತ್ಯುತ್ತರ ಬರೆಯುತ್ತಿರುವರಲ್ಲದೆ ಎಲ್ಲರಿಗೂ ಆಗಿಂದಾಗ್ಗೆ ನವವೃಂದಾವನದ ಆರಾಧನೆಯ ಮಂತ್ರಾಕ್ಷತೆ, ಪ್ರಸಾದಗಳನ್ನು ಕಳುಹಿಸುತ್ತಿರುತ್ತಾರೆ. ಎಷ್ಟೋ ಸಲ ಅವರು ಇತರರ ಕೋರಿಕೆಯ ಮೇಲೆ ಅವರ ಕಷ್ಟ ನಿವಾರಣೆಗಾಗಿ ಹವನ ಹೋಮ ಜಪಾದ್ಯನುಷ್ಠಾನಗಳನ್ನು ಮಾಡಿದ್ದೂ ಉಂಟು. ಹೀಗೆ ತೀರ್ಥರು ಸಂಸಾರಿಗಳಲ್ಲದಿದ್ದರೂ ಅವರ ಇಷ್ಟಮಿತ್ರಾದಿಪರಿವಾರ ಸೀಮಾತೀತವಾಗಿ ಬೆಳೆ ದಿದೆ. ಅವರ ಈ ಬಾಂಧವ್ಯದ ವರ್ಗ ಬಹು ದೊಡ್ಡದು ಮತ್ತು ಬಹಳ ವಿಶಾಲ ವಾದದ್ದು. ಇದನ್ನು ಅವರು ತಮ್ಮ ಸೌಜನ್ಯತೆ ಅಥವಾ ಸದ್ಗುಣಗಳ ಫಲವೆಂದು ತಿಳಿಯುವುದಕ್ಕೆ ಬದಲಾಗಿ ಶ್ರೀಹರಿವಾಯುಗುರುಗಳಲ್ಲಿ ಅವರು ಮಾಡುವ ಭಕ್ತಿ ಶ್ರದ್ಧಾದರಗಳೇ ಅವರುಗಳ ಅನುಗ್ರಹರೂಪವಾಗಿ ನಾನಾಮುಖದಿಂದ ಪ್ರೀತ್ಯಾ ದರಗಳಾಗಿ ಪ್ರತಿಬಿಂಬಿಸುತ್ತದೆ ಎಂದೇ ತಿಳಿದುಕೊಂಡಿದ್ದಾರೆ.

ಕೆಲವು ಆಯ್ದ ಪತ್ರಗಳಿಂದ ಉದ್ಧೃತವಾದ ಭಾಗಗಳು

ಮೇಲೆ ವಿವರಿಸಿರುವ ವಿಷ್ಣುತೀರ್ಥರ ಜನಪ್ರಿಯತೆಯನ್ನೂ ಅವರ ಚಟುವಟಿಕೆಗಳನ್ನೂ ದೃಢೀಕರಿಸುವ ಉದ್ದೇಶದಿಂದ ಅವರಿಗೆ ಇದುವರೆಗೆ ಬಂದಿರುವ ಸಹಸ್ರಾರು ಪತ್ರಗಳಿಂದ ಕೆಲವು ಆಯ್ದ ಭಾಗಗಳನ್ನು ಮಾತ್ರ ಇಲ್ಲಿ ಕೊಡುತ್ತೇವೆ.

(೧) ಕರ್ಣಾಟಕದ ಪ್ರಸಿದ್ಧ ಲೇಖಕರೂ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಗೌರವಕಾರ್ಯದರ್ಶಿಗಳೂ ಆಗಿದ್ದ ಶ್ರೀಮಾನ್ ಡಿ. ವಿ. ಗುಂಡಪ್ಪ, ಡಿ.ಲಿಟ್. ಅವರು ತಾ॥ ೧೮–೬–೧೯೭೫ರಲ್ಲಿ ಬರೆದ ಪತ್ರ ಹೀಗಿದೆ :—

"ಶ್ರೀಮಜ್ಜಗದ್ಗುರು ಶ್ರೀ ಕೂಡಲೀ ಶೃಂಗೇರಿ ಮಠದ ಮಹಾಸಂಸ್ಥಾನದ ಕಾರ್ಯದರ್ಶಿಗಳವರಾದ ಶ್ರೀ ವಿಷ್ಣುತೀರ್ಥರವರ ಸನ್ನಿಧಾನದಲ್ಲಿ ಸಾಷ್ಟಾಂಗ ನಮಸ್ಕಾರಪೂರ್ವಕ ವಿಜ್ಞಾಪನಾ . . . ನಾನು ಈಗ ಕೈಗೊಂಡಿರುವ ಪ್ರಯತ್ನದಲ್ಲಿ ತಮ್ಮ ಸಹಾಯ ತುಂಬಾ ಅಪೇಕ್ಷಣೀಯವಾಗಿರುತ್ತದೆ. ತಾವು ದಯಮಾಡಿ ಯಾವ ಸಹಾಯವನ್ನು ಎಷ್ಟುಮಾತ್ರ ಕೊಟ್ಟರೂ ಕೃತಜ್ಞನಾಗಿರುವೆನು. ನನಗೆ ಯಾವ ವಿಷಯದಲ್ಲಾದರೂ ಸಂದೇಹ ಬಂದಾಗ ಅದನ್ನು ಅರಿಕೆಮಾಡಿಕೊಳ್ಳುತ್ತೇನೆ. ನಾನು ತಮ್ಮಲ್ಲಿ ಹಾಗೆ ಸಹಾಯ ಬೇಡಬಹುದೆಂದು ಭರವಸೆ ಕೊಟ್ಟಿರುವುದಕ್ಕಾಗಿ ಅತ್ಯಂತ ಸಂತೋಷದಿಂದ ತಮ್ಮನ್ನು ವಂದಿಸುತ್ತೇನೆ."

—ಇಂತು ವಿಧೇಯ, ಡಿ. ವಿ. ಗುಂಡಪ್ಪ

(೨) ಕರ್ಣಾಟಕ ಐತಿಹಾಸಿಕ ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಹಾಗೂ ಮುಖ್ಯ ಸಂಪಾದಕರಾಗಿದ್ದ ಶ್ರೀ ಆರ್. ಎಸ್. ಪಂಚಮುಖಿ, ಎಂ. ಎ. ಇವರು ತಾ॥ ೨೭-೯-೧೯೭೨ರಲ್ಲಿ ಧಾರವಾಡದಿಂದ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ—

"ಶ್ರೀ ವಿಷ್ಣುತೀರ್ಥಾಚಾರ್ಯರಿಗೆ ಕೃತ . . . ನೀವು ವಿರಕ್ತರು. ಕೇವಲ ಗುರುಗಳ ಸೇವೆಯಲ್ಲಿ ನಿರತರು. ನಿಮಗೆ ಬಹಿರಂಗದಲ್ಲಿ ಸತ್ಕರಿಸುವುದಕ್ಕಿಂತ ಏಕಾಂತದಲ್ಲಿ ಗೌರವ ಮಾಡುವುದು ವಿಹಿತವೆನಿಸಿದ್ದರಿಂದ ಆ ಜನಸಮೂಹದಲ್ಲಿ ನಾವು ಈ ಪ್ರಸ್ತಾಪ ಮಾಡಲಿಲ್ಲ. ಈಗ ಶ್ರೀ ಪದ್ಮನಾಭತೀರ್ಥ ಮೊದಲಾದ ಯತಿಶ್ರೇಷ್ಠರಿಗೆ ನಿರ್ವ್ಯಾಜಸೇವೆ ಸಲ್ಲಿಸುತ್ತಿರುವ ನಿಮಗೆ ಈಗ ಒಂದು ಚೆಕ್ಕನ್ನು ಕಳಿಸಿದ್ದೇನೆ. ಇದು ಅನುಗ್ರಹರೂಪವಾಗಿದೆ. ಇದನ್ನು ಸ್ವೀಕರಿಸಿ ಗುರುಗಳಲ್ಲಿ ವಿಶ್ವಕ್ಷೇಮವನ್ನು ಕುರಿತು

ಪ್ರಾರ್ಥಿಸಬೇಕು . . . ನಮ್ಮ ಕುಟುಂಬದವರೂ ನಿಮ್ಮನ್ನೂ, ನಿಮ್ಮ ತಂಗಿ ಚಿ॥ ಸೌ॥ ಭಾರತೀಯವರನ್ನೂ ನೆನೆಸುತ್ತಾರೆ. ಮೇಲೆ ಪತ್ರ ಹಾಕ ಬೇಕು.

ಇತಿ, ಸವಿನಯ . . . ಪಂಚಮುಖಿ ರಾಘವೇಂದ್ರಾಚಾರ್ಯ."

(೩) ತಾ॥ ೩೦–೧–೧೯೮೭ರಲ್ಲಿ ರಾಮನಾಥಪುರದ ಪಂಡಿತ ಶ್ರೀ ಆರ್. ಎಸ್. ರಾಘವೇಂದ್ರಾಚಾರ್ಯರು ಬರೆದ ಒಂದು ಪತ್ರದ ಒಕ್ಕಣೆ ಹೀಗಿದೆ—

"ಶ್ರೀಮನ್ಮಧ್ವಶಾಸ್ತ್ರಾಂಬುಧಿಮಗ್ನ ದಿವ್ಯಚಿತ್ತವೃತ್ತಿಮಹಾಪ್ರಾಜ್ಞ ರಾದ ಹಾಗೂ ಅಭಿನವಪಾಣಿನಿ ಎಂದೆನಿಸಿಕೊಳ್ಳಲು ಅರ್ಹರಾದ ಪರಮ ಪೂಜ್ಯರಾದ ಶ್ರೀಮಾನ್ ವಿಷ್ಣುತೀರ್ಥವರ್ಯರಲ್ಲಿ ರಾಘವೇದ್ರಕೃತ ಸಾಷ್ಟಾಂಗ ಪ್ರಣಾಮಪೂರ್ವಕ ಅಭಿನಂದನಾಸೂಚಿತ ವಿಜ್ಞಾಪನೆಗಳು. ಉ॥ ಕು॥ ಸಾಂ॥ ಪ್ರಕೃತ ನಾನು ತಮ್ಮನ್ನು ಭೇಟಿ ಮಾಡಿ ತಾವು ಪ್ರಕಟ ಪಡಿಸಿರುವ ಗ್ರಂಥ 'ಶ್ರೀಹರಿವಾಯುಸ್ತುತಿ'ಯನ್ನು ಅವಲೋಕಿಸಲು ತಮ್ಮ ರಾಜಾಜಿನಗರದ ಮನೆಗೆ ಹೋಗಿದ್ದೆ. ನೀವು ಊರಲ್ಲಿರಲಿಲ್ಲವಾಗಿ ಆ ಪುಸ್ತಕದ ಪ್ರಕಟಣಕಾರರಾದ ಶ್ರೀಮಾನ್ ಶ್ರೀಶಮೂರ್ತಿಗಳ ಬಳಿಗೆ ಹೋದೆ. ಅವರು ದಯೆಮಾಡಿ ಆ ಪುಸ್ತಕದ ಒಂದು ಪ್ರತಿಯನ್ನು ಅವ ಲೋಕಿಸಿ ಹಿಂತಿರುಗಿಸಲು ದಯಪಾಲಿಸಿದರು. ನಾನು ನನ್ನ ಬುದ್ಧಿಗೆ ತಿಳಿಯುವ ಮಟ್ಟಿಗೆ ಸಿಂಹಾವಲೋಕನ ಮಾಡಿ ತೃಪ್ತಿಪಟ್ಟು ಈ ಪತ್ರ ವನ್ನು ವಂದನಾಪೂರ್ವಕವಾಗಿ ಮುಟ್ಟಿಸುತ್ತಿರುವೆನು. ನಿಮ್ಮ ಹಿರಿಯರು ನಿಮಗೆ ನಾಮಕರಣ ಮಾಡಿದುದರ ಸಾರ್ಥಕತೆಯನ್ನು ಹೊಂದಿಸುವುದ ಕ್ಕಾಗಿಯೇ ಈ ಗ್ರಂಥದಲ್ಲಿ ವಿಷ್ಣುನಾಮದ ವಿಶಾಲ, ವ್ಯಾಪ್ತವಾದ ಅರ್ಥ ವನ್ನು ನಮ್ಮಂತಹವರಿಗೆ ಸೂಚಿಸಿ ಉದ್ಧಾರ ಮಾಡಲೆಂದೇ ನಾಮಕರಣ ಮಾಡಲು ಕಾರಣವೆಂದು ನಾನು ಭಾವಿಸಿರುವೆನು . . ,

ವಿಷ್ಣುತೀರ್ಥ ಮಹಾತ್ಮಾಗೀ ವಾಯುಸ್ತುತಿವಿಮರ್ಶಕಃ ।
ಪ್ರಹ್ಲಾದಾಗ್ರಜಮಹಾತ್ಮ ಜಯತಿ ಭುವನತ್ರಯೇ ॥''

ಶುಭಂ ಭವತು, ಇತಿ ನಮಸ್ಕಾರಗಳು, ಆರ್. ಎಸ್. ರಾಘವೇಂದ್ರಾಚಾರ್

(೪) ದಿ॥ ೧೨–೪–೧೯೯೦ರಂದು ಹುಬ್ಬಳ್ಳಿಯಿಂದ ಪ್ರಹ್ಲಾದ ಚಾಕಲಬ್ಬಿ ಎಂಬುವರು ವಿಷ್ಣುತೀರ್ಥರಿಗೆ ಹೀಗೆ ಬರೆದಿದ್ದಾರೆ—

"ಶ್ರೀ ರಾಘವೇಂದ್ರಾಯ ನಮಃ. ಶ್ರೀ ರಾಜಮಾನ್ಯ ರಾಜಶ್ರೀ ವೇದ,ಮೂರ್ತಿ ಗುರುವರ್ಯ ವಿಷ್ಣುತೀರ್ಥ ಇವರ ಚರಣಸನ್ನಿಧಿಗೆ ತಮ್ಮ ಪ್ರಹ್ಲಾದನು ಮಾಡುವ ಕಳಕಳಿಯ ನಮಸ್ಕಾರಗಳು. ನಿಮ್ಮ ಕುಶಲಪತ್ರ ಓದಿ ಆನಂದಬಾಷ್ಪಗಳು ಉದುರಿದುವು. ನನ್ನ ಭಾಗ್ಯದ ಬಾಗಿಲು ತೆರೆಯಿತು ಎಂದು ಭಾಸವಾಗಿದೆ. ನೀವು ಕೊಟ್ಟ ದಿನಾಂಕದ ಪ್ರಕಾರ ಹದಿನಾರನೆಯ ತಾರೀಖಿನ ದಿವಸ ಹೊಸಪೇಟೆಗೆ ನನ್ನ ಚಿ॥ ಮಗನನ್ನು ಕಳಿಸುವೆ. ಅವನ ಜೊತೆಯಲ್ಲಿ ನೀವು ಬರ್ರಿ. ಬಂದಬಳಿಕ ಸವಿಸ್ತಾರ ತಿಳಿಯುವುದು. ಬರುವಿಕೆ ದಾರಿ ಕಾಯುವ."

—ಪ್ರಹ್ಲಾದ, ಮುಳುಗುಂದ"

(೫) ತಾರೀಖು ೩–೭–೧೯೬೦ರಂದು ಮೈಸೂರಿನಿಂದ ವಿಷ್ಣುತೀರ್ಥರ ಭಾವಂದಿರೂ, ಪ್ರಸಿದ್ಧ ಕಲಾವಿದರೂ ಆದ ಶ್ರೀ ರಘೂತ್ತಮ ಪುಟ್ಟಿಯವರು ತಮ್ಮ ಪತ್ರದಲ್ಲಿ ಹೀಗೆ ಬರೆದಿದ್ದಾರೆ—

"Your kind inland letter to hand. I have preserved it carefully for going through it again and again. Such are the contents of the letter . . . With deep regards. Yours affectionately, R. R. Putty"

(೬) ತಾ॥ ೩೧–೧೨–೧೯೬೦ರಂದು ಬೊಂಬಾಯಿಯ ಕುರ್ಲಾದಲ್ಲಿರುವ ತೀರ್ಥರ ಸಂಬಂಧಿಗಳಾದ ಶ್ರೀ ಎಸ್. ಆರ್. ಶೇಷಗಿರಿರಾವ್ ದಂಪತಿಗಳು ಹೀಗೆ ಬರೆದಿದ್ದಾರೆ—

"ಶ್ರೀ ಪೂಜ್ಯ ವಿಷ್ಣುತೀರ್ಥರ ಚರಣಾರವಿಂದಗಳಿಗೆ ಶೇಷಣ್ಣ ಮತ್ತು ಇಂದಿರಮ್ಮ ಮಾಡುವ ಸಾಷ್ಟಾಂಗ ನಮಸ್ಕಾರಗಳು . . . ಜನ್ಮ ಜನ್ಮಗಳಲ್ಲೂ ಹರಿವಾಯುಗುರುಗಳ ಸೇವೆ ಸಿಗಲಿ ; ಆದೇ ನಮ್ಮ ದೊಡ್ಡ ಐಶ್ವರ್ಯ. ಇದು ನಿಮ್ಮ ಆಶೀರ್ವಾದದಿಂದ ಆಗುತ್ತಿದೆ. ನೀವು ಒಳ್ಳೆ ಸನ್ಮಾರ್ಗದ ಹಾದಿಯನ್ನು ಶ್ರೀ ರಾಘವೇಂದ್ರಮೂರ್ತಿಗಳ ಸಂಸಾರಕ್ಕೆ ಹಾಕಿದಿರಿ ಅದೇ ನಮ್ಮ ಸಂಸಾರವನ್ನು ಕಾಪಾಡುತ್ತಿರುವುದು. ನಿಮಗೆ ನಮ್ಮ ಸಂಸಾರದವರೆಲ್ಲಾ ಚಿರಋಣಿಯಾಗಿರುತ್ತೇವೆ."

(೭) ಈ ಹೊತ್ತಿಗೆಯ ಆದಿಭಾಗದಲ್ಲಿ ಹೆಸರಿಸಿರುವ ತೀರ್ಥರ ತಾತಂದಿರಾದ ಅಮಲ್ದಾರ್ ವೆಂಕಟರಮಣಯ್ಯನವರ ಹಿರಿಯ ಸೊಸೆ ಹಾಗೂ ತೀರ್ಥರ

ಚಿಕ್ಕಮ್ಮ ಆದ ಶ್ರೀಮತಿ ಶೃಂಗಾರಮ್ಮ (ಈಗ ಸುಮಾರು ೯೯ ವರ್ಷ ವಯಸ್ಸಿನವರು) ಅಮೆರಿಕಾ ಸಂಯುಕ್ತಸಂಸ್ಥಾನಗಳಲ್ಲಿ ನೆಲೆಸಿರುವ ತಮ್ಮ ಕಿರಿಯ ಮಗಳು ಡಾ॥ ಜಯಲಕ್ಷ್ಮಿ ಮತ್ತು ಅಳಿಯಂದಿರಾದ ಡಾ॥ ಸಂಪತ್‌ರೊಡನೆ ಫಿಲಿಡೆಲ್ಫಿಯಾದಲ್ಲಿ ವಾಸಿಸುತ್ತಿದ್ದಾಗ ಅವರು ತೀರ್ಥರಿಗೆ ಬರೆದ ಪತ್ರಗಳಿಂದ ಆಯ್ದ ಒಂದೆರಡು ಭಾಗಗಳನ್ನು ಇಲ್ಲಿ ಕೊಡುವುದು ಸೂಕ್ತವೆನಿಸುತ್ತದೆ.

(a) ತಾ॥ ೧೩–೮–೧೯೮೩ರ ಪತ್ರದಲ್ಲಿ ಡಾ॥ ಜಯಲಕ್ಷ್ಮಿಯವರು ಹೀಗೆ ಬರೆದಿದ್ದಾರೆ—

"ಪ್ರೀತಿಯ ಅಣ್ಣನಿಗೆ ನಮಸ್ಕಾರಗಳು. ನಿಮ್ಮ ಕಾಗದ ನೋಡಿ ನಮ್ಮ ತಾಯಿಗೂ, ನನಗೂ, ನಮ್ಮ ಯಜಮಾನರಿಗೂ—ಎಲ್ಲರಿಗೂ ಬಹಳ ಸಂತೋಷವಾಯಿತು. ನಿಮ್ಮನ್ನು ಎಂದೂ ನೋಡಿಲ್ಲದಿದ್ದರೂ, ತಾಯಿಯವರಿಂದ ನಿಮ್ಮ ಬಗ್ಗೆ ಬಹಳ ಕೇಳಿದ್ದೇವೆ. ತಾಯಿಯವರಿಗೆ ನೀವೆಂದರೆ ತುಂಬಾ ಪ್ರೀತಿ, ಹೆಮ್ಮೆ, ಗೌರವ–ನಿಮ್ಮನ್ನು ಕಣ್ಣಾರೆ ನೋಡಿದರೆ ಪಾಪ ಪರಿಹಾರ ಎಂದು ಹೇಳುತ್ತಿರುತ್ತಾರೆ. ತಾಯಿಯವರ ಮನಸ್ಸಿಗೆ ಸಮಾಧಾನವಾಗುವಂತೆ ನೀವು ಹೇಳಿರುವ ಮಾತೆಲ್ಲವೂ ಸತ್ಯ ಎಂದು ನನ್ನ ಅಂತರಾತ್ಮವೂ ಹೇಳುತ್ತಿದೆ. ನಿಮ್ಮ ಅಭಿಪ್ರಾಯ ಓದಿದ ಮೇಲೆ ತಾಯಿಯವರಿಗೆ ಮತ್ತು ನಮಗೆ ಎಷ್ಟೋ ಸಮಾಧಾನವಾಯಿತು."

(b) ತಾ॥ ೫–೧೨–೧೯೮೩ರ ಪತ್ರದಲ್ಲಿ ವಿಷ್ಣುತೀರ್ಥರಿಗೆ ಉಪರ್ಯುಕ್ತ ಶ್ರೀಮತಿ ಶೃಂಗಾರಮ್ಮನವರು ಹೀಗೆ ಬರೆದಿದ್ದಾರೆ—

"ಚಿ॥ ವಿಷ್ಣುತೀರ್ಥನಿಗೆ ಆಶೀರ್ವಾದಗಳು. ನಿನ್ನ ವಿಷಯವೆಲ್ಲಾ ಕೇಳಿ ನಿನ್ನಲ್ಲಿ ನನಗೆ ಗುರುಭಾವನೆ ಬರುತ್ತಿದೆ . . . ಈ ಸಮಯದಲ್ಲಿ ಅಮೆರಿಕಾದಲ್ಲಿರುವುದು ಸರಿಯಲ್ಲವೆಂದು ಅಲ್ಲಿಗೆ (ಭಾರತಕ್ಕೆ) ಹೋಗುತ್ತೇನೆ. ಆಗ ನಿನ್ನನ್ನು ನೋಡುವ ಸದಾವಕಾಶ ದೊರಕುವುದು ನನ್ನ ಪುಣ್ಯ."

(೮) ಇದರಂತೆಯೇ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ಪಿಟ್ಸ್‌ಬರ್ಗ್‌ನಿಂದ ತಾ॥ ೧೨–೮–೧೯೭೧ರಲ್ಲಿ ಶ್ರೀಮತಿ ರಮಾವಿಠಲ್‌ರವರಿಂದ ಬಂದ ಪತ್ರ ಇಂತಿದೆ—

"ನಿಮ್ಮ ಕಾಗದ ತಲುಪಿ ಬಹಳವೇ ದಿನಗಳಾದುವು . . . 'ಉತ್ತರ ಕಾಂಡ'ದ ಪ್ರತಿ ಕೈಸೇರಿ ಬಹಳ ಸಂತೋಷವಾಯಿತು . . . ಪುಸ್ತಕವನ್ನು

ಚಿಕ್ಕಮ್ಮ ಶೃಂಗಾರಮ್ಮನವರು

ಇಷ್ಟರವುಟ್ಟಿಗೆ ಅಭಿಮಾನವಿಟ್ಟು ಕಷ್ಟಪಟ್ಟು ಇಷ್ಟು ದೂರ ಕಳುಹಿಸಿ ದಕ್ಕೆ ಪುನಃ ವಂದನೆಗಳು."

(೬) ಬೊಂಬಾಯಿಯ ದಾದರ್‌ನಲ್ಲಿರುವ ಪ್ರಸಿದ್ಧ ಬ್ಯಾಂಕ್ ನಿರ್ವಾಹಕರಾದ ಶ್ರೀ ಕೆ. ವಿ. ಉಪಾಧ್ಯೆಯವರು ವಿಷ್ಣುತೀರ್ಥರಿಗೆ ಬರೆದ ಪತ್ರಗಳ ಒಕ್ಕಣೆ :

(a) ತಾ|| ೧೩-೪-೧೯೮೪ರಲ್ಲಿ ಬರೆದ ಪತ್ರದಲ್ಲಿ, ಹೀಗೆ ಬರೆದಿದ್ದಾರೆ—

"I have not seen another devotee of your type. I always remember the words of ಪೂಜ್ಯ ಬಾಳಾಚಾರ್ಯ saying 'ಗುರುಗಳು ಶ್ರೀ ವಿಷ್ಣುತೀರ್ಥರಿಗೆ ಪ್ರತ್ಯಕ್ಷ ಭೆಟ್ಟಿ ಕೊಡುವರು' ... I am thrilled with joy to observe that the holy saints are keen to receive 'seva' at your hands so sincerely and devotedly rendered ; and such service is not possible for any other present human beings—a super sacrifice for the devoted service. It is my fortune to see such a pure and devoted soul in my life, though many are there with same ideals, but (they) hesitate to walk tirelessly in that devoted direction ; to render and perform conscientious 'seva' leading a hard life, with only the sky as overhead cover. You can count upon me for any service on my part."

(b) ತಾ|| ೪-೧-೧೯೬೧ರಂದು ಉಪರ್ಯುಕ್ತ ಶ್ರೀ ಕೆ. ವಿ. ಉಪಾಧ್ಯೆಯವರು ಹೀಗೆ ಬರೆದಿದ್ದಾರೆ—

"ಶ್ರೀಮಾನ್ ವಿಷ್ಣುತೀರ್ಥರಿಗೆ ಸನ್ಮಾನಪೂರ್ವಕ ವಂದನೆಗಳು. ಚಿ|| ನರಸು ಮೊನ್ನೆ ನಮ್ಮ ಮನೆಗೆ ಬಂದು ತಾವು ಆಕೆಗೆ ಬರೆದ ಪತ್ರವನ್ನು, ತಾವು ಅಭಿಮಾನಪೂರ್ವಕವೇ ಅದನ್ನು ನನಗೂ ತೋರಿಸಲು ಹೇಳಿದ್ದರಿಂದ, ತೋರಿಸಿದಳು. ಅದನ್ನು ಓದಿ ನನ್ನ ಸಂತೋಷವು ಉಕ್ಕೇರಿ ಬಂದಿತು. ನಿಮಗೆ ಬಿದ್ದ ಸ್ವಪ್ನದಲ್ಲಿ ಶ್ರೀ ಉತ್ತರಾದಿಮಠದ ಸ್ವಾಮಿಗಳು ಕಾಣಿಸಿಕೊಂಡು, 'ತಾವು ಮಾಡಿದ ಸಾಹಸ ಮತ್ತು ಮಾಡುತ್ತಿರುವ ಸಹಾಯ ಬೇರೆ ಯಾರಿಗೂ ಮಾಡಲು ಶಕ್ಯವಿಲ್ಲ. ನಿಮಗೆ ಏನು ಕೊಟ್ಟರೂ ಸಾಲದು' ಎಂದು ಹೇಳಿದ್ದರಲ್ಲಿ ಎಷ್ಟು ಶುಭಸೂಚಕ ಅರ್ಥ ಅಂಟಿ

ಕೊಂಡಿದೆ ! ತಾವು ವಾಯುಸ್ತುತಿಯ ಮೇಲೆ ಬರೆದ ಪುಸ್ತಕಗಳನ್ನು ನೋಡಿ ಇಲ್ಲಿಯ ಶ್ರೀ ಸತ್ಯಧ್ಯಾನ ವಿದ್ಯಾಪೀಠದ ಕುಲಗುರು ಶ್ರೀ ವಿದ್ಯಾಸಿಂಹಾಚಾರ್ಯರು ಹೀಗೆಯೇ ಹರ್ಷೋದ್ಗಾರ ವ್ಯಕ್ತಪಡಿಸಿದರು . . . ಕಲೆ, ವಿದ್ವತ್ತು, ನೈಪುಣ್ಯ ಬೆಳೆಯಬೇಕಾದರೆ ನೆಮ್ಮದಿ ಬೇಕು. ತಮ್ಮಲ್ಲಿ ನಿಸ್ವಾರ್ಥತೆ, ಔದಾರ್ಯ, ಹೃದಯವೈಶಾಲ್ಯ, ದಯಾ–ದಾಕ್ಷಿಣ್ಯ, ಧರ್ಮಶ್ರದ್ಧೆ. ನ್ಯಾಯಪಕ್ಷಪಾತ, ಸರಳಸ್ವಭಾವ ಇವೆಲ್ಲಾ ಸ್ವಾಭಾವಿಕವಾಗಿಯೇ ಬಂದಿವೆ. **What pleases God or deity is virtue and sincerity, and not any number of material offers. Self-help is the best help.** ಇದನ್ನು ತಮ್ಮಿಂದಲೇ ಕಲಿಯಬೇಕು **With regards, Yours sincerely—K. V. Upadhdye."**

(೧೦) ದಿನಾಂಕ ೨೧–೧೦–೧೯೮೭ರಂದು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹಿಂದೀ ಪ್ರಾಧ್ಯಾಪಕರಾಗಿ (ನಿವೃತ್ತರಾದ) ಡಾ|| ಎಂ.ಕೆ. ಭಾರತೀರಮಣಾಚಾರ್ಯ, ಎಂ. ಎ., ಪಿಹೆಚ್. ಡಿ. ಅವರು ಉಡುಪಿಯಿಂದ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ—

"ನಿನ್ನೆ ಬೆಳಿಗ್ಗೆ ೮–೧೫ಕ್ಕೆ ಸುಧಾ ಪಾಠ ಮುಗಿದಮೇಲೆ ಮಧ್ವಶಾಸ್ತ್ರಸಂಪನ್ನ ಶ್ರೀ ಪ್ರಭಂಜನಾಚಾರ್ಯರವರು ಶ್ರೀ ಶ್ರೀ ೧೦೮ ಪರ್ಯಾಯಪೀಠಸ್ಥ ಭಂಡಾರಕೇರಿ ಮತ್ತು ಫಲಿಮಾರುಮಠದ ಶ್ರೀಪಾದಂಗಳವರಿಗೆ ನಿಮ್ಮ (ಸಂಸ್ಕೃತ) ಪತ್ರದೊಂದಿಗೆ "ನಖಸ್ತುತಿ"ಯನ್ನು ಸಮರ್ಪಿಸಿದರು. ನನಗೆ ಕಳಿಸಿದ ಪ್ರತಿಯೂ ತಲುಪಿತು. ಆಗ ಸ್ವಾಮಿಗಳಿಗೆ ನಿಮ್ಮ ಕಿಂಚಿತ್ ಪರಿಚಯ ಮಾಡಿಕೊಡುವ ಸೌಭಾಗ್ಯ ನನ್ನ ಪಾಲಿಗೆ ಬಂತಲ್ಲ ಎಂದು ಸಂತೋಷಪಟ್ಟೆ.... ನಿಮ್ಮ ಪುಸ್ತಕವನ್ನು ಇನ್ನೂ ಪೂರ್ತಿ ಓಧಿಲ್ಲ. ವಿಷಯವೇನಿರಬಹುದೆಂದು ಅಲ್ಲಲ್ಲಿ ನೋಡಿದೆ. ಶ್ರೀಮದಾಚಾರ್ಯರ ಒಂದೊಂದು ಮಾತೂ ಎಷ್ಟು ಗಂಭೀರವಾದುದು ಎಂಬುದನ್ನು ತೋರಿಸಲು ಯತ್ನಶೀಲರಾಗಿರುವಿರೆಂದು ತೋರಿತು. ಅದನ್ನು ಓದುವ ಕುತೂಹಲವಿದೆ. ಬಿಡುವು ಮಾಡಿಕೊಂಡು ಓದುತ್ತೇನೆ."

(೧೧) ತಾ|| ೨೯–೭–೧೯೮೭ರಂದು ಗಣ್ಯವಿದ್ಯಾಪಾರಂಗತರಾದ ಪ್ರೊ|| ಎಸ್. ಕೆ. ರಾಮಚಂದ್ರರಾಯರು ಬರೆದ ಪತ್ರ ಹೀಗಿದೆ—

"ಸನ್ಮಾನ್ಯ ಶ್ರೀ ವಿಷ್ಣುತೀರ್ಥ ಅವರಲ್ಲಿ ಸಾದರ ವಿಜ್ಞಪ್ತಿ. ತಮ್ಮ ಪತ್ರ ತಲುಪಿತು. ಪಂಪಾಮಹಾತ್ಮ್ಯೆಯ **xerox** ಪ್ರತಿಯನ್ನು ಓದಿ

ಮುಗಿಸಿದ್ದೇನೆ. ....ಓದುವ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ಕೃತಜ್ಞನಾಗಿದ್ದೇನೆ. ತುಂಬಾ ಸ್ವಾರಸ್ಯವಾದ ಗ್ರಂಥ. ನಿಮ್ಮ 'ಹರಿವಾಯುಸ್ತುತಿ'ಯ ವಿಮರ್ಶೆಯನ್ನು ಪ್ರಜಾವಾಣಿ, ಸುಧಾ ಪತ್ರಿಕೆಗಳಿಗೆ ಕಳುಹಿಸಿದ್ದೇನೆ. 'ಕೂಡಲಿಮಠದ ಇತಿಹಾಸ'ದ ಬಗ್ಗೆ ನನ್ನ ಅಭಿಪ್ರಾಯವನ್ನು ಈಗಾಗಲೆ ತಮಗೆ ಅಂಚೆಯ ಮೂಲಕ ಕಳುಹಿಸಿದ್ದೇನೆ .... ಆದರೆ ವಿಮರ್ಶೆಯ ಇಂಗ್ಲಿಷ್ ಅನುವಾದವನ್ನು ಬೇಕಿದ್ದರೆ ನಾನೇ ಮಾಡಿ ಕಳುಹಿಸುತ್ತೇನೆ. ಇಂಥಾ ಪುಸ್ತಕಗಳು · ಇಂಗ್ಲೀಷಿನಲ್ಲಿ ಬರಬೇಕಾದ ಅಗತ್ಯವಿದೆ. ತಾವು ತುಂಬಾ ಶ್ರಮವಹಿಸಿದ್ದೀರಿ. ತಮ್ಮ ಪತ್ರಕ್ಕೆ ಪತ್ರ ಬರೆಯಲು ತಡವಾಯಿತು, ಮನ್ನಿಸಬೇಕು. ಇಂತು ತಮ್ಮವ—ಎಸ್. ಕೆ. ರಾಮಚಂದ್ರ ರಾವ್."

(೧೨) ಇತ್ತೀಚೆಗೆ ಕೆಲವು ವರ್ಷಗಳಿಂದ ತೀರ್ಥರ ಆಪ್ತಮಿತ್ರರೂ, ನಿಕಟವರ್ತಿಗಳೂ ಆದ ಬೊಂಬಾಯಿ (ಠಾಣೆ) ಯಲ್ಲಿರುವ ಶ್ರೀ ಪ್ರಭಂಜನ ಕುಲಕರ್ಣಿಯವರು ಬರೆದ ಮೂರು ಕಾಗದಗಳ ಆಯ್ದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ. ಅವುಗಳು ತೀರ್ಥರ ಬಗ್ಗೆ ಅವರು ಹೊಂದಿರುವ ಅನನ್ಯ ಪ್ರೇಮ, ಮೆಚ್ಚುಗೆ ಹಾಗೂ ಭಕ್ತಿಭಾವಗಳನ್ನು ಪ್ರಕಟಿಸುತ್ತವೆ.

(a) ತಾ॥ ೨೧-೪-೧೯೮೮ ರಲ್ಲಿ ಕುಲಕರ್ಣಿಯವರಿಗೆ ವಿಷ್ಣುತೀರ್ಥ ಯಾವುದೋ ಒಂದು ಗಹನವಾದ ಸಣ್ಣ ವಿಷಯವನ್ನು ಸಮರ್ಥಿಸುತ್ತಾ ಬರೆದ ಹದಿನಾಲ್ಕು ಪುಟಗಳ ಪತ್ರಕ್ಕೆ ಉತ್ತರರೂಪವಾಗಿ ಹೀಗೆ ಬರೆದಿದ್ದಾರೆ—

"With all the authorities quoted by you, and with the very lucid explanation provided, and with the excellent logical reasoning and argument, I am (once again) convinced that it is not only those nine *gurus* at Navavrindavan but the other *gurus* also have favoured you with a thorough mastery over the Bhashyas and Commentaries, and it is through their grace alone that you have been able to author the treatise on *Sri Harivayustuthi* in an unprecedentally comprehensive and exhaustive manner."

(b) ತಾ॥ ೧೩-೩-೧೯೯೦ರಲ್ಲಿ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ—

"Your visits to Mantralayam, Navavrindavan,

Hospet (Chintamani Mutt) and activities like Panchamrithabhishekas to nava-vrindavanas, Sri Sathyanarayana pujas, Srimad Bhagavatha Saptahas, etc. make very interesting reading. I get thrilled as I read your letters; and the reading of your writings *(Nakhastuthi, Sri Harivayustuthi* and *Devapuja*, etc.) is simply a treat . . . " "The books are worth much more than their weight in gold ; and every Madhwa must possess a set of them for his serious study and adoration."

(c) ತಾ|| ೫-೧೨-೧೯೯೦ರಲ್ಲಿ ಬರೆದ ಪತ್ರದಲ್ಲಿ ಹೀಗಿದೆ :

"Every time I remember my company and conversation with you, it gives me a spiritual tonic . . . I believe that they (the nine *Yathis* of Navavrindavana) alone kept me in your arms to be benefited by your talk, advice, writings and *darshan*. To remember you is heart-warming, and to read you is to pave the path to the most coveted, rarely attempted and barely-achieved final beatitude . . . It is with this understanding and firm conviction of your worthiness, and wtih all genuine feelings for your study, services, austerities, sacrifice, discipline, devotion, dutifulness, selflessness, simplicity and compassion for the poor like me that I fall at your feet saying, 'Samudhara Guro Mam Magnaroopam Sada.'

(೧೩) ತಾ|| ೨೫-೯-೧೯೯೦ರಂದು ವಿಷ್ಣುತೀರ್ಥರ ಆಪ್ತ ಮಿತ್ರರೂ ಹಾಗೂ ಕರ್ನಾಟಕ ಸರ್ಕಾರದಲ್ಲಿ Financial Assistant to the Director of Health and Family Plannnig ಆಗಿದ್ದ ಶ್ರೀಯುತ ಗುರುರಾಜ ಬಾಡ ಗುಂಡಿಯುರು ಗೋಕಾಕಿನಿಂದ ವಿಷ್ಣುತೀರ್ಥರಿಗೆ ಬರೆದ ಪತ್ರದಲ್ಲಿ ಕೆಲವು ಅಂಶ ಗಳ ಒಕ್ಕಣೆ ಹೀಗಿದೆ—

"ತಾವು ಇಲ್ಲಿ ಒಂದು ೮-೧೦ ದಿವಸ ನಮ್ಮೊಡನೆ ಇದ್ದುದರಿಂದ ನಮಗೆಲ್ಲ ತುಂಬ ಲಾಭವಾಯಿತು. ೮-೧೦ ದಿವಸ ಹೇಗೆ ಕಳೆದೆವೋ ತಿಳಿ

ಯಲೇ ಇಲ್ಲ. ಮಳೆಗಾಲದ ಜಡಿಮಳೆಯಿಂದ ಪಾಪ ನಿಮಗೆ ತುಂಬಾ ತೊಂದರೆಯಾಯಿತು. ಆದರೂ ಅದನ್ನು ಲೆಕ್ಕಿಸದೆ ಬೆಂಗಳೂರಿಂದ ಇಲ್ಲಿಯು ವರೆಗೆ ಬಂದು ನಮ್ಮನ್ನು ಅನುಗ್ರಹಿಸಿದ್ದೀರಿ. ಅದಕ್ಕೆ ನಾವೆಲ್ಲರೂ ತುಂಬಾ ಕೃತಜ್ಞರು.......ಎಲ್ಲಾ ನಮ್ಮ ಕುಲದೇವರಾದ ಶ್ರೀನಿವಾಸದೇವರ ಅನು ಗ್ರಹವೇ. ಅಲ್ಲದೆ ತಮ್ಮಂಥ ಮಹಾಪುರುಷರ ಆಶೀರ್ವಾದದ ಫಲದಿಂದ ಈ ಶುಭಸಮಾಚಾರ ಬಂದಿತು.......ತಮ್ಮ ಪಾದಸೇವಕ—ಗುರುರಾಜ ಬಾಡಗಂಡಿ."

(೧೪) ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಶರೀರರಚನಾ ಶಾಸ್ತ್ರದ ಪ್ರಾಧ್ಯಾಪಕರೂ, ಆ ವಿಭಾಗದ ಮುಖ್ಯಸ್ಥರೂ ಆದ ಪ್ರೊ|| ಆರ್. ಆರ್. ಬಾಡಗಂಡಿ, ಎಂ.ಬಿ.ಬಿ.ಎಸ್., ಎಂ.ಎಸ್.ರವರು ಬರೆದ ತಾ|| ೭-೧೨-೧೯೮೦ರ ಪತ್ರ ಹೀಗಿದೆ:

"ನೀವು ಕಳಿಸಿದ ಆರಾಧನಾ ಪ್ರಸಾದ ಮಂತ್ರಾಕ್ಷತೆಗಳು ತಲುಪಿ ದವು. ಧನ್ಯವಾದಗಳು. ನಿಮ್ಮ ಆರೋಗ್ಯ ಹೇಗಿದೆ ? ಈ ವಯಸ್ಸಿ ನಲ್ಲಿಯೂ ತಾವು ಪ್ರವಾಸ ಮಾಡುವುದು ನೋಡಿದರೆ ಆಶ್ಚರ್ಯವಾಗು ತ್ತದೆ. ನಿಮ್ಮ 'ವಾಯುಸ್ತುತಿ' ಭಾಗಗಳ ಅಧ್ಯಯನ ಮಾಡುತ್ತಿದ್ದೇನೆ. ಓದುವಾಗ ತುಂಬಾ ಸಮಾಧಾನವಾಗುತ್ತದೆ. ಎಲ್ಲಾ ವಿವರಣೆಗಳೂ ಸ್ಪಷ್ಟ ವಾಗಿ ಬಂದಿವೆ....... ನಿಮ್ಮ ಮುಂದಿನ ಕೃತಿ ಯಾವುದು ? ಸದ್ಯಕ್ಕೆ ಲೇಖನ ನಡೆದಿರಬಹುದು. ಈ ಕಡೆ ಬಂದಾಗ ನಮ್ಮಲ್ಲಿ ಬಂದು ಹೋಗ ಬೇಕಾಗಿ ಪ್ರಾರ್ಥನೆ. ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಿಮ್ಮ ಆತ್ಮೀಯ—ಡಾ ರಾಧಾಮೋಹನ ಬಾಡಗಂಡಿ."

(೧೫) ಶ್ರೀ ಆಸೀಮ್ ಕೃಷ್ಣದಾಸ್ ಉತ್ತರಪ್ರದೇಶದ ವೃಂದಾವನದಿಂದ ತೀರ್ಥರಿಗೆ ಬರೆದ ಪತ್ರಗಳ ಒಕ್ಕಣೆ :

(a) ೧೯೮೦ರ ಆಗಸ್ಟ್ ೧೭ನೇ ತಾರೀಖು ಬರೆದ ಪತ್ರ :

"Respected Swamiji, I have received your letter of 2nd August and am very pleased to learn that the typing of the Telugu tex t (of *Pampamahatmya*) is about to get started. I am also pleased to learn that you are anxious to get on with the edition of Sanskrit Text of the *Pampa Mahatmyam*. As for the English version I shall

be responsible for that . . . When I am in Hampi again this winter I may have some particular questions for you, that we may discuss together, in order that the translation may be accurate . . . I have finally located the photo that you were anxious to have, of the two of us together standing in front of the Radharamana temple. It is, however, on a slide (transparency) . . . on the same roll are further photos of Sri Sripadaraja Mutt Swamiji and his kind visit here while you were living near Radharamana temple . . . That particular slide film is impossible to process in India, at least from Delhi : so I have to wait for some one to take it abroad and return it . . . With very best regards to you and your family, I remain, Yours truly—Asim Krishna Das"

(b) ತಾ|| ೧೦–೧–೧೯೯೧ರಂದು ಹಂಪೆಯಿಂದ ಶ್ರೀ ಅಸೀಮ್ ಕೃಷ್ಣ ದಾಸ್ ಹೀಗೆ ಬರೆದಿದ್ದಾರೆ—

"Respected Vishnuthirthaji, I trust this will find you well . . . When I returned to Hampi from Rameswaram . . . I found an urgent telegram from my parents. (As my mother is ill with cancer) I will have to travel to the U.S.A. after some (short) time, and I hope that I may be able to take the completed Sanskrit manuscript with me, so that I may go on with the translation. Therefore, I request you to try to get on with the work as quickly as is feasible . . . I look forward to seeing you shortly, and hope that we will be able to take care of the remaining technicalities of completing the Sanskrit manuscript so that the *Pampa Mahatmyam* may soon be in a condition for publication. The publication is to be undertaken by the Vijayanagar Research Product as part of their mono-

graph series. That will ensure that it has proper world wide distribution, and, therefore our service to Sri Pampaa and Pampaapati may be maximised.

Closing with best regards and hopes that 1991 may be a happy and healthy year, I remain, Yours truly—Asim Krishna Das."

(೧೬) ತಾ॥ ೧೫–೭–೧೯೮೮ರಂದು ಬೊಂಬಾಯಿಯ ಸೋಫಿಯಾ ಕಾಲೇಜಿನ ಇತಿಹಾಸದ ಪ್ರಾಧ್ಯಾಪಕರಾದ ಸಿಸ್ಟರ್ ಅನಿಲಾ ವರ್ಗೀಸ್, ಪಿಹೆಚ್. ಡಿ. ಇವರು ವಿಷ್ಣುತೀರ್ಥರ ತಮ್ಮಂದಿರಾದ ಪಿ. ಪ್ರಹ್ಲಾದರಾವ್‌ಗೆ ಹೀಗೆ ಬರೆದಿದ್ದಾರೆ.

"Thank you for your letter dated 2nd July and for the typescript of Sri Vishnu Thirtha's *Concise History of the Kudali Matha* which arrived here safely a few days ago . . . I have read the typescript and found it very interesting. Of course, since my area of research is on Vijayanagara religious history prior to 1565 A.D. the history of the Kudali Matha does not come directly under my area of study. However, it was interesting to see the links between the Sringeri and the Kudali mathas and the present link between the Kudali matha and the Chinthamani matha of Anegondi, since the present guru of the former was formerly the head of the latter ... Please convey my thanks to Sri P. Vishnu Thirthaji . . . I hope that when I go to Hampi next January I shall have the opportunity of meeting Shri Vishnn Thirtha. Thanking you, yours sincerely, Sister A. Verghese."

(೧೭) ತಾ॥ ೨–೫–೧೯೯೦ರರಲ್ಲಿ ಹೊಳೇನರಸೀಪುರದ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಫೀಲ್ಡ್ ಆಫೀಸರ್ ಆಗಿದ್ದು, ವಿಷ್ಣುತೀರ್ಥರ ಬಂಧುಗಳೂ ಆದ ಶ್ರೀ ಅನಿಲ್‌ಕುಮಾರ್‌ರವರು ವಿಷ್ಣುತೀರ್ಥರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಅರಿಕೆ ಮಾಡಿಕೊಂಡಿದ್ದಾರೆ :

"... ನಮ್ಮ ಮನೆಗೆ ತಾವು ಬರುತ್ತೀರೆಂಬ ಆಶಯಗಳೊಡನೆ ಹಾಗೂ ತಮ್ಮಿಂದ ನಮ್ಮ ಮನೆಯ ಪಾಪಕರ್ಮಗಳು ಪರಿಹಾರವಾಗ ಬಹುದೆಂದು ನಾವು ಬಯಸುತ್ತೇವೆ. ಈವರೆಗೂ ನಮಗೆ ಆ ಸೌಭಾಗ್ಯ ದೊರೆಕದೇ ಇರುವುದು ನಮ್ಮ ದುರಾದೃಷ್ಟವೇ ಸರಿ. ತಾವು ಶೀಘ್ರ ದಲ್ಲಿಯೇ ಇಲ್ಲಿಗೆ ಆಗಮಿಸುವ ಮನಸ್ಸು ಮಾಡುವಿರಾಗಿ ಪ್ರಾರ್ಥಿಸು ತ್ತೇವೆ. ... ಈ ಎಲ್ಲ ನನ್ನ ತೊಂದರೆಗಳೂ ದೂರವಾದರೆ ನನ್ನ ಯೋಜನೆಗಳು ಸಫಲವಾಗಿ ನಾನು ಯೋಚಿಸಿದಂತೆ ನಮ್ಮ (ಬ್ಯಾಂಕಿನ) ಶಾಖೆಯು ಇದೇ ತಾಲ್ಲೂಕು/ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಹಾಗೂ ಕರ್ನಾಟಕದಲ್ಲಿನ ನಮ್ಮ ಬ್ಯಾಂಕಿನ ಎಲ್ಲಾ ಶಾಖೆಗಳನ್ನೂ ಮೀರಿಸಿ ನಿಲ್ಲಲು ಸಹಾಯಕವಾಗಬಲ್ಲದು. ಇವೆಲ್ಲ ಕಾರ್ಯಗತವಾಗಲು ದೈವಬಲದ ಅಗತ್ಯ ವಿದೆ. ದೈವಕೃಪೆ ಒದಗುವಂತೆ ಮಾಡುವ ಸೌಲಭ್ಯಗಳು ತಮ್ಮಲ್ಲಿವೆ. ತಾವು ದಯವಿಟ್ಟು ನನಗೆ, ನನ್ನ ಮನೆಗೆ ಒಳ್ಳೆಯದಾಗುವಂತೆ ಯಾವುದೇ ರೀತಿಯ ದೇವತಾಕಾರ್ಯವನ್ನು ನಡೆಸಿಕೊಟ್ಟು ಮಹದುಪಕಾರ ಮಾಡ ಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ಇದರಿಂದ ನನ್ನ ಎಲ್ಲ ಕಷ್ಟನಷ್ಟಗಳೂ ಪರಿಹಾರವಾಗಬಹುದೆಂದೂ ಸಹ ನಂಬಿರುತ್ತೇನೆ ... ತಮ್ಮ ಮಾರ್ಗ ದರ್ಶನ, ಸಹಕಾರಗಳನ್ನು ಬೇಡುವ, ನಮಸ್ಕಾರಗಳೊಂದಿಗೆ, ತಮ್ಮ ವಿಶ್ವಾಸಿ—ಅನಿಲ್‌ಕುಮಾರ್."

(೧೮) ತಾ॥ ೫–೧–೯೯೧ರಂದು, ಗುಲ್ಬರ್ಗದಲ್ಲಿ ಅಡ್ವೊಕೇಟ್ ಆಗಿ ರುವ ಶ್ರೀಮತಿ ಅರುಣಾ ವಿಜಯಕುಮಾರ್, ಎಂ. ಎ., ಎಲ್‌ಎಲ್.ಬಿ. ಅವರು ವಿಷ್ಣುತೀರ್ಥರಿಗೆ ಬರೆದ ಪತ್ರದ ಒಕ್ಕಣೆ ಹೀಗಿದೆ :

"ಕು॥ ಸೌ॥ ಅರುಣಾಳ ಅನೇಕ ನಮಸ್ಕಾರಗಳು. ಬಹಳ ದಿನಗಳಿಂದ ನನಗೆ ಪತ್ರ ಬರೆಯಲಾಗಲಿಲ್ಲ ... ತಾವು ಈಗ ಬೆಂಗಳೂರಿನಲ್ಲಿ ಇರು ತ್ತೀರಿ ಎಂದು ಭಾವಿಸಿ ಈ ಪತ್ರ ಬರೆಯುತ್ತಿರುವೆ. ನೀವು ಕಳಿಸಿದ ಶ್ರೀ ಪದ್ಮನಾಭತೀರ್ಥರ ಆರಾಧನಾ ಪ್ರಸಾದ ತಲುಪಿತು ... ನಾನು ಬೆಳಗಾಂಗೆ ಹೋದಾಗ ತೀ॥ ದಾದಾನ ಹತ್ತಿರ ನಿಮ್ಮ "ಶ್ರೀಹರಿವಾಯುಸ್ತುತಿ–೨ನೇ ಭಾಗ" ಇತ್ತು. ಅದರಲ್ಲಿ ಹನುಮಾವತಾರವನ್ನು ೨೧ ಸಲ ಹರಿಪರವಾಗಿ ಮತ್ತು ವಾಯುಪರವಾಗಿ ಅರ್ಥ ಓದಿರುವೆ. ಈಗ ಭೀಮಾವತಾರ ೧೪ ಸಲ ಆಗಿದೆ. ಅದನ್ನೂ ಸಹ ೨೧ ಸಲ ಪಠಿಸಿದಮೇಲೆ ಯಾವುದನ್ನು ಹೆಚ್ಚಿಗೆ ಪಠಿಸಲಿ, ತಿಳಿಸಿರಿ ... ಬಾಕಿ ಎಲ್ಲಾ ಆರಾಮು. ನಿಮ್ಮ ತಮ್ಮನ

ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿರಿ. ಪತ್ರಕ್ಕೆ ತಮ್ಮ ಉತ್ತರದ ದಾರಿ ಕಾಯುವೆ. ಇತಿ ಗೌರವಪೂರ್ವಕ ನಮಸ್ಕಾರಗಳು. ತಮ್ಮ ವಿಶ್ವಾಸಿ—ಕು॥ ಸೌ॥ ಅರುಣಾ,"

(೧೯) ಧಾರವಾಡ ಡಿಸ್ಟ್ರಿಕ್ಟಿನ ಲಕ್ಷ್ಮೇಶ್ವರದಲ್ಲಿ ರಿಜಿಸ್ಟರ್ಡ್ ಆಯುರ್ವೇದಿಕ್ ಪ್ರಾಕ್ಟೀಷನರ್ ಆಗಿರುವ ವೈದ್ಯ ಬಾಬೂರಾವ್ ಕುಲಕರ್ಣಿಯವರು ವಿಷ್ಣುತೀರ್ಥರಿಗೆ ತಾ॥ ೬–೨–೧೯೯೧ರಂದು ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ :

"ಜಯ ರಘುವೀರ ಸಮರ್ಥ ! ಪರಮಪೂಜ್ಯ ವಿಷ್ಣುತೀರ್ಥರ ಚರಣಸನ್ನಿಧಿಗೆ ಶಿರಸಾಷ್ಟಾಂಗಪ್ರಣಾಮಪೂರ್ವಕ ವಿಜ್ಞಾಪನೆಗಳು. ಉಭಯ ಕುಶಲ. ತಾವು ಅಭಿಮಾನ–ಅಂತಃಕರಣ ಪೂರ್ವಕ ಬರೆದ ಪತ್ರ ತಲುಪಿ ೮–೧೦ ದಿವಸಗಳಾಗಿದೆ. ಉತ್ತರಿಸಲು ವಿಳಂಬವಾದದ್ದಕ್ಕೆ ಕ್ಷಮೆ ಇರಲಿ. ತಾವು ಇಲ್ಲಿಗೆ (ಬಂದು) ನಮ್ಮೆಲ್ಲರಿಗೂ ಧನ್ಯತೆಯನ್ನು ಉಂಟು ಮಾಡಿದಿರಿ. ಯಾತ್ರಿಕರೆಲ್ಲರೂ ತುಂಬಾ ಸಂತೋಷಗೊಂಡರು. ಬಹಳಷ್ಟು ಜನ ತಮ್ಮನ್ನು ನೋಡಿರಲೇ ಇಲ್ಲ. ಬರಿಯ ಕೇಳಿದ್ದರು. ತಾವು ಅಂದು ತಮ್ಮ ನೂರಾರು ಕೆಲಸಗಳನ್ನು ಬದಿಗಿಟ್ಟು ಇಲ್ಲಿಯವರೆಗೆ ಬಂದಿದ್ದಕ್ಕೆ ವೈಯಕ್ತಿಕವಾಗಿಯೂ ಪಾದಯಾತ್ರಾ ಸಂಘದ ವತಿಯಿಂದಲೂ ತಮಗೆ ತುಂಬಾ ಋಣಿ . . . ಅಭಿಮಾನ ನಿರಂತರವಿರಬೇಕಾಗಿ ಪ್ರಾರ್ಥನೆ. ತಮ್ಮ ಪುಸ್ತಕಗಳನ್ನು ಕಳಿಸಬೇಕಾಗಿ ವಿಜ್ಞಾಪನೆ.

ಇಂತಿ, ಶಿರಸಾಷ್ಟಾಂಗ ನಮಸ್ಕಾರಗಳು. ತಮ್ಮ, ಬಾಬುರಾವ್ ಕುಲಕರ್ಣಿ."

(೨೦) ದಿನಾಂಕ ೧೪–೧–೧೯೯೧ ಸೋಮವಾರದಂದು ವಿಷ್ಣುತೀರ್ಥರು ಬೆಂಗಳೂರಿನಿಂದ ಕಾಮಲಾಪುರದಲ್ಲಿರುವ ಶ್ರೀಮಾನ್ ಮಣೂರು ವೆಂಕೋಬಾಚಾರ್ಯರಿಗೆ ಬರೆದ ಪತ್ರ ಹೀಗಿದೆ :—

"ಪೂಜ್ಯರಾದ ವೇ॥ ಬ್ರ॥ ಶ್ರೀ॥ ಮಣೂರು ವೆಂಕೋಬಾಚಾರ್ಯರಿಗೆ ವಿಷ್ಣುತೀರ್ಥನ ಸಾದರಾನೇಕ ಸಾಷ್ಟಾಂಗ ನಮಸ್ಕಾರಗಳು. ಉ॥ ಕು॥ ಸಾಂಪ್ರತಂ.

"ಈ ವರ್ಷ ೯–೩–೧೯೯೧ನೇ ಶನಿವಾರಕ್ಕೆ ನನಗೆ ೭೯ ವರ್ಷಗಳು ತುಂಬುತ್ತದೆ. ನಾನು ಮೊಟ್ಟ ಮೊದಲು ಈ ಕಡೆಯಿಂದ ಬಂದು ಸೇವೆಗೆ ಆರಂಭ ಮಾಡಿದ್ದು ಯಂತ್ರೋದ್ಧಾರಕರ ಬಳಿಯಲ್ಲೇ ಎಂಬ ವಿಷಯ ನಿಮಗೆ ಚೆನ್ನಾಗಿ ಗೊತ್ತು . . . ಮಹಾಶಿವರಾತ್ರಿಯ ದಿನ ಮೊಟ್ಟ

ಮೊದಲು ನಾನು ನಿಮ್ಮನ್ನು ರಾಮದೇವರ ಗುಡಿಯಲ್ಲಿ ಪರಿಚಯ ಮಾಡಿಕೊಂಡೆ. ೧೯೫೧ರ ಪೂರ್ತಿ ಇದ್ದುದಲ್ಲದೆ ೧೯೫೨ರಲ್ಲೂ ಪುರಂದರದಾಸರ ಆರಾಧನೆವರೆಗೆ (ಅಂದರೆ ಜನವರಿ ೧೯೫೨ರ ವರೆಗೆ) ಯಂತ್ರೋದ್ಧಾರಕ ಪ್ರಾಣದೇವರ ಸೇವಾ ಮಾಡಿಕೊಂಡಿದ್ದು ಆ ದಿನ (ಆರಾಧನೆ ದಿನ) ನವವೃಂದಾವನ ಸೇರಿದೆ. ಆಮೇಲೆ ಪುನಃ ಜೂಲೈನಲ್ಲಿ ಬಂದವನು ಪದ್ಮನಾಭತೀರ್ಥರ ಆರಾಧನೆವರೆಗೆ ಯಂತ್ರೋದ್ಧಾರಕರ ಗುಡಿಯಲ್ಲೇ ಇದ್ದುದೂ ನಿಮಗೆ ನೆನಪಿರಬಹುದು. ೨–೩ ವರ್ಷ ಹೀಗೇ ನಡೆದ ಬಳಿಕ ೧೯೫೪ರಲ್ಲಿ ನನಗೆ ಸ್ಪಷ್ಟವಾಗಿ ನವವೃಂದಾವನದಲ್ಲಿಯೇ ನೆಲಸಿ ಸೇವೆ ಮಾಡುವಂತೆ ಸೂಚನೆಯಾದ್ದರಿಂದ ಅಲ್ಲೇ ನಿಲ್ಲುವ ಧೈರ್ಯ ಬಂತು.

ಈ ಪ್ರಕಾರ ನನ್ನ ಸೇವೆಯ ಅಡಿಗಲ್ಲು ಬಿದ್ದುದು ಯಂತ್ರೋದ್ಧಾರಕರ ಸೇವೆಯಿಂದಲೇ. ಇದನ್ನು ನೆನೆಸಿಕೊಂಡು ನನಗೆ ಆಪ್ತರಾದ ಕೆಲವು ಮಂದಿ ಸ್ನೇಹಿತರು ನವವೃಂದಾವನದಲ್ಲಿ ಈ ತಿಂಗಳ ೯ನೇ ದಿನಾಂಕ ಹಸ್ತೋದಕ ಅರ್ಪಿಸುವುದಕ್ಕೆ ಪೂರ್ವಭಾವಿಯಾಗಿ ೭ನೇ ಮಾರ್ಚ್ ಗುರುವಾರ ಯಂತ್ರೋದ್ಧಾರಕರಿಗೆ ಪಂಚಾಮೃತ ಮಾಡಿಸಿ ಹಸ್ತೋದಕ ಕೊಡಬೇಕೆಂದು ಯೋಜನೆ ಹಾಕಿಕೊಂಡಿದ್ದಾರೆ. ಸುಮಾರು ೨೦–೨೫ ಜನಗಳು ಆಗಬಹುದೆಂದು ನಿರೀಕ್ಷಣೆ ಇದೆ. ಆ ದಿನ ಯಂತ್ರೋದ್ಧಾರಕರ ಗುಡಿಯಲ್ಲಿ ಅಡಿಗೆ ಮಾಡಿ ಹಸ್ತೋದಕ ಕೊಡುವ ಏರ್ಪಾಡನ್ನು ತಾವೇ ಮಾಡಿಸಿ ನಮಗೆ ಅನುಗ್ರಹ ಮಾಡಬೇಕೆಂದು ಸವಿನಯವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ಅಡಿಗೆ ಮಾಡಿಸಲು ಬೇಕಾದ ಖರ್ಚು ಎಷ್ಟಾದರೂ ನಾವು ಮುಂಗಡವಾಗಿಯೇ ಅದನ್ನು ಕಳಿಸಿಬಿಡುತ್ತೇವೆ . . . ಇದೇ ರೀತಿ ಮರುದಿನ ಎಂದರೆ ೮ನೇ ದಿನಾಂಕ ಶುಕ್ರವಾರ (೮–೩–೧೯೯೧) ನರಹರಿತೀರ್ಥರಿಗೆ ಹಸ್ತೋದಕ ಕೊಡಬೇಕೆಂದಿದ್ದೇವೆ. ಅದೂ ನಿಮ್ಮ ನೇತೃತ್ವದಲ್ಲೇ ನಡೆಯಬೇಕೆಂದು ನಮ್ಮ ಆಸೆ . . . ತೀರ್ಥಪ್ರಸಾದ ತೆಗೆದುಕೊಂಡು ಸಂಜೆಗೆ ಆನೆಗೊಂದಿಗೆ ಹೋಗಿ ಮರುದಿನ ನವವೃಂದಾವನದಲ್ಲಿ ಹಸ್ತೋದಕ ಮಾಡಿಸಬೇಕೆಂಬುದು ನಮ್ಮ ಆಸೆ . . .

"ಖಿಲವಾಯುಸ್ತುತಿಯ ಅರ್ಥ ಮೊನ್ನೆ ಶ್ರೀ ಪದ್ಮನಾಭತೀರ್ಥರ ಆರಾಧನೆ ಸಮಯದಲ್ಲಿ ಪೂಜ್ಯ ಶ್ರೀ ೧೦೦೮ ಶ್ರೀ ಸತ್ಯಪ್ರಮೋದತೀರ್ಥ ಮಹಾಸನ್ನಿಧಾನಗಳವರಿಂದ ಅಧಿಕೃತವಾಗಿ ಬಿಡುಗಡೆ ಆಯಿತು. ಅದು ಈಗ ಬೈಂಡಾಗಿ ಸಿದ್ಧವಾಗಿದೆ. ೭ನೇ ದಿನಾಂಕವೇ ಅದನ್ನು ಶ್ರೀ ಯಂತ್ರೋ

ದ್ಧಾರೆಕರ ಸನ್ನಿಧಿಯಲ್ಲಿ ಸಮರ್ಪಿಸಿ (ಒಂದು ಪ್ರತಿಯನ್ನು) ನಿಮ್ಮ ಹಸ್ತದಲ್ಲೂ ಸಮರ್ಪಿಸುವೆನು. ಇದರಲ್ಲಿ ಬಳಿತ್ಥಾ ಸೂಕ್ತಕ್ಕೆ ವಿಸ್ತಾರವಾದ ಗದ್ಯ ಪದ್ಯಾತ್ಮಕ ಉಭಯವಿಧ ವಿವರಣೆಯೂ ಇದೆ. ಅದನ್ನೇ ನೀವು ಅವಶ್ಯ ನೋಡಬೇಕು ಎಂದು ನಿವೇದಿಸಿ ಈ ಪತ್ರ ಮುಗಿಸುತ್ತೇನೆ.

ಇತಿ ಸಾದರಾನೇಕ ಸಾಷ್ಟಾಂಗ ನಮಸ್ಕಾರಗಳು. —ವಿಷ್ಣುತೀರ್ಥ"

ಶ್ರೀ ಶ್ರೀಶಮೂರ್ತಿಗಳೊಡನೆ ಸಂಪರ್ಕ ಮತ್ತು ಸ್ನೇಹ

೧೯೮೨–೮೩ರ ಸಮಯದಲ್ಲಿ ಬೆಂಗಳೂರಿನ ಬಸವನಗುಡಿಯಲ್ಲಿ ಇರುವ ಆನಂದ್ ಪ್ರಿಂಟರ್ಸ್‌ನ ಮಾಲೀಕರೂ, 'ವಾಸುದೇವಪದಸಂತತಸಂಗೀ' ಎಂಬ ಪಾಕ್ಷಿಕಪತ್ರಿಕೆ (ಈಗ ಮಾಸಪತ್ರಿಕೆ)ಯ ಸಂಪಾದಕರೂ ಆದ ಶ್ರೀ ಹೆಚ್. ಪಿ. ಶ್ರೀಶಮೂರ್ತಿಗಳು ವಿಷ್ಣುತೀರ್ಥರಿಗೆ, "ನೀವು ವಾಯುಸ್ತುತಿಗೆ ಅರ್ಥವನ್ನು ಬರೆದುಕೊಟ್ಟರೆ ನಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸುತ್ತೇನೆ" ಎಂದು ಹೇಳಿದರು. ಆಗ ತೀರ್ಥರು, ೧೯೫೧ರಲ್ಲಿ ಬರೆದಿದ್ದ ವಾಯುಸ್ತುತಿಯ ತಾತ್ಪರ್ಯವನ್ನು ಅವರಿಗೆ ತೋರಿಸಿದರು. ಆಮೇಲೆ ಅದಕ್ಕಿಂತ ಹೆಚ್ಚು ವಿವರಣೆ ಸಹಿತ ಅದನ್ನು ಬರೆಯುವುದು ಉತ್ತಮವೆಂದು ಇಬ್ಬರೂ ನಿರ್ಧರಿಸಿದರು. ಅದರಂತೆ ಆರಂಭಿಸಿದ "ನಖಸ್ತುತಿ"ಯ ಎರಡು ಶ್ಲೋಕಗಳ ವಿವರಣೆಯೇ ಸುಮಾರು ೩೫೦ ಪುಟಗಳಷ್ಟಾಗಿ ಸುಮಾರು ಮೂರು ವರ್ಷ ಧಾರಾವಾಹಿಯಾಗಿಯೇ ಪ್ರಕಟವಾಯಿತು. ಆಮೇಲೆ ಅದನ್ನೇ ಒಟ್ಟುಗೂಡಿಸಿ (ಕೆಲವು ಪ್ರತಿಗಳನ್ನು) ಪುಸ್ತಕರೂಪದಲ್ಲಿ ಪ್ರಕಟಿಸಿದರು. ಅದು ತಾ॥ ೪–೩. ೧೯೮೭ರಲ್ಲಿ ಶ್ರೀ ವ್ಯಾಸರಾಜ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಪಯೋನಿಧಿತೀರ್ಥರ ಅಮೃತಹಸ್ತದಿಂದ ನವವೃಂದಾವನದಲ್ಲಿ ಶ್ರೀಮದ್ವ್ಯಾಸರಾಜಗುರುಸಾರ್ವಭೌಮರ ಕ್ರೋಧನ ಸಂವತ್ಸರದ ಮುಖ್ಯಾರಾಧನಾ ಸುಮುಹೂರ್ತದಲ್ಲೇ ಬಿಡುಗಡೆ ಆಯಿತು.

ಶ್ರೀಗಳವರು ಈ ಪುಸ್ತಕದ ಮುನ್ನುಡಿಯಲ್ಲಿ "(ವಿಷ್ಣುತೀರ್ಥರು) ವಾಖ್ಯಾನವನ್ನು ರಚಿಸುವಾಗ ಶ್ಲೋಕದ ಪದಚ್ಛೇದ ಮತ್ತು ಅನ್ವಯವನ್ನು ತೋರಿಸಿ ಪ್ರತಿಪದದ ವಿವರಣೆಯನ್ನು ಕೊಡುವಾಗ ಆಯಾ ಶಬ್ದಗಳ ನಿಷ್ಪತ್ತಿಯನ್ನು ವ್ಯಾಕರಣಬದ್ಧವಾಗಿ ಸುಲಲಿತವಾಗಿ ತೋರಿಸುವುದಲ್ಲದೆ ವಿವಿಧ ಕೋಶಗಳಲ್ಲಿ ಹೇಳಿರುವುದನ್ನು ನಿರೂಪಿಸಿ ಕೊನೆಗೆ ಅವುಗಳಲ್ಲಿ ಯಾವ ಅರ್ಥವು ಪ್ರಸಕ್ತ ಸಂದರ್ಭದಲ್ಲಿ ಹೊಂದುವುದೆಂದು ವಿವರಿಸುತ್ತಾರೆ. ಇವುಗಳ ಜೊತೆಗೆ ಸಂಬಂಧಪಟ್ಟ ಶ್ರುತಿ, ಸ್ಮೃತಿ ಮತ್ತು ಇತರ ಪ್ರಮಾಣ ಗ್ರಂಥಗಳನ್ನು ಉದಹರಿಸಿ ಭಾವ

ವನ್ನು ಹೆಚ್ಚು ವಿಶದಗೊಳಿಸಿರುತ್ತಾರೆ. ಈ ವ್ಯಾಖ್ಯಾನದಿಂದ ಶ್ರೀಮದಾಚಾರ್ಯರು, ಗ್ರಂಥಗಳನ್ನು ಎಷ್ಟು ಗಂಭೀರವಾಗಿ ಅರ್ಥಗಳನ್ನು ತುಂಬಿ ತುಳುಕಿಸಿ ಪ್ರತಿಯೊಬ್ಬರಿಗೂ ಅವರವರ ಯೋಗ್ಯತೆಯನ್ನು ಅನುಸರಿಸಿ ತಿಳಿಯಬಹುದೆಂಬುದನ್ನು ನಿರೂಪಿಸಿದ್ದಾರೆ" ಎಂದು ವಿಶ್ಲೇಷಿಸಿದ್ದಾರೆ.

ವಿಷ್ಣುತೀರ್ಥರು ಈ "ನಖಸ್ತುತಿ"ಯನ್ನು ಇಷ್ಟು ವಿವರವಾಗಿ ಬರೆಯಲು ಅವರ ಧ್ಯೇಯ, ಉದ್ದೇಶ ಮತ್ತು ಪ್ರೇರಕಶಕ್ತಿಗಳನ್ನು ಕುರಿತು ಪುಸ್ತಕದ ಮುನ್ನುಡಿಯಲ್ಲಿ ಹೀಗೆ ತಿಳಿಸಿದ್ದಾರೆ :— "ಕಳೆದ ಮೂವತ್ತೆರಡು ವರ್ಷಗಳಿಂದ ಸತತವಾಗಿ ತಮ್ಮ ಸೇವೆಯನ್ನೂ ಸ್ಮರಣೆಯನ್ನೂ ಕರುಣಿಸಿ ಅನುಗ್ರಹಿಸಿರುವ ಶ್ರೀಮತ್ ಪದ್ಮನಾಭತೀರ್ಥರು, ಶ್ರೀಮದ್ವ್ಯಾಸರಾಯರೇ ಪ್ರಮುಖರಾದ ನವ ವೃಂದಾವನಸ್ಥ ಯತೀಶ್ವರರ ಸನ್ನಿಧಿಯಲ್ಲಿ ಸಮರ್ಪಿಸುವ ಪ್ರೌಢ ಪ್ರಬಂಧ (ಥೀಸಿಸ್) ಎಂದೇ ಈ ಅರ್ಥ, ತಾತ್ಪರ್ಯ, ವಿವರಣೆಗಳನ್ನು ಬರೆಯುತ್ತಿದ್ದೇನೆ. ಆ ಸರ್ವಜ್ಞಶಿಖಾಮಣಿಗಳ ಮುಂದೆ ನನ್ನ ಯಾವತ್ತೂ ಜ್ಞಾನದ ಪರೀಕ್ಷೆ ಕೊಡುವುದಕ್ಕಾಗಿಯೇ ಭಕ್ತಿಯ ಭರದಿಂದ (ನನ್ನ) ವಿಚಾರಸರಣಿಯನ್ನು ನಿವೇದಿಸಿಕೊಂಡಿದ್ದೇನೆ. ಆದಕಾರಣ ಇದರಲ್ಲಿ ಅನೇಕ ವ್ಯಾಕರಣಾಂಶಗಳೂ ಗಹನವಾದ ಶಾಸ್ತ್ರಾರ್ಥವಿಚಾರಗಳೂ ಹೆಣೆದುಕೊಂಡುಬಿಟ್ಟಿವೆ . . . ಪಾಠಕರು ಈ ಗ್ರಂಥವನ್ನು ಓದಿ ನಮ್ಮ ಶ್ರೀಹರಿವಾಯುಗಳ ಮಹಿಮೆ ತಿಳಿದುಕೊಂಡರೆ, ಅವರಲ್ಲಿ (ಆ ಶ್ರೀಹರಿವಾಯುಗಳಲ್ಲಿ) ಆ ಜನಗಳಿಗೆ ಶ್ರದ್ಧಾಭಕ್ತಿ ಬೇರೂರಿದರೆ. ಶ್ರೀಮನ್ಮಧ್ವಸಿದ್ಧಾಂತದ ಮೂಲಪ್ರಮೇಯಗಳಾದರೂ ಅವರಿಗೆ ತಿಳಿದು ಅವರೆಲ್ಲ ಕೃತಾರ್ಥರಾದರೆ ನನ್ನ ಶ್ರಮ ಸಾರ್ಥಕ. ನನ್ನ ಜನ್ಮವೂ ಸಾರ್ಥಕ."

'ನಖಸ್ತುತಿ'ಯನ್ನು ಬರೆದು ಪ್ರಕಟಿಸಿದ ನಂತರ ವಿಷ್ಣುತೀರ್ಥರು 'ವಾಯುಸ್ತುತಿ'ಯ ನಲವತ್ತೊಂದು ಶ್ಲೋಕಗಳ ವಿವರಣೆಯನ್ನು 'ಶ್ರೀಹರಿವಾಯುಸ್ತುತಿ" ಎಂಬ ೮೫೦ ಪುಟಗಳನ್ನು ಒಳಗೊಂಡ ಮುಂದಿನ ಎರಡು ಭಾಗಗಳಲ್ಲಿ ಪ್ರತ್ಯೇಕ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ಆದರೆ ಇದರಲ್ಲಿ ಪ್ರತಿಪಾದಿತವಾಗಿರುವ ವಿಷಯವು ಸಾಮಾನ್ಯಜನರಿಗೂ ಅರ್ಥವಾಗುವಂತೆ ಸರಳವಾದ ಸುಲಭಶೈಲಿಯಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಈ ಸರಣಿಯ ಮೂರನೇ ಭಾಗವನ್ನು ತಾ॥ ೨೭–೧೧–೯೮ರಂದು ಶ್ರೀ ಪದ್ಮನಾಭತೀರ್ಥರ ಆರಾಧನೆಯ ದಿನವೇ ನವವೃಂದಾವನದಲ್ಲಿ ಶ್ರೀ ವ್ಯಾಸರಾಯ ಮಠಾಧೀಶರಾದ ಶ್ರೀ ವಿದ್ಯಾಪಯೋನಿಧಿತೀರ್ಥರೂ, ಶ್ರೀ ರಾಘವೇಂದ್ರತೀರ್ಥ ಮಠಾಧೀಶರಾದ ಶ್ರೀ ಸುಶಮೀಂದ್ರತೀರ್ಥರೂ, ಮತ್ತು ಶ್ರೀಪಾದರಾಜಮಠಾಧಿಪತಿಗಳಾದ ಶ್ರೀ

ವಿಷ್ಣುನನಿಧಿತೀರ್ಥರವರೂ ಸಂಯುಕ್ತವಾಗಿ ಬಿಡುಗಡೆ ಮಾಡಿದರು. ಈ ಸರಣಿಯ ನಾಲ್ಕನೆಯದಾದ—ಅಂತಿಮಭಾಗವೂ ಈಗ ಅಚ್ಚಾಗಿದೆ. ಅದರಲ್ಲಿ 'ವಾಯು ಸ್ತುತಿಯ' ಬಾಲಂಗಚ್ಚಿಯಂತಿರುವ 'ಖಿಲವಾಯುಸ್ತುತಿ' ಹಾಗೂ ಬಳಿತ್ಥಾ ಸೂಕ್ತಗಳ ವ್ಯಾಖ್ಯಾನ, ವಿವರಣೆಗಳು ಬರೆಯಲ್ಪಟ್ಟಿವೆ. ಕನ್ನಡದಲ್ಲಿ ಬರೆದ ಈ ವ್ಯಾಖ್ಯಾನವನ್ನೇ ಅವರು ಸಂಸ್ಕೃತಭಾಷೆಯಲ್ಲೂ ಶ್ಲೋಕಗಳ ರೂಪವಾಗಿ ಬರೆದು ಆ ಪುಸ್ತಕದ ಕೊನೆಯಲ್ಲಿ ಲಗತ್ತಿಸಿದ್ದಾರೆ.

ಈ ಗ್ರಂಥಮಾಲೆಯನ್ನು ಬರೆಯುವಾಗ ತೀರ್ಥರು ಅವರಿಗೆ ಸ್ಪಷ್ಟವಾಗಿ ಅರ್ಥವಾಗದೆ ಇದ್ದ, ಹಾಗೂ ಇತರೇ ಯಾವ ಪರಾಮರ್ಶಾತ್ಮಕ (ರೆಫರೆನ್ಸ್) ಗ್ರಂಥಗಳಲ್ಲೂ ಪರಿಹಾರ ದೊರಕದೇ ಇದ್ದ ಕ್ಲಿಷ್ಟಸಮಸ್ಯೆಗಳನ್ನು ಚಂದ್ರಿಕಾ ರಾಯರು, ಮುಳಬಾಗಿಲಲ್ಲಿರುವ ಶ್ರೀಪಾದರಾಯರು, ಮತ್ತು ಶ್ರೀ ಪದ್ಮನಾಭ ತೀರ್ಥರು, ಇವರನ್ನು ಭಕ್ತಿಯಿಂದ ಪ್ರಾರ್ಥಿಸಿಕೊಂಡಾಗಲೆಲ್ಲ ತೀರ್ಥರಿಗೆ ಸೂಚನೆ ಕೊಟ್ಟು ಸ್ಪಷ್ಟಪಡಿಸುತ್ತಿದ್ದರು. ಆದ್ದರಿಂದಲೇ ಅವರು ಬರೆದ "ನಖಸ್ತುತಿ" ಮತ್ತು "ಶ್ರೀಹರಿವಾಯುಸ್ತುತಿ"ಯನ್ನು ಕೂಲಂಕಷವಾಗಿ ಓದಿದ ಅನೇಕ ಪಂಡಿತರೂ ವಿದ್ವನ್ಮಣಿಗಳೂ ಅವರಿಗೆ ಶ್ಲಾಘನೀಯ ಪತ್ರಗಳನ್ನು ಬರೆದಿದ್ದಾರೆ. ಇದನ್ನು ನೋಡಿದರೆ ಶ್ರೀ ಪದ್ಮನಾಭತೀರ್ಥರು, ಶ್ರೀಮಟ್ಟೀಕಾಕೃತ್ಪಾದರು, ಶ್ರೀ ವ್ಯಾಸರಾಯರು, ಮಂತ್ರಾಲಯದ ರಾಯರೇ ಮೊದಲಾದ ಸಕಲ ಸದ್ಗುರು ಗಳ ಕೃಪಾಕಟಾಕ್ಷವು ವಿಷ್ಣುತೀರ್ಥರ ಮೇಲೆ ಬಿದ್ದಿದೆಯೆಂಬುದು ಸ್ಪಷ್ಟವಾಗುತ್ತದೆ.

ವಿಮರ್ಶಾತ್ಮಕ ಲೇಖನಗಳು

ಹೀಗೆ ವಿಷ್ಣುತೀರ್ಥರು ಬರೆದು ಪ್ರಕಟಿಸಿರುವ ಈ ಗ್ರಂಥಮಾಲೆ ಓದುಗ ರಲ್ಲಿ ಬಹಳ ಖ್ಯಾತಿಯನ್ನು ಪಡೆದು ಪಂಡಿತಪಾಮರರೀರ್ವರಿಂದಲೂ ಮುಕ್ತಕಂಠ ದಿಂದ ಪ್ರಶಂಸಿಸಲ್ಪಟ್ಟಿದೆ. ಇದನ್ನು ಸಮರ್ಥಿಸುವ ಕೆಲವು ವಿಮರ್ಶಾತ್ಮಕ ಅಭಿಪ್ರಾಯಗಳು ಹೀಗಿವೆ :

(೧) ಶ್ರೀ ವ್ಯಾಸರಾಜಮಠಾಧೀಶರಾದ ಶ್ರೀ ಶ್ರೀ ವಿದ್ಯಾಪಯೋನಿಧಿ ತೀರ್ಥರು 'ನಖಸ್ತುತಿ'ಯ ಮುನ್ನುಡಿಯಲ್ಲಿ ಬರೆದಿರುವುದನ್ನು ಈಗಾಗಲೇ ಕೊಟ್ಟಿದ್ದೇವೆ. (ಪುಟ ೫೧–೫೨).

(೨) ತಾ॥ ೩೧ ಜುಲೈ ೧೯೯೧ (ಮಂಗಳವಾರ)ದ 'ಹಿಂದೂ' ಪತ್ರಿಕೆಯ ೨೩ನೇ ಪುಟದಲ್ಲಿ ಇದರ ವಿಮರ್ಶೆ ಹೀಗೆ ಉಲ್ಲೇಖಿಸಲ್ಪಟ್ಟಿದೆ :—

Kannada : '*Sri Harivayu Stuti*' of Trivikrama

Panditacharya (Part III) by P. Vishnu Tirtha.

"*Shri Harivayu Stuti* covers the topics of the exploits of Sri Krishna (Hari) and Hanuman, Bhima and Madhwacharya (the three avataras of Vayu) occuring in *Ramayana, Bharata, Bhagavata and Madhva Vijaya.* The full work contains 41 slokas. The author has already given the explanations of 21 slokas of the first and second sections in his earlier volumes. In this third volume he gives scholarly explanations of the remaining 20 slokas of the third and fourth sections. The third section is about the greatness of Bhima, the second incarnation of Vayu in Dwapara Yuga. The fourth section reveals the greatness of Madhwacharya, the third incarnation of Vayu in Kali Yuga. The uniqueness of this work is that each of the slokas can be explained with reference to both Hari and Vayu.

"Destruction of the wicked and of the army of eighteen akshohinis, Bhima's meeting with Hanuman, bringing the Saugandhika flower, contradiction of the opposite shastras, greatness of Madhwacharya, the composition of *Brahma Sutras* and its Bhashyas (commentaries) are the topics dealt with here.

"The learned scholar follows the traditional Gurukula teaching method in writing this work. For each sloka the explanation begins with an introduction—original sloka in Kannada transliteration—word analysis—grammatical notes—explanation with reference to Hari—prose order—meaning—explanation with reference to Bhima/Vayu—the relevant epic stories, etc. Thus the explanation is thorough. This book will be of use to a student of Sanskrit studying Dwaita Philosophy. —A. S. Kedilava'

(೩) ಬೊಂಬಾಯಿಯ ಶ್ರೀಮಾನ್ ಪ್ರಭಂಜನ್ ಕುಲಕರ್ಣಿಯವರು ಶ್ರೀ ಶ್ರೀಶಮೂರ್ತಿಗೆ ಬರೆದ ತಮ್ಮ ಒಂದು ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ—

> "The monumental work by Sri Vishnu Thirtha ... makes me marvel at his vastness of kn͏owledge, mastery over grammar, command over language, and the simplicity of style with which he explains the minutest points most thoroughly and convincingly—quoting proper authority. This masterpiece proves, if a proof be at all necessary, that its illustrious author must have defin͏itely been exceedingly blessed by the noble band of nine *Vidwatparigneya Maha Viseshas* at whose lotus feet he has rendered selfless service for more than two decades. Only eminent men of letters well-versed in Madhwa Philosophy can adequately comment upon and justifiably review this *magnnm opus*."

ವಿಷ್ಣುತೀರ್ಥರಿಂದ ಬರೆಯಲ್ಪಟ್ಟ ನಖಸ್ತುತಿ ಮತ್ತು ಹರಿವಾಯುಸ್ತುತಿ, ಖಿಲವಾಯುಸ್ತುತಿಗಳನ್ನೊಳಗೊಂಡ ನಾಲ್ಕು ಭಾಗಗಳ ಪುಸ್ತಕಮಾಲೆ ಪ್ರಕಟವಾದ ಮೇಲೆ ೧೯೯೧ರ ಜನವರಿ ೮ನೇ ತಾರೀಖು ಮಂಗಳವಾರ ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಮಾಧ್ವ ಪಾದಯಾತ್ರಾ ಸಂಘದವರು ನಡೆಸಿದ ಶ್ರೀ ಗೋಪಾಲದಾಸರ ಆರಾಧನೆಗೆ ವಿಷ್ಣುತೀರ್ಥರನ್ನು ಆಹ್ವಾನಿಸಿ ಅವರಿಗೆ ಸನ್ಮಾನ ಮಾಡಿ ವಿಶೇಷ ಗೌರವ ಅರ್ಪಿಸಿದರು.

ವಿಷ್ಣುತೀರ್ಥರಿಂದ ಬರೆಯಲ್ಪಟ್ಟ 'ದೇವಪೂಜಾ' ಪದ್ಧತಿ 'ವಾಸುದೇವ ಪದಸಂತತಸಂಗೀ' ಪತ್ರಿಕೆಯಲ್ಲೇ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವ ಇನ್ನೊಂದು ಲೇಖನಮಾಲೆ. ಇದರಲ್ಲಿ ಪೂಜಾಕಾಲದಲ್ಲಿ ಹೇಳುವ ಎಲ್ಲ ಮಂತ್ರಗಳಿಗೂ ಅರ್ಥ-ತಾತ್ಪರ್ಯಗಳನ್ನೂ ಕೊಟ್ಟಿರುವುದರ ಜೊತೆಗೆ ಪೂಜಾವಿಧಾನಗಳನ್ನೂ ಸ್ಪಷ್ಟವಾಗಿ ವಿವರಿಸಿರುವುದರಿಂದ ಈ ಲೇಖನಮಾಲೆಯೂ ಸಹ ಓದುವರಿಗೆಲ್ಲ ಬಹಳ ಪ್ರಿಯವಾಗಿ ಮೆಚ್ಚಿಗೆಯಾಗಿದೆ. ಆದುದರಿಂದಲೇ ಚಾಮರಾಜಪೇಟೆಯ ಶ್ರೀಮನ್ಮಾಧ್ವಸಂಘದ ಕೆಲವು ಹಿರಿಯ ವ್ಯಕ್ತಿಗಳು ೧೯೮೭ರಲ್ಲಿ ಅನೇಕ ಉತ್ಸಾಹಿ ಜನಗಳನ್ನು ಒಟ್ಟುಗೂಡಿಸಿ, ಅವರಿಗೆ ವಿಷ್ಣುತೀರ್ಥರಿಂದಲೇ ದೇವತಾರ್ಚನೆಯ ಕ್ರಮವನ್ನು ಹೇಳಿಸಿಕೊಟ್ಟರು. ಅವರು ಪೂಜಾಮಂತ್ರದ ಕ್ರಮ

ವನ್ನು ವಿವರವಾಗಿ ಬೋಧಿಸಿದರಲ್ಲದೇ ಅದರಲ್ಲಿ ಅಡಗಿರುವ ಅನುಸಂಧಾನಗಳನ್ನೂ ತಿಳಿಸಿಕೊಟ್ಟರು. ಕೊನೆಯಲ್ಲಿ ಅವರಿಗೆಲ್ಲಾ ಒಂದು ಪ್ರಮಾಣಪತ್ರವನ್ನೂ ಕೊಡಲಾಯಿತು. ಇದರಿಂದ ಅವರೆಲ್ಲರೂ ಬಹಳ ಹರ್ಷಗೊಂಡರು.

೧೯೮೭ರಲ್ಲಿ ಒಂದು ಬಾರಿ, ಅಲ್ಲದೆ ಪುನಃ ೧೯೯೦ರ ಮೇ ತಿಂಗಳಲ್ಲಿ ಇನ್ನೊಂದು ಬಾರಿ ಚಾಮರಾಜಪೇಟೆಯ ಅದೇ ಮಾಧ್ವ ಸಂಘದಲ್ಲಿ ವಿಷ್ಣುತೀರ್ಥರು ಕೆಲವು ಮಹಿಳೆಯರ ಕೋರಿಕೆಯಂತೆ ಅವರಿಗೆ ಗುರುಮಂತಾರ್ಥವನ್ನು ಉಪದೇಶ ಮಾಡಿದರು.

ಇನ್ನೂ ಹಿಂದೆ ವಿಷ್ಣುತೀರ್ಥರು ಅನೇಕ ಉಪಯುಕ್ತ ಗ್ರಂಥಗಳನ್ನು ಬರೆದಿರುವುದೂ ಉಂಟು, ಕೆಲವನ್ನು ಆರಂಭಿಸಿ ನಿಲ್ಲಿಸಿರುವುದೂ ಉಂಟು. ಸಂಗ್ರಹ ರಾಮಾಯಣದ ಸುಂದರಕಾಂಡ ಭಾವಾರ್ಥವನ್ನು ೧೯೬೧ರಲ್ಲೇ ತಮ್ಮ ತಂಗಿಗಾಗಿ ಬರೆದುಕೊಟ್ಟರು. ನಖಸ್ತುತಿಯನ್ನು ಮುಗಿಸುವಾಗಲೇ ಬರೆದ ಐತರೇಯೋಪನಿಷತ್ತಿನ ಮೂರನೆಯ ಅಧ್ಯಾಯದ ಸರಳಾನುವಾದವೂ ಕೇನೋಪನಿಷತ್ತಿನ ಸರಳಾನುವಾದವೂ ಮುಗಿದ ಕೃತಿಗಳಾದರೆ ಪುರುಷಸೂಕ್ತವ್ಯಾಖ್ಯಾನಗಳ ವಿವರಣೆಯೂ ಅಣುಭಾಷ್ಯದ ವಿವರಣೆಯೂ ಆರಂಭವಾಗಿ ನಿಂತು ಹೋಗಿವೆ. ಅವರು ಅವನ್ನು ಸದ್ಯದಲ್ಲೇ ಬರೆದು ಮುಗಿಸುವ ಯೋಚನೆಯಲ್ಲಿದ್ದಾರೆ. ಹೀಗೆ ಅನೇಕ ವರ್ಷಗಳಿಂದ ವಿಷ್ಣುತೀರ್ಥರು ಹೆಚ್ಚಾಗಿ ಹರಿವಾಯುಗಳ ಸೇವೆಯನ್ನೇ ಮಾಡುತ್ತಾ ಬಂದಿದ್ದಾರೆ. ಈ ವರೆಗೆ ಅವರು ಕೈಗೊಂಡಿರುವ ಕಾರ್ಯಕಲಾಪಗಳೂ ಮುಂದೆ ಮಾಡಬಯಸುವ ಸಾಧನೆಗಳು ಎಲ್ಲವೂ ಶ್ರೀಹರಿಪ್ರೀತಿಕರವಾಗಿ ಕೊನೆಗೊಳ್ಳುವುದೆಂದು ಆಶಿಸೋಣ.

ಅಪಮೃತ್ಯುವಿನಿಂದ ಪಾರಾದ ಸವಿನೆನಪು—ಅಂದು, ಇಂದು

ವಿಷ್ಣುತೀರ್ಥರು ೧೯೫೨ರಲ್ಲಿ ನವವೃಂದಾವನಕ್ಕೆ ಹೋಗಿ ಗುರುಗಳ ಸೇವೆಗಾಗಿ–ಅಲ್ಲಿ ನೆಲೆಸಿದ ಆರಂಭದಲ್ಲಿ ಹುಲಿಯಿಂದ ಪಾರಾಗಿ ಬಂದ ಸಂದರ್ಭದಲ್ಲಿ ನಡೆದ ಇನ್ನೊಂದು ಘಟನೆಯನ್ನೂ ಆಗಿಂದಾಗ್ಗೆ ನೆನೆಸಿಕೊಳ್ಳುತ್ತಾರೆ ಅವರು ನವವೃಂದಾವನದಿಂದ ನದಿ ದಾಟಿ ಆನೆಗೊಂದಿಗೆ ಹೊರಟಾಗ ಅವರ ಒಂದು ಕೈಲಿ ದೇವರ ಪೆಟ್ಟಿಗೆ ಇತ್ತು. ಇನ್ನೊಂದು ಕೈಲಿ ಪಾರಾಯಣಗ್ರಂಥಗಳ ಗಂಟು ಇತ್ತು. ಹೀಗಿರುವಾಗ ಅವರು ನಡುಗಡ್ಡೆ ಬಿಟ್ಟು ನದಿಯಲ್ಲಿ ಎಂದಿನಂತೆ ಇಳಿದಾಗ ಆಯ ತಪ್ಪಿ ನೀರಿನಲ್ಲಿ ಮುಳುಗಿ ಹೋದರು. ಅವರಿಗೆ ಈಜು ಬರುತ್ತಿರಲಿಲ್ಲ. ಆದ್ದರಿಂದ ಆಗ ಅವರಿಗೆ ಅಪಮೃತ್ಯುವಿನ ಭಯವಿತ್ತು. ಆದರೂ ಅವರು ಈಜು

ವಿಷ್ಣುತೀರ್ಥರ ಮಿತ್ರವರ್ಗ–ಶ್ರೀ ವ್ಯಾಸರಾಜಮಠದ ಶ್ರೀಗಳವರು ಶಾಲುಹೊದಿಸಿದ ಸಂದರ್ಭದಲ್ಲಿ
(ಸ್ಥಳ : ಶ್ರೀ ಚಿಂತಮಣಿಮಠದ ಆವರಣ, ಆನೆಗೊಂದಿ)

ಮೋಕ್ಷ ಇತ್ಯುಚ್ಯತೇ ಮೋಕ್ಷ್ಯೈಸ್ತ್ರೀತಿ ಮುಕ್ತಾ ಹರಿಂ ಸದಾ। ೧೮
ಉಪಾಸತೇ ಜಗಜ್ಜ್ಯೋತಿಸ್ತತ್ಸ್ವರೂಪಾಽದ್ಯಂತವರ್ಜಿತಮ್॥
ನ ಕದಾಚಿಜ್ಜಗನ್ನಾಶೋ ನ ಕದಾಚಿತ್ತದನ್ಯಥಾ। ೧೯
ಜಗತ್ಪ್ರವಾಹರೂಪೇಣ ಸರ್ವದೈವಂ ವ್ಯವಸ್ಥಿತಮ್॥
ಜ್ಞಾನತಃ ಕರ್ಮತೋ ವಾಪಿ ತಪಸಾ ಶಕ್ತಿತೋಽಪಿ ವಾ। ೨೦
ನ ಕಸ್ಯಾಪ್ಯನ್ಯಥಾ ಭಾವ್ಯಂ ಜಗದೇತತ್ಕದಾಚನ॥
ಸತ್ಯೋ ವಿಷ್ಣುಃ ಶ್ರೀಶ್ಚ ಸತ್ಯಾ ಜೀವಾಃ ಸತ್ಯಂ ಜಡಂ ತಥಾ। ೨೧
ಅಸತ್ಯಂ ನಾಸ್ತಿ ಕಿಂಚಿಚ್ಚ ಸರ್ವೇಽಪಿ ಜ್ಞಾನಗೋಚರಮ್॥
ಜ್ಞಾತ್ವಾ ವಿಷ್ಣುಮತೋ ಮುಕ್ತಿಂ ಪ್ರಾಪ್ನುಯಾತ್ಪುರುಷೋತ್ತಮ-
ಮಿತಿ ಭವಿಷ್ಯತ್ಪರ್ವಣಿ॥

~~ಇತ್ಯಾದ್ಯುಕ್ತ್ವಾ~~

ಇದಮಿತ್ಯಾತ್ಮನೋ ಯೋಗ್ಯಂ **ಸರ್ವಂ**
ಸಮಗ್ರಂ **ಭವತಿ**। ನಿರುಪಮಾನಂದಸ್ವಾ-
ಪೇಕ್ಷಿತಪ್ರಾಪ್ತ್ಯನಂತಿ ಸಿದ್ಧತತ್ತ್ವೇನೇದಮಿತಿ ~~ಚ~~।
ಉಚ್ಯತೇ। ಸಪ್ತಪರ್ವಮಭಕ್ತಪರ್ವಂ ಭ-
ವಿಷ್ಯಂತಿ ಇತ್ಯಾದಿನಾ ಸಮಗ್ರಭಾವಸ್ಯ ಪ್ರ-
ಸಿದ್ಧತ್ವಾತ್॥ ಬ್ರಹ್ಮಣೋ
ಬ್ರಹ್ಮ **ವಿಶ್ವಾಸ್ಯಮದೋ ಮಹೋ** ಮ-

ವಿಷ್ಣುತೀರ್ಥರ ಕನ್ನಡ ಬರವಣಿಗೆಯ ಮಾದರಿ
(ಬೃಹದ್ಭಾಷ್ಯದ ಒಂದು ಪುಟ.)



೧೯೫೩ರಲ್ಲಿ ತೆಗೆದ ವಿಷ್ಣುತೀರ್ಥರ ಭಾವ ಚಿತ್ರ
(ಫೋಟೋ—ಕೆ. ಎಸ್. ಉಪಾಧ್ಯಾಯ. ಧಾರವಾಡ)

ಡಾ॥ ಪಿ. ವಿಜಯಲಕ್ಷ್ಮೀ

ಡಾ॥ ಸಂಪತ್

ಬರುತ್ತಿರುವವರು ಹೇಳುತ್ತಿದ್ದುದನ್ನು ಜ್ಞಾಪಿಸಿಕೊಂಡು ತಾಳ್ಮೆಯಿಂದ ಚಾಚಿದ ಕೈಗಳನ್ನು ನೀರಿನಲ್ಲಿ ಅಪ್ಪಳಿಸುತ್ತಾ ಹಾಗೇ ಸ್ವಲ್ಪ ದೂರ ಮುಂದೂಡಲ್ಪಟ್ಟರು. ಆಗ ಅವರು ಮನಸ್ಸಿನಲ್ಲೇ ಯತಿಗಳನ್ನು ಕುರಿತು, "ಸ್ವಾಮಿ, ನಾನು ಯಂತ್ರೋದ್ಧಾರಕ ಪ್ರಾಣದೇವರ ಆಜ್ಞೆ ಮೇರೆ ನಿಮ್ಮ ಸೇವೆ ಮಾಡಲು ಇಲ್ಲಿಗೆ ಬಂದೆ. ನನ್ನನ್ನು ಈಗ ಈ ರೀತಿ ದುರ್ಮರಣಕ್ಕೆ ಗುರಿಪಡಿಸುವುದು ಉಚಿತವೇ ?" ಎಂದು ಕೇಳಿದರು. ತಕ್ಷಣ ಗುರುಗಳ ಕೃಪೆಯಿಂದ ಅವರ ಕಾಲಿಗೆ ಬಂಡೆಯೊಂದು ಸಿಕ್ಕಿ ಅವರು ಅಪಮೃತ್ಯುವಿನಿಂದ ಪಾರಾದರು. ಹಾಗಾದ್ದರಿಂದಲೇ ಅವರಿಗೆ ಮುಂಬರುವ ವರ್ಷಗಳಲ್ಲಿ ನಿಷ್ಠೆಯಿಂದ ಯತಿವರ್ಯರ ಸೇವೆಯನ್ನೂ ಮಾಡುತ್ತಾ ಯಥಾಶಕ್ತಿ ಜ್ಞಾನಾರ್ಜನೆಯನ್ನೂ ಮಾಡಿಕೊಂಡು ಶ್ರೀಹರಿಪ್ರೀತಿಯಾದ ಲೇಖನಗಳನ್ನು ಬರೆದು ತಮ್ಮ ಜೀವನವನ್ನು ಸಾರ್ಥಕಗೊಳಿಸಲು ಅವಕಾಶ ದೊರಕಿತು

ಎಪ್ಪತ್ತೊಂಬತ್ತನೇ ವರ್ಷದ ಹುಟ್ಟಿದ ಹಬ್ಬ

೧೯೯೧ರ ಮಾರ್ಚ್ ೯ನೇ ತಾರೀಖು (ಪ್ರಮೋದ ಸುವತ್ಸರ ಪಾಲ್ಗುಣ ಬಹುಳ ನವಮಿ, ಶನಿವಾರ) ವಿಷ್ಣುತೀರ್ಥರಿಗೆ ಎಪ್ಪತ್ತೊಂಬತ್ತು ವರ್ಷಗಳು ತುಂಬಿದವು. ಈ ಸಂದರ್ಭದಲ್ಲಿ ಅವರು ತಮ್ಮ ಜೀವನಕಾಲದಲ್ಲಿ ದೈವಾನುಗ್ರಹದಿಂದ ನಡೆದುಬಂದ ಆಧ್ಯಾತ್ಮಿಕ ಮುನ್ನಡೆಯನ್ನು ಸ್ಮರಿಸಿಕೊಂಡು ಅದಕ್ಕೆ ಖಚಿತವಾದ ರೂಪುರೇಷೆಕೊಟ್ಟು ಕಾಪಾಡಿದ ಹಂಪೆಯ ಯಂತ್ರೋದ್ಧಾರಕ ಪ್ರಾಣದೇವರು ಹಾಗೂ ನವವೃಂದಾವನದ ಯತಿವರೇಣ್ಯರಿಗೆ ತಮ್ಮ ಭಕ್ತಿಪ್ರೋತವಾದ ಕೃತಜ್ಞತೆಯನ್ನು ಅರ್ಪಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ ಅದನ್ನು ಈಡೇರಿಸಬೇಕೆಂದು ಅವರ ಹಿತೈಷಿಗಳೂ ಶಿಷ್ಯರೂ ನಾಲ್ಕುದಿನಗಳ ಒಂದು ಯೋಜನೆಯನ್ನು ಹಾಕಿಕೊಂಡರು. ಅದರ ಪ್ರಕಾರ ಅವರು ಮಾರ್ಚ್ ೭,೮,೯, ೧೦ರ (ಗುರುವಾರ. ಶುಕ್ರವಾರ, ಶನಿವಾರ, ಭಾನುವಾರ) ದಿನಗಳಲ್ಲಿ ಅನುಕ್ರಮವಾಗಿ ಯಂತ್ರೋದ್ಧಾರಕ ಪ್ರಾಣದೇವರು, ನರಹರಿತೀರ್ಥರ ವೃಂದಾವನ, ನವವೃಂದಾವನದ ಯತಿಗಳು ಹಾಗೂ ರಾಯಚೂರು ಜಿಲ್ಲೆಯ ಕೊಪ್ಪಳದ ಬಳಿ ಇರುವ ಮಾದಿನೂರಿನಲ್ಲಿ ಪ್ರತಿಷ್ಠಿತವಾದ ವಿಷ್ಣುತೀರ್ಥಯತಿಗಳ (ಅರಣ್ಯಕಾಚಾರ್ಯರ) ಪೂಜೆಗಳನ್ನು ಅರ್ಪಿಸಿ ಹಸ್ತೋದಕ ನಡೆಸಲು ಏರ್ಪಾಟು ಮಾಡಿದರು. ತೀರ್ಥರಿಗೆ ಆತ್ಮೀಯರಾದ ಸುಮಾರು ೨೦–೩೦ ಜನ ಈ ಸಮಾರಂಭಗಳಲ್ಲಿ ಭಾಗವಹಿಸಿ ತನು-ಮನ-ಧನಗಳಿಂದ ಸಹಾಯ ಮಾಡಿ ಈಪ್ಸಿತ ಕಾರ್ಯವನ್ನು ಅವಿಸ್ಮರಣೀಯವಾಗಿ ನೆರವೇರಿಸಲು ಅನುವಾದರು. ಅದರಲ್ಲೂ, ಪಾಲುಗೊಂಡಿದ್ದ

ಕೆಲವು ಯುವಕ ಕಾರ್ಯಕರ್ತರುಗಳ ಉತ್ಸಾಹ ಮತ್ತು ಕಾರ್ಯದಕ್ಷತೆಯಂತೂ ವರ್ಣನಾತೀತವಾಗಿತ್ತು. ನಾಲ್ಕು ದಿನಗಳೂ ದೇವರಿಗೆ ಮತ್ತು ವೃಂದಾವನಗಳಿಗೆ ಸಕಲ ಪೂಜಾವಿಧಿಗಳೂ ಕ್ರಮಪೂರ್ವಕವಾಗಿ, ಶಾಸ್ತ್ರೋಕ್ತವಾಗಿ ನಡೆಯುತ್ತಿರುವಾಗ, ಅದರಲ್ಲೂ ಮುಖ್ಯವಾಗಿ ಮಹಾಮಂಗಳಾರತಿ ಸಮಯದಲ್ಲಿ ಘಂಟಾನಾದದೊಡನೆ ಅರ್ಚಕರಿಂದಲೂ ಭಕ್ತಾದಿಗಳಿಂದಲೂ ಉಚ್ಚಸ್ವರದಲ್ಲಿ ಧ್ವನಿಗೂಡಿಸಲ್ಪಟ್ಟು ಮಂತ್ರಗಳೂ ಸ್ತೋತ್ರಗಳೂ ಸೂಕ್ತರೀತಿಯಲ್ಲಿ ಹೇಳಲ್ಪಡುತ್ತಿದ್ದಾಗ ಅಲ್ಲಿ ನೆರೆದಿದ್ದ ಪ್ರೇಕ್ಷಕರೆಲ್ಲರೂ ಪುಲಕಿತರಾಗಿ ಆನಂದಬಾಷ್ಪವನ್ನು ಸುರಿಸುತ್ತಾ ನಿಂತಿರುತ್ತಿದ್ದ ದೃಶ್ಯ ಅಮೋಘವಾಗಿತ್ತು. ಆ ಘಳಿಗೆಗಳು ನಿಜವಾಗಿಯೂ ಅಮೃತಘಳಿಗೆಗಳಾಗಿದ್ದವು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

೮ನೇ ತಾರೀಖು ನರಹರಿತೀರ್ಥರ ವೃಂದಾವನಕ್ಕೆ ಹೋಗುವಾಗ ಯಾತ್ರಿಕರು ದಾರಿಯಲ್ಲಿ ಶ್ರೀ ರಘುನಂದತೀರ್ಥರ ವೃಂದಾವನಕ್ಕೂ ಹೋಗಿ ಪಂಚಾಮೃತಾಭಿಷೇಕವನ್ನು ಮಾಡಿಸಿಕೊಂಡು ಮುಂದೆ ಹೊರಟರು,

ನವವೃಂದಾವನದಲ್ಲಿ ಶನಿವಾರದ ದಿನ ವೃಂದಾವನಗಳಿಗೆ ಅಭಿಷೇಕ ಅಲಂಕಾರ ಪೂಜಾ ಮಂಗಳಾರತಿಗಳಾದಮೇಲೆ ವಿಷ್ಣುತೀರ್ಥರ ಶಿಷ್ಯರನೇಕರು ಅವರಿಗೆ ತಮ್ಮ ಭಕ್ತಿಯ ಕಾಣಿಕೆಗಳನ್ನು ವ್ಯಾಸರಾಯ ಸ್ವಾಮಿಗಳ ವೃಂದಾವನದ ಎದುರಿಗೇ ಅರ್ಪಿಸಿದರು. ತೀರ್ಥರು ಆ ಹಣವನ್ನು ಅಲ್ಲೇ ತಮ್ಮ ಶ್ರೀಹರಿವಾಯುಸ್ತುತಿಯ ಪ್ರಕಟನಾ ಖರ್ಚಿಗಾಗಿ ಕೊಟ್ಟುಬಿಟ್ಟರು. ಇದಾದಮೇಲೆ ತೊಂಬತ್ತು ವರ್ಷಗಳ ವಯೋವೃದ್ಧೆಯೂ ಜ್ಞಾನವೃದ್ಧೆಯೂ ಆದ ಅವರ ಚಿಕ್ಕಮ್ಮನವರಾದ ಶೃಂಗಾರಮ್ಮನವರಿಂದ ಬರೆದು ಕಳಿಸಲ್ಪಟ್ಟ ಆಶೀರ್ವಾದಪತ್ರವನ್ನು ಓದಲಾಯಿತು. ಅದರ ಒಕ್ಕಣೆ ಹೀಗಿದೆ—

"ಕ್ಷೇಮ ಶ್ರೀ

ಚಿ॥ ವಿಷ್ಣುತೀರ್ಥನಿಗೆ ಅನಂತ ಆಶೀರ್ವಾದಗಳು. ನಿನ್ನ ೭೯ ವರುಷದ ಹುಟ್ಟಿದ ಹಬ್ಬ ಅಂತ ತಿಳಿಯಿತು. ದೇವರು ನಿನಗೆ ಆಯುರಾರೋಗ್ಯ ಅಭಿವೃದ್ಧಿ ಕೊಟ್ಟು ಚೆನ್ನಾಗಿ ಕಾಪಾಡಲಿ. 'ವಾಸುದೇವಪದಸಂತತಸಂಗೀ' ಯಲ್ಲಿ ನೀನು ಬರೆದಿರುವ ಗುರುಮಂತ್ರ ಬಹಳ ಚೆನ್ನಾಗಿದೆ ; ಮತ್ತು ಗೀತಾಸಾರ, ನಾರಾಯಣಸ್ಮರಣೆಯೆಲ್ಲವೂ ಚೆನ್ನಾಗಿದೆ. ನೀನು ಬರೆದಿರುವ ವಾಯುಸ್ತುತಿಯಂತೂ ಇನ್ನೂ ಚೆನ್ನಾಗಿದೆ. ನಾನು ಅದನ್ನು ನಿತ್ಯ ಓದಿಕೊಳ್ಳುತ್ತಿದ್ದೇನೆ. ನಿನ್ನನ್ನು ಪಡೆದ ತಾಯಿ ತಂದೆಯರು ಬಲು ಪುಣ್ಯ

ವಂತರಪ್ಪ. ನಿನ್ನಿಂದ ನಮ್ಮ ವಂಶವು ಪವಿತ್ರವಾಗಿದೆ. ನಿನ್ನ ಜೀವನಚರಿತ್ರೆಯನ್ನು ಓದಿದೆ. ನೀನು ಯಾವಾಗ ಈ ಕಡೆ ಬರುವುದು ? ದೇವರು ನಿನಗೆ ಆಯುರಾರೋಗ್ಯ ಕೊಟ್ಟು ಚೆನ್ನಾಗಿ ಕಾಪಾಡಲಿ. ಕಾಗದ ಬರೆಯುತ್ತಾ ಇರಪ್ಪ. ಇಂತಿ ಆಶೀರ್ವಾದಗಳು. ನೀನು ಈ ಊರಿಗೆ ಬಂದಾಗ ನಮ್ಮ ಮನೆಗೂ ಖಂಡಿತ ಬರಬೇಕು."

ಮೇಲೆ ನಿರೂಪಿಸಿದ ನಾಲ್ಕು ದಿನಗಳ ಕಾರ್ಯಕ್ರಮಗಳಲ್ಲೂ ಬೆಂಗಳೂರಿಂದ ಸೇವಾರ್ಥವಾಗಿ ಬಂದಿದ್ದ ಶ್ರೀಮತಿ ಇಂದಿರಮ್ಮ ಮತ್ತು ಸಂಗಡಿಗರು ಪೂಜಾ ಕಾಲದಲ್ಲೂ, ರಾತ್ರಿ ವೇಳೆಯಲ್ಲೂ ತಾರತಮ್ಯಾನುಸಾರವಾಗಿ, ಆರೋಹಣ-ಅವರೋಹಣ ಕ್ರಮಗಳನ್ನನುಸರಿಸಿ ದೇವರನಾಮಗಳನ್ನು ಸುಶ್ರಾವ್ಯವಾಗಿ ಹಾಡಿದ್ದು ಯಾತ್ರಿಕವೃಂದದವರೆಲ್ಲರಿಂದಲೂ ಮೆಚ್ಚುಗೆ ಪಡೆಯಿತು.

ಮೇಲೆ ನಮೂದಿಸಿದ ಮಾದಿನೂರಿನ ವಿಷ್ಣುತೀರ್ಥಸ್ವಾಮಿಗಳು ೧೯ನೇ ಶತಮಾನದಲ್ಲಿ ಟೀಕಾಚಾರ್ಯರಾದ ಶ್ರೀ ಜಯತೀರ್ಥರ ಅನುಗ್ರಹಕ್ಕೆ ಪಾತ್ರರಾಗಿದ್ದ ಒಬ್ಬ ಅವಧೂತ ಸಂನ್ಯಾಸಿಗಳು. ಅವರು ಮಧ್ವಶಾಸ್ತ್ರಸಂಪನ್ನರಾಗಿದ್ದುದಲ್ಲದೆ ನೂರಾರು ಶಿಷ್ಯರಿಗೆ ಉಪದೇಶ ಮಾಡಿ ಪಾಠಪ್ರವಚನಗಳನ್ನು ಹೇಳಿಕೊಟ್ಟು "ಭಾಗವತಸಾರೋದ್ಧಾರ"ವೇ ಮೊದಲಾದ ಅನೇಕ ಅಮೂಲ್ಯಗ್ರಂಥಗಳನ್ನೂ ಸಂಸ್ಕೃತದಲ್ಲಿ ಬರೆದು ಹೆಸರುವಾಸಿಯಾದ ಯೋಗಿಗಳು. ಆದುದರಿಂದ ಅಂಥ ಮಹನೀಯರ ವೃಂದಾವನಕ್ಕೂ ತೀರ್ಥರ ಯಾತ್ರಿಕತಂಡ ಅಂದು ಹೋಗಿ ಬಂದುದು ಸಾರ್ಥಕವೇ ಆಯಿತು.

ಈ ನಾಲ್ಕು ದಿನಗಳ ವಿಶಿಷ್ಟ ಕಾರ್ಯಕ್ರಮಗಳೆಲ್ಲಾ ಮುಗಿದಮೇಲೆ ವಿಷ್ಣುತೀರ್ಥರು ಒಂದು ತಿಂಗಳವರೆಟ್ಟಿಗೆ ಬೊಂಬಾಯಿಗೆ ಹೋಗುವ ಏರ್ಪಾಟು ಮಾಡಿಕೊಂಡಿದ್ದರು. ಆದರೆ ಶ್ರೀಮತಿ ಶೃಂಗಾರಮ್ಮನವರಿಂದ ಮೇಲೆ ನಿರೂಪಿಸಿದ ಆಶೀರ್ವಾದಪತ್ರದೊಡನೆಯೇ ಬಂದಿದ್ದ ಇನ್ನೊಂದು ತುರತು ಕರೆಗೆ ಓಗೊಟ್ಟು ಅವರು ತಮ್ಮ ಬೊಂಬಾಯಿಯ ಪ್ರಯಾಣವನ್ನು ಮುಂದಕ್ಕೆ ಹಾಕಿ ಬೆಂಗಳೂರಿಗೆ ಬಂದು ಚಿಕ್ಕಮ್ಮನವರ ಭೇಟಿ ಮಾಡಿದರು. ಅವರ ದೇಹಸ್ಥಿತಿಯಲ್ಲಿ ಏರುಪೇರುಗಳಾಗಿದ್ದುದು ತಿಳಿಯಬಂತು. ತೀರ್ಥರನ್ನು ನೋಡಿ ಅವರು ತುಂಬಾ ಸಂತೋಷಪಟ್ಟರು. ಇದಾದ ಕೆಲವೇ ದಿನಗಳಲ್ಲಿ ಅವರು (ಶೃಂಗಾರಮ್ಮ) ತಾ|| ೨೧-೩-೧೯೯೧ರಂದು ಗುರುವಾರ ಜಯನಗರದ ರಾಮಮಂದಿರದಲ್ಲಿ ರಾಮದೇವರಿಗೆ ಸಹಸ್ರಭಕ್ಷ್ಯಗಳ ನೈವೇದ್ಯಸಮರ್ಪಣೆ ಮಾಡಿಸಿ ಸಹಸ್ರಾರು ಜನರಿಗೆ ಭೋಜನ ಸಂತರ್ಪಣೆ ನಡೆಸಿದ ನಂತರ ವಿಷ್ಣುತೀರ್ಥರೊಂದಿಗೆ ಸಂಭಾಷಣೆ ನಡೆಸಿ

ಅವರಿಗೆ ಖುದ್ದಾಗಿ ಕಡೆಯ ಆಶೀರ್ವಾದವನ್ನೂ ಮಾಡಿ, ಅದೇ ದಿನ ಬೆಳಗಿನ ಝಾವವೇ ಪರಮಾತ್ಮನ ಪಾದಾರವಿಂದವನ್ನು ಸೇರಿದರು. ಅನಂತರ ವಿಷ್ಣುತೀರ್ಥರು ಅವರ ಉತ್ತರಕ್ರಿಯೆಗಳಲ್ಲಿ ಭಾಗವಹಿಸಿ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು. ಅದಾದ ಕೆಲವು ದಿನಗಳ ನಂತರ ಅವರು ಬೊಂಬಾಯಿಗೆ ತೆರಳಿದರು.

ವಿಷ್ಣುತೀರ್ಥರ ಅನಾರೋಗ್ಯ

ತೀರ್ಥರು ಬೊಂಬಾಯಿಗೆ ಹೋಗುವುದಕ್ಕೆ ಮುಂಚೆಯೇ ಸುಮಾರು ಒಂದು ವರ್ಷದಿಂದ ಅವರ ದೇಹಸ್ಥಿತಿ ಕೆಟ್ಟಿತ್ತು. ಮೊದಲಾಗಿ ಅವರಿಗೆ ಚರ್ಮ ಸಂಬಂಧವಾದ ವಿರೋಧ ಪ್ರತಿಕ್ರಿಯೆ (Skin Allergy) ಇದ್ದುದರಿಂದ ಯಾವ ಔಷಧಿಗಳೂ ಹಿಡಿಯುತ್ತಿರಲಿಲ್ಲ. ಆಗ ಅವರ ತಮ್ಮನ ಅಳಿಯಂದಿರೂ ಚರ್ಮ ರೋಗತಜ್ಞರೂ ಬೆಂಗಳೂರಿನ ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರೂ ಆದ ಡಾ॥ ಡಿ. ಎ. ಸತೀಶ್ M.D ಅವರು ತೀರ್ಥರನ್ನು ಅವರ ಕಾಲೇಜಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅವರ ಶರೀರವನ್ನು ಕೂಲಂಕಷವಾಗಿ ಕ್ಷ ಕಿರಣ ಪರಿಶೀಲನೆ ನಡೆಸಿದಾಗ ಅವರಿಗೆ ಶ್ವಾಸಕೋಶದ ಕ್ಷಯ (Tuberculosis) ಬಂದಿದೆಯೆಂದು ಗೊತ್ತಾಯಿತು, ತಕ್ಷಣ ಅವರು, ಅವರ ಪತ್ನಿ ಡಾ॥ ಪಿ. ಲಕ್ಷ್ಮೀ, M.B B.S , M.S. ಇಬ್ಬರೂ ಸಮಾಲೋಚಿಸಿ ತೀರ್ಥರಿಗೆ ರಾಮಯ್ಯ ಕಾಲೇಜಿನ ದಕ್ಷ ವೈದ್ಯರಿಂದಲೇ ಸೂಕ್ತವಾದ ಔಷಧಿಗಳನ್ನು ಕೊಡಿಸಿದರು. ಅಲ್ಲದೆ ಅಮೇರಿಕಾದಿಂದ ಬಂದಿದ್ದ ಡಾ॥ ಸಂಪತ್ ಮತ್ತು ಡಾ॥ ಜಯಲಕ್ಷ್ಮಿ ಸಹ ಅವರನ್ನು ಪರೀಕ್ಷಿಸಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರಲ್ಲದೆ ಅವರಿಗೆ ಶಕ್ತಿದಾಯಕವಾದ ಬಗೆಬಗೆಯ ಗುಳಿಗೆಗಳನ್ನೂ ಸಿದ್ಧಪಡಿಸಿದ ಚುರುಕಿನ ಉಪಹಾರ ಪೊಟ್ಟಣ (Smart Snacks)ಗಳನ್ನೂ ಕೊಟ್ಟರು. ಬೊಂಬಾಯಿಗೆ ಹೋದಾಗಲೂ ತೀರ್ಥರನ್ನು ಕೆಲವು ಪರಿಣತ ವೈದ್ಯರು ಮತ್ತೊಮ್ಮೆ ಪರೀಕ್ಷಿಸಿ, ಬೆಂಗಳೂರಿನ ವೈದ್ಯರುಗಳು ಕೊಟ್ಟ ಔಷಧಿ, ಟಾನಿಕ್, ಆಹಾರ ಮುಂತಾದವುಗಳೇ ಸರ್ವೋತ್ಕೃಷ್ಟವಾದುವೆಂದು ಹೇಳಿ ಅವನ್ನೇ ಮುಂದುವರೆಸುತ್ತಾ ಎಲ್ಲಾದರೂ ಒಂದೇ ಕಡೆ ಇದ್ದು ಪೂರ್ಣವಿಶ್ರಾಂತಿ ಪಡೆಯಬೇಕೆಂದು ವಿಧಿಸಿದರು. ಆದ್ದರಿಂದ ತೀರ್ಥರು ಬೆಂಗಳೂರಿಗೆ ಕ್ಷಿಪ್ರವಾಗಿ ಹಿಂತಿರುಗಿ ಬರಬೇಕಾಯಿತು.

ಈ ಸಂದರ್ಭದಲ್ಲಿ ಫಿಲಡೆಲ್ಫಿಯಾದಲ್ಲಿ ಡಾ॥ ಜಯಲಕ್ಷ್ಮಿ ತಾ॥ ೮–೫–೧೯೯೧ರಂದು ವಿಷ್ಣುತೀರ್ಥರಿಗೆ ಬರೆದ ಒಂದು ಪತ್ರದ ಕೆಲವು ವಾಕ್ಯಗಳನ್ನು

ಓದುಗರ ಮುಂದೆ ನಿರೂಪಿಸಿ ಈ ಲೇಖನವನ್ನು ಸಮಾಪ್ತಿಗೊಳಿಸುತ್ತೇನೆ.

"Dear brother,

Received your letter.... I am glad that you have made up your mind to stay at one place, resting and nourshing yourself. Please do take protein powder with nutrients we have given you........ Ammanna's soul is directing me to do my best to take care of your health—as you are so dear not only to Ammanna, not only to us and Yamuna, but to hundreds of people. You are one of our treasure. We feel that it is our duty to protect that triasure.......

Affectionately yours, Jaya"

ವಿಷ್ಣುತೀರ್ಥರ ಪ್ರಕಟಿತ ಗ್ರಂಥಗಳು

೧. **ಪಂಪಾಮಾಹಾತ್ಮ್ಯ** (ಸ್ಕಾಂದಪುರಾಣದ ಹೇಮಕೂಟಖಂಡದ ಕನ್ನಡ ಸಂಗ್ರಹಾನುವಾದ) ಪ್ರಥಮ ಮುದ್ರಣ ೧೯೬೪ viii+೨೫೨ ಪುಟಗಳು. (ಪ್ರತಿಗಳು ಮಾಗಿದಿವೆ, ದ್ವಿತೀಯ ಮುದ್ರಣ ಯೋಜನೆಯಲ್ಲಿದೆ)

೨. **ಹಂಪೆ ವಿಜಯನಗರ ಮತ್ತು ಕಿಷ್ಕಿಂಧಾನಗರಗಳ ಕೈಪಿಡಿ** ಹಂಪೆ ಮತ್ತು ವಿಜಯನಗರದ ಅವಶೇಷಗಳ ಮಾರ್ಗದರ್ಶನ, (ನಾಲ್ಕನೇ ಮುದ್ರಣ ಮುಗಿದಿದೆ. ಪಂಚಮ ಸಂಸ್ಕರಣ ಯೋಜನೆಯಲ್ಲಿದೆ)

೩. **ಯಂತ್ರೋದ್ಧಾರಕರು** ಮತ್ತು **ನವವೃಂದಾವನ (ವಿಸ್ತೃತ ಪರಿಚಯ)** ೨೮ ಪುಟಗಳು. (ಪ್ರತಿಗಳು ಮುಗಿದಿವೆ, ಪುನರ್ಮುದ್ರಣವಾಗಲಿದೆ)

೪. **ಶ್ರೀ ಹರಿವಾಯುಸ್ತುತಿಯ ವಿಸ್ತಾರವಾದ ವ್ಯಾಖ್ಯಾನ** (ನಾಲ್ಕು ಭಾಗಗಳಲ್ಲಿ)

ಭಾಗ ೧ **ನಖಸ್ತುತಿ**—೩೫೦ ಪುಟಗಳು (ಮುಗಿದಿದೆ).

ಭಾಗ ೨ **ವಾಯುಸ್ತುತಿಯ ಮೊದಲ ಇಪ್ಪತ್ತೊಂದು ಶ್ಲೋಕಗಳು**—೪೫೦ ಪುಟಗಳು ರೂ. ೬೦

ಭಾಗ ೩ **ವಾಯುಸ್ತುತಿಯ ಕಡೆಯ ಇಪ್ಪತ್ತು ಶ್ಲೋಕಗಳು** (ಭೀಮ ಮತ್ತು ಮಧ್ವಾವತಾರ)–೪೦೦ ಪುಟಗಳು ರೂ. ೬೦

ಭಾಗ ೪ **ಖಿಲವಾಯುಸ್ತುತಿ** ಮತ್ತು **ಬಳಿತ್ಥಾಸೂಕ್ತದ ಅರ್ಥ**—೨೦೦ ಪುಟಗಳು ರೂ. ೨೫

೫. **ನರಸಿಂಹ, ದುರ್ಗಾ** ಮತ್ತು **ಧನ್ವಂತರಿ ಸುಳಾದಿ** (ಚಿಕ್ಕ ಆಕಾರದಲ್ಲಿ) ಕನ್ನಡ ಲಿಪಿಯಲ್ಲಿ ರೂ. ೨

ದೇವನಾಗರಿ ಲಿಪಿಯಲ್ಲಿ ರೂ. ೩

೬. **ಮುನಿತ್ರಯ ಸುಳಾದಿ** (ವಿಜಯದಾಸರಚಿತ ಶ್ರೀಪಾದರಾಯರ ಸುಳಾದಿ, ಪುರಂದರದಾಸರಚಿತ ವ್ಯಾಸರಾಯರ ಸುಳಾದಿ ಮತ್ತು ಗೋಪಾಲದಾಸರಚಿತ ರಾಘವೇಂದ್ರ ಸುಳಾದಿ) ಕನ್ನಡ ಲಿಪಿ ರೂ, ೨

ದೇವನಾಗರಿ ಲಿಪಿ ರೂ. ೨

೭. **ಪಂಚಮುಖಿ ಹನುಮತ್ಕವಚ-ಸ್ತೋತ್ರ** ಮತ್ತು **ಮುಖ್ಯ ಪ್ರಾಣಾಭಿಷೇಕಾದಿಗಳು** ಕ್ರೌನ್ ೧/೧೬ ೮೦ ಪುಟಗಳು ರೂ. ೨

೮. **ಯಜ್ಞೋಪವೀತ ಸಂಸ್ಕಾರವಿಧಿ** ರೂ. ೨

೯. **ಕೇಶವಾದಿ ಚತುರ್ವಿಂಶತಿಮೂರ್ತಿಗಳು**
(ಚಿತ್ರ ಮತ್ತು ವಿವರಣೆ ಸಹಿತ) ಬೆಲೆ ರೂ. ೨

೧೦. **ಸರ್ವಸಮರ್ಪಣ ಗದ್ಯ,** ಶ್ರೀ ರಾಘವೇಂದ್ರ ತೀರ್ಥ ವಿರಚಿತ (ವಿಸ್ತೃತ ವಿವರಣೆಗಳೊಡನೆ) ರೂ. ೮

ಇವು ಸಿಗುವ ಸ್ಥಳ:

೧. **ಪಿ. ವ್ಯಾಸತೀರ್ಥ,** ನವವೃಂದಾವನ, ೯೩೧, ೨ನೇ ಬೀದಿ, ೪ನೇ ಬ್ಲಾಕ್, ರಾಜಾಜಿನಗರ, **ಬೆಂಗಳೂರು** ೫೬೦ ೦೧೦ (ಫೋನ್ ನಂ. ೪೫೦೪೯೧)

೨. **ಪಿ. ಎಲ್. ನಾರಾಯಣಶೆಟ್ಟಿ,** ಬಾಲಾಜಿ ಕಾಫಿ ವರ್ಕ್ಸ್, ಕಾಲೇಜು ರಸ್ತೆ, **ಹೊಸಪೇಟೆ** ೫೮೩ ೨೦೧

೩. **ವೇದಾಂತ ಬುಕ್ ಹೌಸ್,** (ಉಮಾ ಟಾಕೀಸ್ ಹತ್ತಿರ), ೬ನೇ ಬೀದಿ, ಚಾಮರಾಜಪೇಟೆ, **ಬೆಂಗಳೂರು** ೫೬೦ ೦೧೮ (ಫೋನ್ ೬೦೭೪೯೦)

ಮುದ್ರಣಕ್ಕೆ ಸಿದ್ಧವಾಗಿರುವ ಗ್ರಂಥ

ಪುರುಷಸೂಕ್ತ ವ್ಯಾಖ್ಯಾನ

ರಾಘವೇಂದ್ರತೀರ್ಥರ ಮತ್ತು ಸತ್ಯಸಂಧತೀರ್ಥರ ಸಂಸ್ಕೃತ ವ್ಯಾಖ್ಯಾನ
ಮತ್ತು ಸಾಯಣಭಾಷ್ಯ (ಕನ್ನಡ ಲಿಪಿಯಲ್ಲಿ)
ವಾದಿರಾಜರ, ಸತ್ಯಾಭಿನವ ತೀರ್ಥರ ಮತ್ತು ಅಜ್ಞಾತಕರ್ತೃಕ
ವ್ಯಾಖ್ಯಾನಗಳ ಮುಖ್ಯಾಂಶಗಳೊಡನೆ
ಮಹಾಮಹೋಪಾಧ್ಯಾಯ ಶ್ರೀಮುಷ್ಣ ಸೇತುಮಾಧವಾಚಾರ್ಯರ
ಅರ್ಥತಾತ್ಪರ್ಯಗಳು ಮತ್ತು ಕನ್ನಡ ವಿವರಣೆಗಳೊಂದಿಗೆ
ಡೆಮ್ಮೈ ಅಷ್ಟಪತ್ರದಲ್ಲಿ ಸುಮಾರು ೪೫೦ ಪುಟಗಳಷ್ಟು ಆಗಬಹುದು.

ಮೊದಲನೆಯ ಮುದ್ರಣ : ಮೇ ೧೯೯೩
ಬೆಲೆ : ಇಪ್ಪತ್ತು ರೂಪಾಯಿ